ಸಂಪುಟ: 04 ಸಂಚಿಕೆ: 330 ಪುಟಗಳು: 08 ಮಂಗಳವಾರ 11 ಫೆಬ್ರವರಿ 2025
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
9448225696 +91 8035841833 ₹5

ಮುಂಜಾನೆ ಮಾತು
ನೀವು ನೀವಾಗೇ ಇರಿ, ನಿಮ್ಮನ್ನು ನಿಜವಾಗಿ ಇಷ್ಟಪಡುವವರು ನೀವು ಹೇಗಿದ್ದರೂ ನಿಮ್ಮನ್ನು ಇಷ್ಟಪಡುತ್ತಾರೆ.

ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

ರಾಜ್ಯದ ಜನರಿಗೆ ತಟ್ಟುತ್ತಾ ಮತ್ತೊಂದು ದರ ಏರಿಕೆ ಬಿಸಿ!

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ದರ ಏರಿಕೆ ಬಿಸಿ ದಿನೇ ದಿನೇ ಹೆಚ್ಚಾಗುತ್ತಿದೆ. ಅತ್ತ ಬಸ್, ಮೆಟ್ರೋ ದರ ಏರಿಕೆಯಿಂದಾಗಿ ಜನ ಈಗಾಗಲೇ ಕಂಗಾಲಾಗಿ ಹೋಗಿದ್ದಾರೆ. ಅಲ್ಲದೇ ಕಳೆದ ಬಾರಿ ಹಾಲಿನ ದರದಲ್ಲಿ ಕೆಎಂಎಫ್ ಪರಿಷ್ಕರಣೆ ಮಾಡಿತ್ತು. ಇದೀಗ ಮತ್ತೆ ರಾಜ್ಯದ ಜನರು ಶಾಕ್ ಎದುರಾಗುತ್ತಾ ಎಂದು ಕಾದು ನೋಡಬೇಕಿದೆ.

ಏಕೆಂದರೆ ರೈತರಿಗೆ ನೀಡುವ ಹಾಲಿನ ದರ ಹೆಚ್ಚಿಸುವಂತೆ ಅನ್ನದಾತರು ಬೃಹತ್ ಪ್ರತಿಭಟನೆ ಕೈಗೊಂಡಿದ್ದಾರೆ. ಈ ವೇಳೆ ದರ ಏರಿಕೆ ಮಾತ್ರವಲ್ಲದೆ, ಅನೇಕ ಬೇಡಿಕೆಗಳನ್ನು ಕೆಎಂಎಫ್ ಮುಂದಿಟ್ಟಿದ್ದಾರೆ.

ಕಳೆದ ಬಾರಿ ಕೆಎಂಎಫ್ ಹಾಲಿನ ದರ ಏರಿಕೆ ಮಾಡುವ ಮೂಲಕ ರಾಜ್ಯದ ಜನರಿಗೆ ಶಾಕ್ ನೀಡಿತ್ತು. ಆದ್ರೆ ಇದೀಗ ರಾಜ್ಯ ಬೆಲೆ ಏರಿಕೆ ಮಾಡಿದ್ರೂ ರೈತರಿಗೆ ನೀಡುವ ಹಾಲಿನ ದರ ಏರಿಕೆ ಮಾಡಿಲ್ಲ. ಆದ್ದರಿಂದ ಈ ದರ ಹೆಚ್ಚಿಸುವಂತೆ ರೈತರು ಪ್ರತಿಭಟನೆ ಮಾಡಿದ್ದಾರೆ. ಡೈರಿ ಸರ್ಕಲ್ ಬಳಿಯ ಕೆಎಂಎಫ್ ಕೇಂದ್ರ ಕಚೇರಿ ಮುಂಭಾಗದಲ್ಲಿ ನೂರಾರು ಸಂಖ್ಯೆಯಲ್ಲಿ ಸೇರಿರುವ ರೈತರಿಗೆ ಹಾಲಿನ ದರ ಏರಿಕೆಗೆ ಧರಣಿ ನಡೆಸಿದ್ದು, ಪ್ರತಿ ಲೀಟರ್ ಗೆ ಹಾಲಿನ ದರ ಕನಿಷ್ಠ 50 ರೂ.ಗೆ ಏರಿಸುವಂತೆ ಆಗ್ರಹಿಸಿದ್ದಾರೆ.

ಫೆ.22ರಂದು ನಿಗದಿಯಾಗಿದ್ದ ಕನ್ನಡ ಭಾಷಾ ಪರೀಕ್ಷೆ ಮುಂದೂಡಿಕೆ

• ಉದಯವಾಹಿನಿ, ಬೆಂಗಳೂರು

2024ರ ಮಾರ್ಚ್ 13ರಂದು ಅಧಿಸೂಚನೆ ಹೊರಡಿಸಲಾಗಿದ್ದ ವಿವಿಧ ಇಲಾಖೆಗಳಲ್ಲಿನ ಗ್ರೂಪ್ ಬಿ 50 ಹೈದ್ರಾಬಾದ್ ಕರ್ನಾಟಕ ವೃಂದದ ಹುದ್ದೆಗಳಿಗೆ ಫೆ.22ರಂದು ನಿಗದಿಯಾಗಿದ್ದ ಕನ್ನಡ ಭಾಷಾ ಪರೀಕ್ಷೆಯನ್ನು ಮುಂದೂಡಲಾಗಿದೆ ಎಂದು ಕೆಪಿಎಸ್ಸಿ ಕಾರ್ಯದರ್ಶಿ ರಣದೀಪ್ ಚೌಧರಿ ತಿಳಿಸಿದ್ದಾರೆ. ಈ ಕುರಿತು ಪ್ರಕಟಣೆ ನೀಡಿದ ಅವರು, ಇತ್ತೀಚೆಗೆ ನಡೆದ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಹುದ್ದೆಗಳ ಕನ್ನಡ ಭಾಷಾ ಪರೀಕ್ಷೆಗೆ ಲಕ್ಷಾಂತರ ಅಭ್ಯರ್ಥಿಗಳು ಹಾಜರಾಗಿದ್ದು, ಅದರ ಫಲಿತಾಂಶವು ಶೀಘ್ರದಲ್ಲಿಯೇ ಪ್ರಕಟವಾಗಲಿದೆ. ಆ ಪರೀಕ್ಷೆಗಳಿಗೆ ಹಾಜರಾಗಿದ್ದ ಹಲವು ಅಭ್ಯರ್ಥಿಗಳು ಪ್ರಸ್ತುತ ಪರೀಕ್ಷೆಗಳಿಗೂ ಸಹ ಅಭ್ಯರ್ಥಿಗಳಾಗಿದ್ದು ಅವರು ಮತ್ತೊಮ್ಮೆ ಕನ್ನಡ ಭಾಷಾ ಪರೀಕ್ಷೆಯನ್ನು ಬರೆಯುವುದರಿಂದ ಆಯೋಗಕ್ಕೆ ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಹೆಚ್ಚಿನ ಹೊರೆಯಾಗುವುದಲ್ಲದೆ ಅಭ್ಯರ್ಥಿಗಳಿಗೂ ಸಹ ಹೊರೆಯಾಗಲಿದೆ. ಆದ್ದರಿಂದ ಫೆ.22ರಂದು ನಿಗದಿಯಾಗಿದ್ದ ಕನ್ನಡ ಭಾಷಾ ಪರೀಕ್ಷೆಯನ್ನು ಮಾತ್ರ ಮುಂದೂಡಲಾಗಿದ್ದು, ಇತರ ಪತ್ರಿಕೆಗಳ ಪರೀಕ್ಷೆಗಳನ್ನು ಈಗಾಗಲೇ ನಿಗದಿಪಡಿಸಿರುವ ವೇಳಾಪಟ್ಟಿಯಂತೆಯೇ ನಡೆಸಲಾಗುವುದು ಎಂದು ಮಾಹಿತಿ ನೀಡಿದ್ದಾರೆ. ಕನ್ನಡ ಭಾಷಾ ಪರೀಕ್ಷೆಯ ಪರಿಷ್ಕೃತ ದಿನಾಂಕವನ್ನು ಪಂಚಾಯತ್ ಅಭಿವೃದ್ಧಿ ಅಧಿಕಾರಿ ಹುದ್ದೆಗಳಿಗೆ ನಡೆಸಿರುವ ಕನ್ನಡ ಭಾಷಾ ಪರೀಕ್ಷೆಯ ಫಲಿತಾಂಶ ಪ್ರಕಟವಾದ ನಂತರ ನಿಗದಿಪಡಿಸಲಾಗುವುದು ಎಂದು ತಿಳಿಸಿದ್ದಾರೆ.

ಗ್ಯಾರಂಟಿ ಯೋಜನೆಗಳು ಸಾಕು, ಪ್ರಣಾಳಿಕೆಯತ್ತ ಗಮನ ಹರಿಸಿ

• ಉದಯವಾಹಿನಿ, ಬೆಂಗಳೂರು

ರಾಜ್ಯ ಕಾಂಗ್ರೇಸ್ ಸರ್ಕಾರದ ಮಹತ್ವಾಕಾಂಕ್ಷೆಯ ಗ್ಯಾರಂಟಿ ಯೋಜನೆಗಳ ವಿರುದ್ಧ ಸ್ವಪಕ್ಷೀಯರೇ ಅಸಮಾಧಾನಗಳನ್ನು ಹೊರಹಾಕುತ್ತಿರುವುದು ಮುಂದುವರೆದಿದೆ. ಮೇಲ್ಮನೆ ಸದಸ್ಯರೂ ಆಗಿರುವ ಪಕ್ಷದ ಹಿರಿಯ ಮುಖಂಡ ಬಿ.ಕೆ. ಹರಿಪ್ರಸಾದ್ ಕೂಡ ಗ್ಯಾರಂಟಿ ಯೋಜನೆ ಮೇಲೆ ಮಾತ್ರ ಗಮನಹರಿಸುವುದನ್ನು ಬಿಟ್ಟು ಪ್ರಣಾಳಿಕೆಯ ಭರವಸೆಗಳನ್ನೂ ಜಾರಿಗೆ ತರುವಂತೆ ಒತ್ತಾಯಿಸಿದ್ದಾರೆ. ದೆಹಲಿ ಚುನಾವಣೆ ಫಲಿತಾಂಶ ಕುರಿತು ಪ್ರತಿಕ್ರಿಯೆ ನೀಡಿರುವ ಅವರು, ಕರ್ನಾಟಕದಲ್ಲಿ ಗ್ಯಾರಂಟಿಯಲ್ಲಿ ಮುಳುಗಿರುವುದು ಸಾಕು. ಗ್ಯಾರಂಟಿ ಒಂದು ಕಡೆ ಇರಲಿ, ಅದು ತಪ್ಪಲ್ಲ, ಆದರೆ, ಅದರಲ್ಲೇ ಮುಳುಗಿದರೆ ಆಗುವುದಿಲ್ಲ, ಚುನಾವಣೆ ವೇಳೆ ಪ್ರಕಟಿಸಿದ ಪ್ರಣಾಳಿಕೆಯ ಭರವಸೆಗಳನ್ನೂ ಜಾರಿಗೆ ತರಬೇಕೆಂದು ಎಂದು ಸಲಹೆ ನೀಡಿದರು. ಕೇಂದ್ರ ಸರ್ಕಾರ ಎಪಿಎಂಸಿ ಕಾಯ್ದೆ ಹಿಂಪಡೆದಿದೆ. ಆದರೆ, ನಾವಿನ್ನೂ ಹಿಂಪಡೆದಿಲ್ಲ. ಈ ಕುರಿತು ಕೂಡಲೇ ಆ ಕೆಲಸ ಮಾಡಬೇಕು, ಮತಾಂತರ ನಿಷೇಧ ಕಾಯ್ದೆಯನ್ನು ಬಿಜೆಪಿ ಕಾನೂನುಬಾಹಿರವಾಗಿ ಮಾಡಿತ್ತು. ಅದನ್ನು ನಾವು ಹಿಂಪಡೆಯಬೇಕು. ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಸಂಘ-ಪರಿವಾರದವರೇ ಇದ್ದಾರೆ. ಅದನ್ನು ಬದಲಾಯಿಸಬೇಕು. ಜಾತಿ ಗಣತಿ ವರದಿ ಜಾರಿ ಮಾಡಬೇಕು.

ಇವುಗಳನ್ನು ಅನುಷ್ಠಾನಕ್ಕೆ ತರದೇ ಇದ್ದರೆ ಮುಂದೆ ನಮಗೆ ಕಷ್ಟ ಆಗಲಿದೆ. ನಮ್ಮ ಪ್ರಣಾಳಿಕೆಯಲ್ಲಿ ಕೊಟ್ಟ ಭರವಸೆಗಳು ಇವು. ಕೃಷಿ, ಸಾಮಾಜಿಕ, ಶೈಕ್ಷಣಿಕ ಅಭಿವೃದ್ಧಿ ಬಗ್ಗೆ ಪ್ರಣಾಳಿಕೆಯಲ್ಲಿ ಕೊಟ್ಟ ಭರವಸೆಗಳನ್ನು ಆದಷ್ಟು ಬೇಗ ಈಡೇರಿಸಿದರೆ ಮಾತ್ರ ಪಕ್ಷಕ್ಕೆ ಒಳ್ಳೆಯದಾಗಲು ಸಾಧ್ಯ ಎಂದು ಎಚ್ಚರಿಸಿದರು.

ಪೊಲೀಸ್ ಸಿಬ್ಬಂದಿಗೆ ನೀಡಿದ್ದ ಊಟದಲ್ಲಿ ಮತ್ತೆ ಹುಳ ಪತ್ತೆ!

• ಉದಯವಾಹಿನಿ, ಬೆಂಗಳೂರು

ಯಲಹಂಕ ವಾಯುನೆಲೆಯಲ್ಲಿ ಏರೋ ಇಂಡಿಯಾ ಏರ್ ಶೋ ನಡೆಯುತ್ತಿದ್ದು, ಭದ್ರತೆ ನಿಯೋಜಿಸಿದ್ದ ಪೊಲೀಸ್ ಸಿಬ್ಬಂದಿಗಳಿಗೆ ನೀಡಿದ್ದ ಊಟದಲ್ಲಿ ಮತ್ತೆ ಹುಳ ಪತ್ತೆಯಾಗಿದೆ. ಏರ್ ಶೋ ರಿಹರ್ಸಲ್ ಗೆ ನಿನ್ನೆ ಬಂದಿದ್ದ ಪೊಲೀಸ್ ಸಿಬ್ಬಂದಿಗೆ ನೀಡಿದ್ದ ಊಟದಲ್ಲಿ ಜಿರಳೆ ಪತ್ತೆಯಾಗಿತ್ತು. ಗುಣಮಟ್ಟ, ಸ್ವಚ್ಛತೆ ಇಲ್ಲದ ಆಹಾರ ಪೂರೈಕೆಯಾಗಿರುವುದಕ್ಕೆ ಪೊಲೀಸರು ಬೇಸರ ವ್ಯಕ್ತಪಡಿಸಿದ್ದರು. ಇದೀಗ ಮಧ್ಯಾಹ್ನ ಪೊಲೀಸ್ ಸಿಬ್ಬಂದಿಗಳಿಗೆ ನೀಡಿದ್ದ ಊಟದಲ್ಲಿಯೂ ಹುಳ ಪತ್ತೆಯಾಗಿದ್ದು, ಗುಣಮಟ್ಟದ ಬಗ್ಗೆ, ಮತ್ತೆ ಮತ್ತೆ ಪ್ರಶ್ನೆ ಮೂಡುವಂತೆ ಮಾಡಿದೆ. ಭದ್ರತೆಗೆ ನಿಯೋಜಿಸಿದ ಪೊಲೀಸ್ ಸಿಬ್ಬಂದಿಗೆ ನೀಡಿದ್ದ ಊಟದ ಜೊತೆಗಿನ ಸಿಹಿ ತಿನಿಸಿನಲ್ಲಿ ಹುಳ ಪತ್ತೆಯಾಗಿದೆ ಎಂದು ತಿಳಿದುಬಂದಿದೆ. ನಿನ್ನೆಯಷ್ಟೇ ಗುಣಮಟ್ಟದ ಆಹಾರ ಪೂರೈಸುವಂತೆ ಕಮಿಷನರ್ ಸೂಚಿಸಿದ್ದರು.

ಹೈಕಮಾಂಡ್ ಬುಲಾವ್ ಯ್ಯಾರಿಗೆ ಪಲಾವ್?

ಬಿಜೆಪಿ ಬಿಕ್ಕಟ್ಟು ಶಮನಕ್ಕೆ ಮುಂದಾದ ವರಿಷ್ಠರು

ದೆಹಲಿಗೆ ತೆರಳಿದ ವಿಜಯೇಂದ್ರ ಸೋಮಣ್ಣ ಮನೆ ಪೂಜೆ ನೆಪದಲ್ಲಿ ದೆಹಲಿ ಸೇರಿದ ಯತ್ನಾಳ್...!

ನಮಗಾದ ಅಪಮಾನಕ್ಕೆ ನೇಣು ಹಾಕಿಕೊಳ್ಳಬೇಕಿತ್ತು, ನಾವು ಹಾಕಿಕೊಂಡಿಲ್ಲ



• ಉದಯವಾಹಿನಿ, ಬೆಂಗಳೂರು

ರಾಜ್ಯ ಬಿಜೆಪಿಯೊಳಗಿನ ಭಿನ್ನಮತ ನಿರ್ಣಾಯಕ ಘಟ್ಟ ತಲುಪಿದ್ದು, ಉಭಯ ಬಣದ ನಾಯಕರನ್ನು ಸಂಧಾನ ನಡೆಸುವ ಮೂಲಕ ಬಿಕ್ಕಟ್ಟಿಗೆ ಶಾಶ್ವತ ಪರಿಹಾರ ನೀಡಲು ಕೇಂದ್ರ ಬಿಜೆಪಿ ವರಿಷ್ಠರು ಮುಂದಾಗಿದ್ದಾರೆ.

ನವದೆಹಲಿಗೆ ತೆರಳಿರುವ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಮತ್ತು ಭಿನ್ನಮತೀಯ ನಾಯಕತ್ವ ವಹಿಸಿರುವ ಬಸನಗೌಡ ಪಾಟೀಲ್ ಯತ್ನಾಳ್ ಇಬ್ಬರನ್ನು ಮುಖಾಮುಖಿ ಕೂರಿಸಿ ಸಂಧಾನಕ್ಕೆ ವರಿಷ್ಠರು ಒಲವು ತೋರಿದ್ದಾರೆ ಎನ್ನಲಾಗಿದೆ. ಆದರೆ ಉಭಯ ಬಣದವರು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ಕೇಂದ್ರ ಗೃಹಸಚಿವ ಅಮಿತ್ ಷಾ ಅವರನ್ನು ಯಾವ ಸಂದರ್ಭದಲ್ಲಿ ಭೇಟಿಯಾಗಲಿದ್ದಾರೆ ಎಂಬುದು ನಿಗೂಢವಾಗಿಯೇ ಉಳಿದಿದೆ.

ಕರ್ನಾಟಕ ಬಿಜೆಪಿ ಅಂತಃಕಲಹ ದಿನಕ್ಕೊಂದು ಸ್ವರೂಪ ಪಡೆದುಕೊಳ್ಳುತ್ತಿದೆ. ರಾಜ್ಯಾಧ್ಯಕ್ಷ ಪಟ್ಟದಿಂದ ವಿಜಯೇಂದ್ರರನ್ನು ಕೆಳಕ್ಕಿಳಿಸಲು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ನೇತೃತ್ವದ ನಾಯಕರ ಗುಂಪು ಶತಪ್ರಯತ್ನ ಮಾಡುತ್ತಿದೆ. ಆದರೆ, ಇದಕ್ಕೆ ಕೌಂಟರ್ ಕೊಡುತ್ತಿರುವ ವಿಜಯೇಂದ್ರ, ನಾನಾ ವ್ಯೂಹ ಹೆಣೆಯುತ್ತಿದ್ದಾರೆ. ಇದೇ ಹೊತ್ತಲ್ಲೇ ವಿಜಯೇಂದ್ರ ಮತ್ತು ಯತ್ನಾಳ್ ಇಬ್ಬರೂ ಕೇಂದ್ರ ಸಚಿವ ಸೋಮಣ್ಣ ಮನೆ ಪೂಜೆ ನೆಪದಲ್ಲಿ ದೆಹಲಿಯಲ್ಲಿ ತಂತ್ರಗಾರಿಕೆ ಮಾಡುತ್ತಿದ್ದಾರೆ.

ಸೋಮಣ್ಣ ಮನೆ ಪೂಜೆಗೆ ಹೋಗುತ್ತಿದ್ದೇವೆ ಎಂದು ಎರಡೂ ಬಣದ ನಾಯಕರು ಹೇಳಿದ್ದರೆ, ಅತ್ತ 'ನಾನು ಯಾರನ್ನೂ ಕರೆದಿಲ್ಲ' ಎಂದು ಸೋಮಣ್ಣ ಖಡಾಖಂಡಿತವಾಗಿ ಹೇಳಿದ್ದಾರೆ. ಹೀಗಾಗಿ, ಹೈಕಮಾಂಡ್ ಭೇಟಿಗೆ ಇಬ್ಬರೂ ಮುಂದಾಗಿದ್ದಾರಾ ಎಂಬ ಅನುಮಾನ ಸಹಜವಾಗಿ ಮೂಡಿದೆ. ದಾವಣಗೆರೆ ಪ್ರವಾಸಕ್ಕೆ ಹೋಗುತ್ತಿದ್ದ ವಿಜಯೇಂದ್ರಗೆ ಹೈಕಮಾಂಡ್‌ನಿಂದ ಬುಲಾವ್ ಬಂದಿದೆ. ಹೀಗಾಗಿ ದಾವಣಗೆರೆ ಪ್ರವಾಸ ರದ್ದು ಮಾಡಿದ ದೆಹಲಿ ವಿಮಾನ ಹತ್ತಿದ್ದಾರೆ.

ದೆಹಲಿಗೆ ತೆರಳುವ ಮುನ್ನ ಯತ್ನಾಳ್ ಬಣದ ಮೀಟಿಂಗ್: ಯತ್ನಾಳ್ ಬಣ ದೆಹಲಿಯಿಂದ ವಾಪಸ್ ಆಗಿ ವಾರವೂ ಆಗಿಲ್ಲ. ದಾವಣಗೆರೆಯ ಮಾಜಿ ಸಂಸದ ಜಿಎಂ ಸಿದ್ದೇಶ್ವರ್ ಗೆಸ್ಟ್ ಹೌಸ್‌ನಲ್ಲಿ ಯತ್ನಾಳ್ ಬಣದ ನಾಯಕರು ಭಾನುವಾರ ಸಭೆ ಸೇರಿದ್ದಾರೆ. ಮುಂದಿನ ಹೋರಾಟಗಳ ಬಗ್ಗೆ ಚರ್ಚೆ ನಡೆಸಿದ್ದಾರೆ. ಸಂಸದ ಬಸವರಾಜ್ ಬೊಮ್ಮಾಯಿ ಜೊತೆಗೆ ವಾಲ್ಮೀಕಿ ಜಾತ್ರೆಯ ವೇದಿಕೆ ಹಂಚಿಕೊಂಡಿದ್ದಾರೆ. ಬೊಮ್ಮಾಯಿ ಭೇಟಿ ಬಗ್ಗೆ ಪ್ರತಿಕ್ರಿಯಿಸಿದ ಯತ್ನಾಳ್, ತಟಸ್ಥ ಬಣವೂ ಪರಿವರ್ತನೆಯಾಗಿದೆ ಎಂದಿದ್ದಾರೆ. ದೆಹಲಿಗೆ ತೆರಳುವ ಮುನ್ನ ಮಾತನಾಡಿದ ಯತ್ನಾಳ್, ನಾನು ರಾಜ್ಯಾಧ್ಯಕ್ಷ ರೇಸ್‌ನಲ್ಲಿದ್ದೇನೆ ಎಂದಿದ್ದಾರೆ. ವಿಜಯೇಂದ್ರ ಕೂಡಾ ದೆಹಲಿಗೆ ಹೋಗುವ ಮುನ್ನ ಟಾಂಗ್ ಕೊಟ್ಟಿದ್ದು, ಯತ್ನಾಳ್ ಹೇಳಿದ್ದರಲ್ಲಿ ತಪ್ಪಿಲ್ಲ ಎಂದಿದ್ದಾರೆ. ರಾಜ್ಯ ಬಿಜೆಪಿ ರಾಜಕಾರಣ ದೆಹಲಿಗೆಸ್ಥಳಾಂತರ ಆಗಿರುವ ಹೊತ್ತಲ್ಲೇ ಪ್ರಯಾಗ್ ರಾಜ್‌ನಲ್ಲಿ ಯತ್ನಾಳ್ ಅಭಿಮಾನಿಗಳು ಪೂಜೆ

1 ಬಿಜೆಪಿ ನಾಯಕ ಯತ್ನಾಳ್ ಅವರಿಗೆ ಬಿಜೆಪಿ ಹೈಕಮಾಂಡ್ ನೋಟಿಸ್.

2 ಬಿಜೆಪಿಯ ಶಿಸ್ತುಪಾಲನಾ ಸಮಿತಿಯಿಂದ ನೋಟಿಸ್ ಜಾರಿ.

3 ಈ ಹಿಂದೆ ಕಳುಹಿಸಲಾಗಿದ್ದ ಎರಡು ನೋಟಿಸ್‌ಗಳಿಗೆ ಉತ್ತರಿಸಿರಲಿಲ್ಲ ಯತ್ನಾಳ್. ಹಾಗಾಗಿ, ಈಗ ಮೂರನೇ ನೋಟಿಸ್ ಜಾರಿ.



ನಾಯಕತ್ವಕ್ಕೆ ಸಡ್ಡು

ಮುನ್ನ ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ಯಾವುದೇ ಪ್ರತಿಭಟನೆ ನಡೆಸಿದರೂ ಅದರಲ್ಲಿ ಯತ್ನಾಳ್ ಬಣ ಪಾಲ್ಗೊಳ್ಳದೇ ತಾವೇ ಪ್ರತ್ಯೇಕವಾಗಿ ಪ್ರತಿಭಟನೆ ನಡೆಸಲು ಮುಂದಾದುವ ಮೂಲಕ ವಿಜಯೇಂದ್ರ ಅವರ ನಾಯಕತ್ವಕ್ಕೆ ಸಡ್ಡು ಹೊಡೆದಿದ್ದರು. ಸಿದ್ದರಾಮಯ್ಯನವರ ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಬಿ.ವೈ. ವಿಜಯೇಂದ್ರ ನಾಯಕತ್ವದಲ್ಲಿ ಬೆಂಗಳೂರಿನಿಂದ ಮೈಸೂರಿಗೆ ಬಿಜೆಪಿ ನಾಯಕರು ಪಾದಯಾತ್ರೆ ನಡೆಸಿದ್ದಾಗ ಅದರಲ್ಲಿ ಯತ್ನಾಳ್ ಭಾಗವಹಿಸಿರಲಿಲ್ಲ. ಅವರ ಜೊತೆಗೆ, ಬಿಜೆಪಿಯ ಕುಮಾರ್ ಬಂಗಾರಪ್ಪ, ಪ್ರತಾಪ್ ಸಿಂಹ, ಅರವಿಂದ ಲಿಂಬಾವಳಿ ಮುಂತಾದ ನಾಯಕರು ಇದ್ದಾರೆ.

ಯತ್ನಾಳ್ ಬಣದ ಒಬ್ಬರು ನಿಲ್ಲುವುದು ಪಕ್ಕಾ

ಯತ್ನಾಳ್ ಹಾಗೂ ರೆಬೆಲ್ ತಂಡದ ಆಣತಿಯಂತೆ ಬಿಜೆಪಿ ಹೈಕಮಾಂಡ್ ಕೂಡ ಬಿಜೆಪಿ ರಾಜ್ಯಾಧ್ಯಕ್ಷ ಪಟ್ಟಕ್ಕೆ ಸದ್ಯದಲ್ಲೇ ಚುನಾವಣೆ ನಡೆಸುವುದಾಗಿ ಹೇಳಿದೆ. ರಾಜ್ಯಧ್ಯಕ್ಷ ಚುನಾವಣೆಗೆ ಯತ್ನಾಳ್ ಬಣದ ಒಬ್ಬರು ನಿಲ್ಲುವುದು ಪಕ್ಕಾ ಆಗಿದೆ. ಅತ್ತ, ಬಿವೈ ವಿಜಯೇಂದ್ರ ಹಾಗೂ ಅವರ ಆಪ್ತರ ಬಣದಲ್ಲಿ ಒಬ್ಬರು (ಪ್ರಾಯಶಃ ವಿಜಯೇಂದ್ರ ನಿಂತರೂ ಅಚ್ಚರಿಯಿಲ್ಲ) ಚುನಾವಣೆಗೆ ನಿಲ್ಲಬಹುದು. ಆದರೆ, ಯಾರೇ ನಿಂತರೂ ತಮ್ಮ ಅಭ್ಯರ್ಥಿಯೇ ಗೆಲ್ಲುತ್ತಾರೆ ಎಂದು ಯತ್ನಾಳ್ ತಿಳಿಸಿದ್ದಾರೆ.

ತೀವ್ರಗೊಂಡಿರುವ ಭಿನ್ನಾಭಿಪ್ರಾಯ

ಕರ್ನಾಟಕ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಮತ್ತು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ನಡುವೆ ಆಂತರಿಕ ಭಿನ್ನಾಭಿಪ್ರಾಯಗಳು ತೀವ್ರಗೊಂಡಿವೆ. ಇತ್ತೀಚೆಗೆ, ಇಬ್ಬರೂ ನಾಯಕರು ದೆಹಲಿಗೆ ತೆರಳಿ ಪಕ್ಷದ ವರಿಷ್ಠರನ್ನು ಭೇಟಿಯಾಗಿ ತಮ್ಮ ಬೇಡಿಕೆಗಳನ್ನು ಇಟ್ಟಿದ್ದಾರೆ. ಅಸಲಿಗೆ, ಯತ್ನಾಳ್ ಅವರು ಕರ್ನಾಟಕ ಬಿಜೆಪಿ ಮೇಲೆ ಯಡಿಯೂರಪ್ಪ ಹಾಗೂ ಅವರ ಪುತ್ರರ ಹಿಡಿತವನ್ನು ಸಡಿಸುವ ಇರಾದೆ ಹೊಂದಿದ್ದಾರೆ.

ವಕ್ಫ್ ವಿವಾದದಲ್ಲೂ ಬಣ ರಾಜಕೀಯ

ವಕ್ಫ್ ಆಸ್ತಿ ವಿವಾದದ ಕುರಿತು, ಯತ್ನಾಳ್ ಅವರು ವಿಜಯೇಂದ್ರ ಅವರ ಅನುಮತಿ ಇಲ್ಲದೆ ಪ್ರತ್ಯೇಕ ಹೋರಾಟವನ್ನು ಆರಂಭಿಸಿದ್ದು, ಇದರಿಂದ ಪಕ್ಷದೊಳಗಿನ ಒಗ್ಗಟ್ಟು ಪ್ರಶ್ನೆಗೆ ಒಳಗಾಗಿದೆ. ಯತ್ನಾಳ್ ಅವರ ಈ ಕ್ರಮಕ್ಕೆ ಸ್ವಕ್ಷೇತ್ರ ವಿಜಯಪುರದಲ್ಲಿಯೇ ವಿರೋಧ ವ್ಯಕ್ತವಾಗಿದೆ. ಇದೇ ವೇಳೆ, ಯತ್ನಾಳ್ ಬಣದ ನಾಯಕರು ವಕ್ಫ್ ವಿವಾದದ 2ನೇ ಹಂತದ ಹೋರಾಟಕ್ಕೆ ಸಿದ್ಧತೆ ನಡೆಸಿದ್ದು, ಈ ಕುರಿತು ಗೌಪ್ಯ ಸಭೆಗಳನ್ನು ನಡೆಸಿದ್ದಾರೆ. ಇದು ಪಕ್ಷದ ಆಂತರಿಕ ಸಂಘರ್ಷವನ್ನು ಮತ್ತಷ್ಟು ತೀವ್ರಗೊಳಿಸಿದೆ. ಈ ಬೆಳವಣಿಗೆಗಳು ಕರ್ನಾಟಕ ಬಿಜೆಪಿ ಪಕ್ಷದ ಆಂತರಿಕ ಒಗ್ಗಟ್ಟಿಗೆ ಸವಾಲುಗಳನ್ನು ಉಂಟುಮಾಡುತ್ತಿದ್ದು, ಮುಂದಿನ ರಾಜಕೀಯ ಬೆಳವಣಿಗೆಗಳ ಮೇಲೆ ಗಮನ ಹರಿಸಲಾಗಿದೆ.

ಶ್ರೀರಾಮುಲು ಯಾತ್ರೆಗೆ ಬೆಂಬಲ

ಒಡೆದ ಮನಸ್ಸುಗಳ ಒಂದು ಮಾಡಲು ಮಾಜಿ ಸಚಿವ ಶ್ರೀರಾಮುಲು ಅವರು ಕೈಗೊಂಡಿರುವ ಯಾತ್ರೆ ವಿಚಾರವಾಗಿ ಮಾತನಾಡಿದ ಯತ್ನಾಳ್, ರಾಮುಲು ಅವರದ್ದು ಒಳ್ಳೆಯ ವಿಚಾರ. ನಾನು ಸ್ವಾಗತ ಮಾಡುತ್ತೇನೆ. ಒಡೆದ ಮನಸ್ಸುಗಳನ್ನು ಒಂದು ಮಾಡುವುದು ಒಳ್ಳೆಯದ್ದೇ. ಭ್ರಷ್ಟಾಚಾರ ಮಾಡುವವರ, ಕುಟುಂಬ ರಾಜಕಾರಣದ ವಿರುದ್ಧ ನಾವಿದ್ದೇವೆ. ನಾನು ರಾಜ್ಯಾಧ್ಯಕ್ಷ ಹಾಗೂ ಸಿಎಂ ಆಗುತ್ತೇನೆ. ನಾನು ಕೂಡ ಆ ಸ್ಥಾನಕ್ಕೆ ಅರ್ಹನಿದ್ದೇನೆ ಎಂದು ಈ ಸಂದರ್ಭದಲ್ಲಿ ನುಡಿದರು.

ಮೈಕ್ರೋ ಫೈನಾನ್ಸ್‌ಗಳ ನಿಯಂತ್ರಣಕ್ಕೆ ಸುಗ್ರೀವಾಜ್ಞೆ

• ಉದಯವಾಹಿನಿ, ಬೆಂಗಳೂರು

ಮೈಕ್ರೋಫೈನಾನ್ಸ್ ದಬ್ಬಾಳಿಕೆ ತಡೆಗಟ್ಟುವ ಸಂಬಂಧ ರಾಜ್ಯ ಸರ್ಕಾರ ಜಾರಿಗೆ ತಂದಿರುವ ಸುಗ್ರೀವಾಜ್ಞೆ-2025 ರ ಕರಡನ್ನು ರಾಜ್ಯಪಾಲ ಥಾವರ್ ಚಂದ್ ಗೆಹೋಟ್ ಅವರಿಗೆ ಸ್ಪಷ್ಟಿಕರಣ ನೀಡಿ ಸೋಮವಾರ ರಾಜಭವನಕ್ಕೆ ಮತ್ತೆ ಕಳುಹಿಸಲಿದೆ. ರಾಜ್ಯಪಾಲ

ಸಿದ್ಧಸೂಕ್ತಿ

ಡಾ ಆರೂಢಭಾರತೀ ಸ್ವಾಮೀಜಿ
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ ರಾಮೋಹಳ್ಳಿ

ಡಾ. ಅಭಿನವ ಸಿದ್ಧರಾಮೇಶ್ವರ ಶ್ರೀ

ವಿಜಯಪುರ ಜಿಲ್ಲೆಯ ಕವಲಗಿಯಲ್ಲಿಂದು ಜಗದ್ಗುರು ಶಿವಯೋಗಿ ಸಿದ್ಧರಾಮೇಶ್ವರ ಮಹಾಸಂಸ್ಥಾನ ಗುರುಪೀಠ ವಿಧ್ಯುಕ್ತವಾಗಿ ಲೋಕಾರ್ಪಣೆಗೊಂಡಿತು. ಸಿದ್ಧರಾಮೇಶ್ವರರ 853 ನೇ, ಶಿರಸಂಗಿ ಲಿಂಗರಾಜರ 164 ನೇ ಜಯಂತ್ಯುತ್ಸವದೊಡನೆ ಸಂಸ್ಕೃತ ವಿದ್ವಾನ್ ಡಾ. ಸ್ವರೂಪಾನಂದ ಸ್ವಾಮೀಜಿ ಅಭಿನವ ಸಿದ್ಧರಾಮೇಶ್ವರ ಮಹಾಸ್ವಾಮೀಜಿಯಾಗಿ ಪಟ್ಟಾಭಿಷಿಕ್ತರಾಗಿ ಪೀಠಾರೋಹಣಗೈದರು. ಈ ಮೂಲಕ 2021 ರಲ್ಲಿ ವಿಜಯಪುರದ ಜ್ಞಾನಯೋಗಿ ಸಿದ್ಧೇಶ್ವರ ಸ್ವಾಮೀಜಿ ಇಲ್ಲಿ ಭೂಮಿಪೂಜೆ ನೆರವೇರಿಸಿ ಆಶೀರ್ವದಿಸಿದ್ದು ಸಾಕಾರಗೊಂಡಿತು. ಹನ್ನೆರಡನೆಯ ಶತಮಾನದ ಮಹಾರಾಷ್ಟ್ರ ಮೂಲದ ಸಿದ್ಧರಾಮೇಶ್ವರರು ಕಾಯಕಯೋಗಿಗಳು. ನಾಥಸಂಪ್ರದಾಯದ ಅನುಪಾಲಕರು. ಕರ್ನಾಟಕದ ಬಸವಾದಿ ಶರಣರ ಸಂಪರ್ಕದಿಂದ ಪ್ರಭಾವಿತರಾಗಿ ಶರಣರಾಗಿ ಶಿವಯೋಗಿಯಾದರು. ಇವರ ಪ್ರವೇಶದಿಂದಾಗಿ ಶರಣರ ಸಾಮಾಜಿಕ ಕ್ರಾಂತಿ ವಚನ ಚಳುವಳಿ ಬಲಿಷ್ಠವಾಯಿತು. ಅರವತ್ತು ಸಾವಿರಕ್ಕೂ ಹೆಚ್ಚು ವಚನಗಳನ್ನು ಇವರು ಬರೆದಿದ್ದು ಎರಡು ಸಾವಿರ ವಚನಗಳು ಮಾತ್ರ ಲಭ್ಯವಾಗಿವೆ ಎಂದು ಹೇಳಲಾಗುತ್ತಿದೆ. ಡಾ. ಸಿದ್ದಣ್ಣ ಬಿ ಉತ್ನಾಳ್ ಸಂಗಡಿಗರು ರಚಿಸಿದ ಶಿವಯೋಗಿ ಸಿದ್ಧರಾಮ ಸುಂದರ ಕೃತಿಯನ್ನು ಬಿಡುಗಡೆ ಮಾಡಲಾಯಿತು. ಕಾರ್ಯಕ್ರಮದ ಆರಂಭದಲ್ಲಿ ತೇಲಿ ಬಂದ ಪ್ರಕೃತಿಯೇ ಗುರು ಗಗನವೇ ಲಿಂಗ, ಜಗವೇ ಕೂಡಲ ಸಂಗಮ ಗೀತೆ ವಿಶಾಲತೆಯ ಭಾವ ಮೂಡಿಸಿತು. ಗೋಡಕೆರೆಯ ಜಗದ್ಗುರು ಮೃತ್ಯುಂಜಯ ದೇಶಿಕೇಂದ್ರ ಸ್ವಾಮೀಜಿ, ಜ್ಞಾನಯೋಗಾಶ್ರಮದ ಬಸವಲಿಂಗ ಸ್ವಾಮೀಜಿ, ಮಿಟ್ಟಿಮಲಕಾಪುರದ ನಿಜಾನಂದ ಸ್ವಾಮೀಜಿ, ಶಿರೋಳದ ಶಂಕರಾನಂದ ಸ್ವಾಮೀಜಿ, ಬೆಳ್ಳೂರಿನ ಅಮೃತಾನಂದಮಯೀ, ಅಭಿನವ ಸಿದ್ಧರಾಮೇಶ್ವರ ಶ್ರೀಗಳ ಪೂರ್ವಾಶ್ರಮದ ಮಾತೃ ಶ್ರೀ ಗೌರಮ್ಮ, ಶಾಸಕ ವಿಠ್ಠಲ ಕಟಕದೊಂಡ, ಲಕ್ಷ್ಮಣ ಸವದಿ ಮುಂತಾದವರು ಉಪಸ್ಥಿತರಿದ್ದರು.

ದಾಸರ ಪದಗಳ ಗಾಯನ

• ಉದಯವಾಹಿನಿ, ಬೆಂಗಳೂರು

ಜಯನಗರ 5ನೇ ಬಡಾವಣೆಯ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪರಮಪೂಜ್ಯ ಶ್ರೀ ಶ್ರೀ ಸುಬುಧೇಂದ್ರತೀರ್ಥ ಶ್ರೀ ಪಾದಂಗಳವರ ಆದೇಶದಂತೆ ಶ್ರೀ ಮಠದ ಹಿರಿಯ ವ್ಯವಸ್ಥಾಪಕರಾದ ಶ್ರೀ ಆರ್. ಕೆ. ವಾದೀಂದ್ರಾಚಾರ್ಯರ ನೇತೃತ್ವದಲ್ಲಿ ಫೆಬ್ರವರಿ 13, ಗುರುವಾರ ಸಂಜೆ 5-30ಕ್ಕೆ ಗಾನಸಿದ್ಧಗಂಗಾ ಸಂಗೀತ ಶಾಲೆಯ ಸಂಸ್ಥಾಪಕರೂ ಗುರುಗಳೂ ಆದ ವಿದುಷಿ ಶ್ರೀಮತಿ ಗೀತಾ ಭತ್ತದ್ ಅವರು ತಮ್ಮ ವಿದ್ಯಾರ್ಥಿಗಳೊಂದಿಗೆ ದಾಸರ ಪದಗಳ ಗಾಯನ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ ಎಂದು ಶ್ರೀ ನಂದಕಿಶೋರ್ ಆಚಾರ್ ತಿಳಿಸಿದ್ದಾರೆ.

ಸ್ಥಳ : ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 11ನೇ ಮುಖ್ಯರಸ್ತೆ, 45ನೇ ಅಡ್ಡರಸ್ತೆ, ಜಯನಗರ 5ನೇ ಬಡಾವಣೆ, ಬೆಂಗಳೂರು-41

ಬಿಜೆಪಿ ಭಿನ್ನಮತಕ್ಕೆ ನಮ್ಮವರದ್ದೇ ಕುಮ್ಮಕ್ಕು

• ಉದಯವಾಹಿನಿ, ಬೆಂಗಳೂರು

ಬಿಜೆಪಿ ಭಿನ್ನಮತಕ್ಕೆ ನಮ್ಮವರೇ ಹಿಂಬಾಗಿಲ ಮೂಲಕ ಕುಮ್ಮಕ್ಕು ಕೊಡ್ತಿದ್ದಾರೆ ಎಂದು ಶಾಸಕ ಮುನಿರತ್ನ ಆರೋಪಿಸಿದ್ದಾರೆ. ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಅವರು ಮಾತಾಡಿದರು. ಈ ವೇಳೆ, ಕಿತ್ತಾಟ ಶಮನವಾಗೋದು ನಮ್ಮ ಪಕ್ಷದ ಕೆಲವರಿಗೆ ಇಷ್ಟವಿಲ್ಲ. ಗಲಾಟೆ ನಿಲ್ಲಿಸಬೇಡಿ ಮುಂದುವರೆಸಿ ಅಂತ ಎತ್ತಿ ಕಟ್ಟುವ ಕೆಲಸ ಮಾಡ್ತಿದ್ದಾರೆ. ಅಲ್ಲೂ ಹೇಳೋದು ಇಲ್ಲೂ ಹೇಳೋದು ಮಾಡುವ ಮೂಲಕ ಗೊಂದಲವನ್ನು ಜೀವಂತವಾಗಿ ಇಡೋ ಕೆಲಸ ಮಾಡ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪ್ರತಿಪಕ್ಷ ನಾಯಕ ಆರ್ ಅಶೋಕ್ ಬಗ್ಗೆಯೂ ಪರೋಕ್ಷವಾಗಿ ಅಸಮಾಧಾನ ವ್ಯಕ್ತಪಡಿಸಿದ ಅವರು, ಹಿರಿಯರೂ, ವಿಪಕ್ಷ ನಾಯಕ ಸ್ಥಾನದಲ್ಲೂ ಇರುವ ಅಶೋಕ್ ಅವರು ಪಕ್ಷದ ಗೊಂದಲಗಳನ್ನು ನೋಡಿಕೊಂಡು ತಟಸ್ಥರಾಗಿರೋದು ಸರಿಯಲ್ಲ. ಹಿರಿಯರಾಗಿರುವ ಅವರು, ಎಲ್ಲಾ ಶಾಸಕರ ಸಭೆ ಕರೆದು ಗೊಂದಲ, ಸಮಸ್ಯೆ ಬಗೆಹರಿಸಬೇಕು. ಆಗಲೇ ಅವರಿಗೂ ಅವರ ಹುದ್ದೆಗೂ ಗೌರವ, ಅವರಿಗೆ ಮಧ್ಯಸ್ಥಿಕೆ ವಹಿಸಿ ಕಲಹ ಬಗೆಹರಿಸುವ ಅಧಿಕಾರ ಇದೆ ಎಂದಿದ್ದಾರೆ. ನಾವು ಒಗ್ಗಟ್ಟು ಕಾಯ್ದುಕೊಳ್ಳದಿದ್ದರೆ ಪಕ್ಷಕ್ಕೆ ಕಷ್ಟ ಕಟ್ಟಿಟ್ಟ ಬುತ್ತಿ. ನಮ್ಮಲ್ಲಿ ಒಗ್ಗಟ್ಟು ಬಂದರೆ ರಾಜ್ಯದಲ್ಲೂ ದೆಹಲಿಯಂತೆ ಕಾಂಗ್ರೆಸ್‌ನ್ನು ಶೂನ್ಯಕ್ಕೆ ಇಳಿಸುವ ಸಾಮರ್ಥ್ಯ ಪಕ್ಷಕ್ಕೆ ಬರಲಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಮೆಟ್ರೋ ಪ್ರಯಾಣ ದರ ಇಳಿಸುವಂತೆ ಬಿಎಂಆರ್ ಸಿಎಲ್ ಗೆ ಬಿಜೆಪಿ ನಿಯೋಗ ಮನವಿ

• ಉದಯವಾಹಿನಿ, ಬೆಂಗಳೂರು

ಕೇಂದ್ರ ಸರ್ಕಾರ ನಮ್ಮ ಮೆಟ್ರೋ ದರವನ್ನು ಏಕಾಏಕಿ ಶೇ. 50ರಷ್ಟು ಹೆಚ್ಚು ಮಾಡಿದ್ದು, ಇದಕ್ಕೆ ಜನರಿಂದ ತೀವ್ರ ಆಕ್ರೋಶ ವ್ಯಕ್ತವಾಗಿದೆ. ಇದರಿಂದ ಎಚ್ಚೆತ್ತುಕೊಂಡ ಬಿಜೆಪಿ ನಾಯಕರು ಸೋಮವಾರ ನಮ್ಮ ಮೆಟ್ರೋ ಪ್ರಧಾನ ಕಚೇರಿಗೆ ಭೇಟಿ ನೀಡಿ, ದರ ಇಳಿಸುವಂತೆ ಮನವಿಪತ್ರ ಸಲ್ಲಿಸಿದ್ದಾರೆ.

ಬೆಂಗಳೂರಿನ ಬಿಜೆಪಿ ಶಾಸಕರಾದ ಸಿ.ಕೆ.ರಾಮಮೂರ್ತಿ, ರವಿಸುಬ್ರಹ್ಮಣ್ಯ, ಬೆಂಗಳೂರು ಉತ್ತರ ಜಿಲ್ಲಾ ಬಿಜೆಪಿ ಘಟಕದ ಅಧ್ಯಕ್ಷ ಎಸ್.ಹರೀಶ್ ಮತ್ತು ಮಾಜಿ ಮೇಯರ್ ಗೌತಮ್ ಕುಮಾರ್ ಮತ್ತಿತರರಿಂದ ನಿಯೋಗ, ಬಿಎಂಆರ್ ಸಿಎಲ್ ಎಂಡಿಗೆ ಮನವಿ ಪತ್ರ ಸಲ್ಲಿಸಿದೆ.

ಕ್ವೀನ್ಸ್ ರಸ್ತೆಯಲ್ಲಿ ಹದಗೆಟ್ಟ ಡ್ರೈನೇಜ್ ಕವರ್ ದೂರು ನೀಡಿದರೂ ದುರಸ್ತಿ ಮಾಡದ ಬಿಬಿಎಂಪಿ

• ಉದಯವಾಹಿನಿ, ಬೆಂಗಳೂರು

ಕಬ್ಬನ್ ಪಾರ್ಕ್ ಮೆಟ್ರೋ ನಿಲ್ದಾಣದಿಂದ ಎಂಜಿ ರಸ್ತೆ ವೃತ್ತದವರೆಗೆ ಕ್ವೀನ್ಸ್ ರಸ್ತೆಯ ಉದ್ದಕ್ಕೂ ಹದಗೆಟ್ಟ ಒಳಚರಂಡಿಗಳು ಒಂದು ತಿಂಗಳಿಗೂ ಹೆಚ್ಚು ಕಾಲದಿಂದ ಪಾದಚಾರಿಗಳು ಮತ್ತು ವಾಹನ ಚಾಲಕರಿಗೆ ಅಪಾಯವನ್ನುಂಟುಮಾಡುತ್ತಿವೆ.

ಈ ರಸ್ತೆಯಲ್ಲಿ ದೈನಂದಿನ ಪ್ರಯಾಣಿಕರ ಸಂಖ್ಯೆ ಹೆಚ್ಚಿದ್ದರೂ ಅಧಿಕಾರಿಗಳು ಇನ್ನೂ ದುರಸ್ತಿ ಕ್ರಮ ಕೈಗೊಂಡಿಲ್ಲ. ರಸ್ತೆಯ ಉದ್ದಕ್ಕೂ ಇರುವ 30 ಒಳಚರಂಡಿ ಹೊದಿಕೆಗಳಲ್ಲಿ, ನಾಲ್ಕು ಸಂಪೂರ್ಣವಾಗಿ ಮುರಿದುಹೋಗಿವೆ ಮತ್ತು ಮೂರು ಭಾಗಶಃ ಹಾನಿಗೊಳಗಾಗಿದ್ದು, ವಾಹನ ಬಳಕೆದಾರರಿಗೆ ಗಮನಾರ್ಹ ಅಪಾಯವನ್ನುಂಟುಮಾಡುತ್ತವೆ. ಚಿನ್ನಸ್ವಾಮಿ ಕ್ರೀಡಾಂಗಣದ ಬಸ್ ನಿಲ್ದಾಣದಲ್ಲಿ ಮುರಿದ ಹೊದಿಕೆಯ ಬಳಿ ಕೇವಲ ಒಂದು ಬ್ಯಾರಿಕೇಡ್ ಇರಿಸಲಾಗಿದೆ.

ನಾನು ವಾರಗಳಿಂದ ಈ ಸಮಸ್ಯೆಯನ್ನು ಗಮನಿಸುತ್ತಿದ್ದೇನೆ. ರಾತ್ರಿಯಲ್ಲಿ, ಇದು ಹೆಚ್ಚು ಅಪಾಯಕಾರಿಯಾಗಿದೆ. ಮನೆಗೆ ತೆರಳುವ ಬೈಕ್ ಸವಾರರು ಮುರಿದ ಮುಚ್ಚಳಗಳನ್ನು ಗುರುತಿಸದೇ ಇರಬಹುದು, ಇದು ಗಂಭೀರ ಅಪಘಾತಗಳಿಗೆ ಕಾರಣವಾಗಬಹುದು ಎಂದು ಅವರು ಹೇಳಿದರು, ಪಾದಚಾರಿಗಳು ಸಹ ಅಪಾಯದಲ್ಲಿದ್ದಾರೆ.

ಚಿನ್ನಸ್ವಾಮಿ ಕ್ರೀಡಾಂಗಣ ಮತ್ತು ಕಬ್ಬನ್ ಪಾರ್ಕ್ ಹತ್ತಿರದಲ್ಲಿ ಇರುವುದರಿಂದ, ಅನೇಕ ಪಾದಚಾರಿಗಳು ಈ ಮಾರ್ಗವನ್ನು ಬಳಸುತ್ತಾರೆ ಮತ್ತು ರಸ್ತೆ ದಾಟಲು ಪ್ರಯತ್ನಿಸುವವರು ವಿಶೇಷವಾಗಿ ಹಿರಿಯ ನಾಗರಿಕರು ಹಾನಿಗೊಳಗಾದ ಒಳಚರಂಡಿ ಹೊದಿಕೆಯ ಮೇಲೆ ಹೆಜ್ಜೆ ಹಾಕಿದರೆ ಗಾಯವಾಗುವ ಸಾಧ್ಯತೆಯಿದೆ ಎಂದು ಟಿಎನ್‌ಐಇ ಜೊತೆ ಮಾತನಾಡಿದ ಐಟಿ ಸಂಸ್ಥೆಯಲ್ಲಿ ಕೆಲಸ ಮಾಡುವ ದೈನಂದಿನ ಪ್ರಯಾಣಿಕ ಥಲನ್ ತಮ್ಮಯ್ಯ ತಮ್ಮ ಕಳವಳ ವ್ಯಕ್ತಪಡಿಸಿದರು.

ಇಬ್ಬರು ಕಾರ್ಮಿಕರ ನಡುವೆ ಗಲಾಟೆ, ಒಬ್ಬನ ಕೊಲೆ

• ಉದಯವಾಹಿನಿ, ಬೆಂಗಳೂರು,

ಕೆಲಸ ಮಾಡುವ ವಿಚಾರಕ್ಕೆ ಇಬ್ಬರು ಕಾರ್ಮಿಕರ ನಡುವೆ ಗಲಾಟೆಯಾಗಿದ್ದು, ಒಬ್ಬ ಕಾರ್ಮಿಕನನ್ನು ಚಾಕುವಿನಿಂದ ಇರಿದು ಹತ್ಯೆಗೈದಿರುವ ಘಟನೆ ಸಂಪಿಗೆಹಳ್ಳಿಯ ಆಕಾಶವಾಣಿ ಲೇಔಟ್ನಲ್ಲಿ ತಡರಾತ್ರಿ ನಡೆದಿದೆ.

ಮೃತ ಕಾರ್ಮಿಕನನ್ನು ಸೈಯದ್ ಮೆಹಬೂಬ್ ಪಾಷ ಎಂದು ಗುರುತಿಸಲಾಗಿದ್ದು, ಪರಾರಿಯಾಗಿರುವ ಆರೋಪಿ ಖಾನಿಯಾ ಪತ್ತೆಗೆ ಪೊಲೀಸರು ಬಲೆ ಬೀಸಿದ್ದಾರೆ. ಈ ಇಬ್ಬರು ಕಾರ್ಮಿಕರು ಜೆಲ್ಲಿ, ಮರಳನ್ನು ಟಾಟಾ ಏಸ್ ಗಾಡಿಗಳಿಗೆ ಲೋಡ್ ಮಾಡುವ ಕೆಲಸ ಮಾಡುತ್ತಿದ್ದರು. ಕಳೆದ ಕೆಲವು ವರ್ಷಗಳಿಂದ ರಾಜು ಎನ್ನುವ ವ್ಯಕ್ತಿ ಜೊತೆಗೂಡಿ ಮೆಹಬೂಬ್ ಜೆಲ್ಲಿ, ಮರಳು ವ್ಯಾಪಾರ ಮಾಡುತ್ತಿದ್ದರು.

ನಿನ್ನೆ ರಾತ್ರಿ ರಾಜು, ಮೆಹಬೂಬ್ಗೆ ಕರೆ ಮಾಡಿ ಬಾಡಿಗೆಯಿದೆ ಬಾ ಎಂದು ಕರೆದಿದ್ದಾನೆ. ಹಾಗಾಗಿ ರಾತ್ರಿ 8.45ರ ಸುಮಾರಿಗೆ ಮೆಹಬೂಬ್ ಸ್ಥಳಕ್ಕೆ ಹೋಗಿದ್ದನು. ಆವೇಳೆ ಅಲ್ಲಿದ್ದ ಖಾನಿಯಾ ಎನ್ನುವ ಮತ್ತೊಬ್ಬ ಕಾರ್ಮಿಕ ಜೊತೆ ಗಲಾಟೆಯಾಗಿದೆ.

ಇವರಿಬ್ಬರ ಮಧ್ಯೆ ಮಾತಿಗೆ ಮಾತು ಬೆಳೆದು ಜಗಳ ವಿಕೋಪಕ್ಕೆ ತಿರುಗಿದಾಗ ಖಾನಿಯಾ ಕೈಗೆ ಸಿಕ್ಕದ ಸಿಮೆಂಟ್ ಚೀಲ ಕಟ್ ಮಾಡಲು ಬಳಸುತ್ತಿದ್ದ ಚಾಕುವಿನಿಂದ ಮೆಹಬೂಬ್ಗೆ ಇರಿದು ಕೊಲೆ ಮಾಡಿ ಪಾರಾರಿಯಾಗಿದ್ದಾನೆ. ತಕ್ಷಣ ಅಂಗಡಿ ಪಕ್ಕದ ಪರಿಚಯಸ್ಥರು ಮೆಹಬೂಬ್ ಕುಟುಂಬಸ್ಥರಿಗೆ ಕರೆ ಮಾಡಿ ಯಾರೋ ಹೊಡೆದಿರುವುದಾಗಿ ಮಾಹಿತಿ ನೀಡಿದ್ದಾರೆ.

ಕೂಡಲೇ ಸ್ಥಳಕ್ಕೆ ಆಗಮಿಸಿದ ಕುಟುಂಬಸ್ಥರು ಮೆಹಬೂಬ್ನನ್ನು ಆಸ್ಪತ್ರೆಗೆ ಕರೆದೊಯ್ಯುವಾಗ ಮಾರ್ಗಮಧ್ಯೆ ಸಾವನ್ನಪ್ಪಿದ್ದಾರೆ. ವಿಷಯ ತಿಳಿದು ಸಂಪಿಗೆ ಹಳ್ಳಿ ಠಾಣೆ ಪೊಲೀಸರು ಸ್ಥಳಕ್ಕೆ ದಾವಿಸಿ ಪರಿಶೀಲಿಸಿ ಪ್ರಕರಣ ದಾಖಲಿಸಿಕೊಂಡು ಆರೋಪಿ ಪತ್ತೆಗೆ ಕಾರ್ಯಾಚರಣೆ ಕೈಗೊಂಡಿದ್ದಾರೆ.

ಬೆಂಗಳೂರಲ್ಲಿ ಏರೋಸ್ಪೇಸ್ ಉದ್ಯಮಗಳ ಸ್ಥಾಪನೆಗೆ ಡಿಕೆಶಿ ಮನವಿ

● ಪ್ರತಿಭಾ ಪಲಾಯನವನ್ನು ತಡೆದು ನಮ್ಮ ದೇಶದ ಪ್ರತಿಭೆಗಳನ್ನು ಭಾರತದೊಳಗೇ ಉಳಿಸಿಕೊಳ್ಳಬಹುದು

ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಏರೋಸ್ಪೇಸ್ ಉದ್ಯಮದಲ್ಲಿ ಬೆಂಗಳೂರು ಅತ್ಯುತ್ತಮ ಪ್ರತಿಭೆಗಳನ್ನು ಹೊಂದಿದೆ.

ಇದು ವಿಮಾನ ಮತ್ತು ಹೆಲಿಕಾಪ್ಟರ್ ಉತ್ಪಾದನಾ ಸೌಲಭ್ಯಗಳನ್ನು ಸ್ಥಾಪಿಸಲು ಸೂಕ್ತ ಸ್ಥಳವಾಗಿದೆ. ತಯಾರಕರಿಗೆ ಪ್ರೋತ್ಸಾಹ ನೀಡುವ ಮೂಲಕ, ಪ್ರತಿಭಾ ಪಲಾಯನವನ್ನು ತಡೆದು ನಮ ದೇಶದ ಪ್ರತಿಭೆಗಳನ್ನು ಭಾರತದೊಳಗೇ ಉಳಿಸಿಕೊಳ್ಳಬಹುದು ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಭಿಪ್ರಾಯಪಟ್ಟರು.

ಬೆಂಗಳೂರಿನಲ್ಲಿ ನಡೆಯುತ್ತಿರುವ ಏರ್ ಶೋ-2025ರ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ರಕ್ಷಣಾ ಸಚಿವರು ಕರ್ನಾಟಕದಲ್ಲಿ ಏರೋಸ್ಪೇಸ್ ಉದ್ಯಮವನ್ನು ಸ್ಥಾಪಿಸಲು ಹಾಗೂ ವಿಮಾನ ಮತ್ತು ಹೆಲಿಕಾಪ್ಟರ್ಗಳ ತಯಾರಕರನ್ನು ಹೆಚ್ಚು, ಹೆಚ್ಚು ಬೆಂಗಳೂರಿನ ಕಡೆಗೆ ಸೆಳೆಯಲು ಗಮನ ಹರಿಸುವಂತೆ ಮನವಿ ಮಾಡಿದರು. ಕರ್ನಾಟಕ ಭಾರತದ ತಾಂತ್ರಿಕ ಮತ್ತು ಕೈಗಾರಿಕಾ ಪ್ರಗತಿಯಲ್ಲಿ ಮುಂಚೂಣಿಯಲ್ಲಿರುವ ರಾಜ್ಯ. ವಿಶ್ವದರ್ಜೆಯ ಸಂಶೋಧನಾ ಸಂಸ್ಥೆಗಳು, ಅತ್ಯಾಧುನಿಕ ಏರೋಸ್ಪೇಸ್ ಕಂಪನಿಗಳನ್ನು ಹೊಂದಿರುವ ಕೌಶಲ್ಯಪೂರ್ಣ ಕಾರ್ಯಪಡೆಯೇ ನಮಲ್ಲಿದೆ ಎಂದರು. ಆಕಾಶಕ್ಕೆ ಮಿತಿಯಿಲ್ಲ ಎಂಬುದನ್ನು ಈ ಏರ್ ಶೋ ಮೂಲಕ ನಾವು ಕಂಡುಕೊಳ್ಳಬಹುದು.

ಎಚ್ಎಎಲ್, ಇಸ್ರೋ ಮತ್ತು ಬೋಯಿಂಗ್ ಇಂಡಿಯಾದಂತಹ ಪ್ರಮುಖ ಸಂಸ್ಥೆಗಳು ಭಾರತದ ರಕ್ಷಣಾ ಮತ್ತು ಬಾಹ್ಯಾಕಾಶ ಸಾಮರ್ಥ್ಯಗಳಿಗೆ ಸಾಕಷ್ಟು ಕೊಡುಗೆಗಳನ್ನು ನೀಡುತ್ತಿವೆ. ಬೆಂಗಳೂರಿನ ಏರೋಸ್ಪೇಸ್ ವಲಯದಲ್ಲಿ 1,50,000 ಕ್ಕೂ ಹೆಚ್ಚು ಜನರು ಕೆಲಸ ಮಾಡುತ್ತಿದ್ದಾರೆ, ಇದು ನಗರವನ್ನು ವಾಯುಯಾನ ಮತ್ತು ರಕ್ಷಣಾ ತಂತ್ರಜ್ಞಾನದಲ್ಲಿ ಜಗತ್ತಿನಲ್ಲಿಯೇ ಸಾಕಷ್ಟು ಹೆಸರು ಮಾಡಿದೆ ಎಂದರು.

ವಿದೇಶಿ ಹೂಡಿಕೆಗಳನ್ನು ಆಕರ್ಷಿಸುವಲ್ಲಿ ಬೆಂಗಳೂರು ಜಾಗತಿಕ ಏರೋಸ್ಪೇಸ್ ನಗರಗಳಲ್ಲಿ ಮೂರನೇ ಸ್ಥಾನವನ್ನು ಪಡೆದಿದೆ. ಕರ್ನಾಟಕ ಸರ್ಕಾರವು ಕರ್ನಾಟಕದಾದ್ಯಂತ ಅಂದರೆ ಬೆಂಗಳೂರು, ಬೆಳಗಾವಿ, ಮೈಸೂರು, ತುಮಕೂರು ಮತ್ತು ಚಾಮರಾಜನಗರಗಳಲ್ಲಿ ಏರೋಸ್ಪೇಸ್ ಮತ್ತು ರಕ್ಷಣಾ ಕೇಂದ್ರಗಳನ್ನು ಅಭಿವೃದ್ಧಿಪಡಿಸುತ್ತಿದೆ ಎಂದು ತಿಳಿಸಿದರು. ವಾಣಿಜ್ಯ ಮತ್ತು ರಕ್ಷಣಾ ಕ್ಷೇತ್ರಗಳಲ್ಲಿ ಕ್ರಾಂತಿಯನ್ನೇ ಉಂಟುಮಾಡುತ್ತಿರುವ ಡ್ರೋನ್ ತಂತ್ರಜ್ಞಾನ ಮತ್ತು ಮಾನವರಹಿತ ವೈಮಾನಿಕ ತಂತ್ರಜ್ಞಾನದ ರುವಾರಿಯಾಗಿ ಬೆಂಗಳೂರು ಬೆಳೆಯುತ್ತಿದೆ ಎಂದರು.

ಬೆಂಗಳೂರು ಏರ್ ಶೋ ನಾಗರಿಕ ಮತ್ತು ಮಿಲಿಟರಿ ವಾಯುಯಾನ ಎರಡರಲ್ಲೂ ಭಾರತದ ಪ್ರಗತಿಯನ್ನು ಎತ್ತಿ ತೋರಿಸುವ ದೊಡ್ಡ ಕಾರ್ಯಕ್ರಮ ಎಂದು ತಿಳಿಸಿದರು. ಏರೋ ಇಂಡಿಯಾ ಕೇವಲ ಪ್ರದರ್ಶನವಲ್ಲ. ಇದು ಏರೋಸ್ಪೇಸ್ ಮತ್ತು ರಕ್ಷಣಾ ಕ್ಷೇತ್ರಗಳಲ್ಲಿ ಭಾರತದ ಸಾಮರ್ಥ್ಯ ಬೆಳೆಯುತ್ತಿರುವುದಕ್ಕೆ ಸಾಕ್ಷಿ ಮತ್ತು ಅಂತರರಾಷ್ಟ್ರೀಯ ಪಾಲುದಾರಿಕೆಗಳನ್ನು ಬೆಳೆಸುವ ವೇದಿಕೆ ಎಂದರು. 2013ರಲ್ಲಿ ಏರೋಸ್ಪೇಸ್ ನೀತಿಯನ್ನು ಘೋಷಿಸಿದ ಮೊದಲ ರಾಜ್ಯ ಕರ್ನಾಟಕ. ನಮ ರಾಜ್ಯವು ದೇವನಹಳ್ಳಿ ಬಳಿ ಏರೋಸ್ಪೇಸ್ ಕಂಪನಿಗಳಿಗಾಗಿ 1 ಸಾವಿರ ಎಕರೆ ಪ್ರದೇಶವನ್ನು ಮೀಸಲಿಟ್ಟು ಏರೋಸ್ಪೇಸ್ ಪಾರ್ಕ್ ಸ್ಥಾಪಿಸಿದೆ ಎಂದರು.

ಬೆಂಗಳೂರು ಭಾರತದ ಏರೋಸ್ಪೇಸ್ ರಾಜಧಾನಿ

ಇಂದು ಏರೋಸ್ಪೇಸ್ ಉದ್ಯಮವನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ತೆಗೆದುಕೊಂಡು ಹೋಗಲು ಬೆಂಗಳೂರು ಅತ್ಯುತ್ತಮ ನಗರವಾಗಿದೆ. ಅನೇಕ ಬ್ರ್ಯಾಂಡ್ಗಳು ಮತ್ತು ಅತ್ಯುತ್ತಮ ತಂತ್ರಜ್ಞಾನಗಳನ್ನು ಪ್ರದರ್ಶಿಸಲು ಬೆಂಗಳೂರು ಸೂಕ್ತ ಸ್ಥಳವಾಗಿದೆ ಎಂದರು. ವ್ಯಾಪಾರ ಒಪ್ಪಂದಗಳನ್ನು ಮಾಡಿಕೊಳ್ಳಲು, ಉದ್ದಿಮೆಗಳ ಅತ್ಯುತ್ತಮ ಉತ್ಪನ್ನಗಳನ್ನು ಪರೀಕ್ಷಿಸಲು ಇದು ಸೂಕ್ತ ಸ್ಥಳವಾಗಿದೆ. ಏರೋಸ್ಪೇಸ್ ಭವಿಷ್ಯವು ರೂಪುಗೊಳ್ಳುತ್ತಿರುವ ಸ್ಥಳವೇ ಬೆಂಗಳೂರು ಎಂದು ಹೇಳಿದರು. ಬೆಂಗಳೂರು ಭಾರತದ ಏರೋಸ್ಪೇಸ್ ರಾಜಧಾನಿ. ದೇಶದ ಏರೋಸ್ಪೇಸ್ ಉತ್ಪಾದನೆ ಮತ್ತು ರಕ್ಷಣಾ ಸಂಶೋಧನೆಯ ಶೇ. 60 ಕ್ಕಿಂತ ಹೆಚ್ಚು ಕೊಡುಗೆಯನ್ನು ನಮ ರಾಜ್ಯ ನೀಡುತ್ತಿದೆ ಎಂದರು.

ಬೆಂಗಳೂರು ಅತ್ಯುತ್ತಮ ಪ್ರತಿಭೆಗಳ ನಗರ

ಬೆಂಗಳೂರು ಭಾರತದಲ್ಲಿಯೇ ಅತಿ ಹೆಚ್ಚು ಸಾಫ್ಟ್‌ವೇರ್ ಕಂಪನಿಗಳನ್ನು ಹೊಂದಿದೆ. ಅದಕ್ಕೆ ಇದನ್ನು ಭಾರತದ ಸಿಲಿಕಾನ್ ಸಿಟಿ ಎಂದು ಕರೆಯುತ್ತಾರೆ. ತಂತ್ರಜ್ಞಾನ ಮತ್ತು ಏರೋಸ್ಪೇಸ್ ವಲಯವನ್ನು ಮುನ್ನಡೆಸುವ ನಗರವಾಗಿ ಬೆಂಗಳೂರು ಬೆಳೆದಿದೆ ಎಂದು ಹೇಳಿದರು. ಕರ್ನಾಟಕವು ಭಾರತದ ಏರೋಸ್ಪೇಸ್ ವಲಯದಲ್ಲಿ ಅನೇಕ ಬಾರಿ ನಿರ್ಣಾಯಕ ಪಾತ್ರವನ್ನು ವಹಿಸಿದೆ.

ಅಲ್ಲದೇ ರಕ್ಷಣಾ ಸೇವೆಗಳಿಗಾಗಿ ದೇಶದ ವಿಮಾನ ಮತ್ತು ಹೆಲಿಕಾಪ್ಟರ್

ವಿದ್ಯಾರ್ಥಿಗಳು ಸಮಯ ಪ್ರಜ್ಞೆಯಿಂದ ಸಾಧನೆ ಮಾಡಬೇಕಿದೆ

• ಉದಯವಾಹಿನಿ, ಮಂಡ್ಯ

ಉದಯವಾಹಿನಿ ಚಿತ್ರ

ವಿದ್ಯಾರ್ಥಿಗಳು ಸಮಯ ಪಾಲನೆಯಿಂದ ಪಠ್ಯ ಪುಸ್ತಕ ಓದಿದರೆ ಉತ್ತಮ ಭವಿಷ್ಯ ನಿರ್ಮಿಸಿಕೊಳ್ಳಬಹುದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲ ದಂಡಿ ಹೇಳಿದರು. ನಗರದ ಕೆರೆಯಂಗಳದ ಕೆಎಚ್‌ಪಿ ಕಾಲೋನಿಯಲ್ಲಿರುವ ಜೆಎಸ್‌ಎಸ್ ಪಬ್ಲಿಕ್ ಶಾಲಾ ಆವರಣದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಜೆಎಸ್‌ಎಸ್ ಪಬ್ಲಿಕ್ ಶಾಲೆ ಮಂಡ್ಯ ಆಯೋಜಿಸಿದ್ದ ವಾರ್ಷಿಕ ಕ್ರೀಡೋತ್ಸವ ಸಮಾರಂಭಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಪ್ರಸ್ತುತ ವಿದ್ಯಮಾನದ ದಿನಗಳಲ್ಲಿ ಸಾಧನೆ ಮಾಡುವ ವಿದ್ಯಾರ್ಥಿಗಳು ಮೊಬೈಲ್ ಮತ್ತು ಟಿ.ವಿ ವೀಕ್ಷಣೆಯಿಂದ ದೂರವಿರಬೇಕು, ಆಗತ್ಯಕ್ಕೆ ಅನುಗುಣವಾಗಿ ಮೊಬೈಲ್-ಟಿವಿ ವಿಕ್ಷಣೆ ಇರಲಿ, ಹೆಚ್ಚು ಪಠ್ಯ ಪುಸ್ತಕ ಓದು ಮತ್ತು ಬರಹದಿಂದ ಉತ್ತಮ ಭವಿಷ್ಯ ನಿಮ್ಮದಾಗುತ್ತದೆ ಎಂದು ನುಡಿದರು.

ಪ್ರತಿಯೊಬ್ಬ ವಿದ್ಯಾರ್ಥಿಯಲ್ಲೂ ಒಂದೊಂದು ಕ್ರೀಡಾ ಅಭಿರುಚಿ ಇರಲಿ, ದೇಹ ಮತ್ತು ಮನಸ್ಸು ಸದೃಢತೆಗಾಗಿ ಅನಿವಾರ್ಯ, ಕ್ರೀಡಾ ಮನೋಭಾವ ನಿಮ್ಮನ್ನು ಹೆಚ್ಚು ಜ್ಞಾನಿ ಮತ್ತು ಆರೋಗ್ಯವಂತರನ್ನಾಗಿಸುತ್ತದೆ ಎಂದು ಸಲಹೆ ನೀಡಿದರು. ಪ್ರತಿದಿನ ಒಂದು ಗಂಟೆ ನಮ್ಮ ಆರೋಗ್ಯಕ್ಕಾಗಿ ಕ್ರೀಡೆಗಳನ್ನು ಆಡಬೇಕು, ಒತ್ತಡ ನಿವಾರಣೆಯಾಗುತ್ತದೆ, ಆರೋಗ್ಯ ವೃದ್ಧಿಸುತ್ತದೆ, ಓದಿನ ಕಡೆ ಹೆಚ್ಚು ಆಸಕ್ತಿ ವೃದ್ಧಿಸುತ್ತದೆ, ಉತ್ತಮ ಮನಸ್ಥಿತಿ ನಿಮ್ಮದಾಗುತ್ತದೆ ಎಂದರು.

ಶಾಲೆಗಳಿಗೆ ಪ್ರತಿದಿನ ಬನ್ನಿ, ಒಂದೊಂದು ದಿನ ಒಂದು ರೀತಿಯ ಪಾಠ-ಪ್ರವಚನ ಮತ್ತು ಚಟುವಟಿಕೆಗಳು ಇರುತ್ತವೆ, ಕಲಿಯುತ್ತೀರಿ, ಒಂದು ದಿನ ಮಿಸ್ ಮಾಡಿಕೊಂಡಿ ಕೊಂಡರೆ ಮತ್ತೆ ಸಿಗೋದಿಲ್ಲ, ನೀವೇ ನಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕು ಎಂದು ತಿಳಿಸಿದರು.

ಇದೇ ಸಂಧರ್ಭದಲ್ಲಿ ವಿವಿಧ ಕ್ರೀಡೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ಮತ್ತು ಪ್ರಮಾಣಪತ್ರಗಳನ್ನು ಗಣ್ಯರು ವಿತರಿಸಿದರು.

ನಿಜಗುಣರಾಜು ಆರೋಪದಲ್ಲಿ ಯಾವುದೇ ಹುರುಳಿಲ್ಲ

• ಉದಯವಾಹಿನಿ, ಚಾಮರಾಜನಗರ,

ಉದಯವಾಹಿನಿ ಚಿತ್ರ

ಅಭಿವೃದ್ಧಿಗೆ ಸಹಕಾರ ನೀಡದ ನಿಜಗುಣರಾಜು

ಎಂಎಸ್‌ಐಎಲ್ ಅಧ್ಯಕ್ಷರು, ಶಾಸಕರಾದ ಸಿ.ಪುಟ್ಟರಂಗಶೆಟ್ಟಿ ಅವರ ವಿರುದ್ಧವಾಗಿ ಕಾಡಾ ಮಾಜಿ ಅಧ್ಯಕ್ಷ ನಿಜಗುಣರಾಜು ಮಾಡಿರುವ ಆರೋಪದಲ್ಲಿ ಯಾವುದೇ ಹುರುಳಿಲ್ಲ ಎಂದು ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್ ಸ್ಪಷ್ಟಪಡಿಸಿದರು.

ಪುಟ್ಟರಂಗಶೆಟ್ಟಿ ಅವರು ಹಿಂದುಳಿದ ವರ್ಗಗಳ ಇಲಾಖೆಯ ಸಚಿವರಾಗಿದ್ದ ಸಂದರ್ಭದಲ್ಲಿ ಅವರ ಆಪ್ತ ಸಹಾಯಕನ ಬಳಿ 25.76 ಲಕ್ಷ ಪತ್ತೆ ಪ್ರಕರಣ ಸಂಬಂಧ ಲೋಕಾಯುಕ್ತ ನ್ಯಾಯಾಲಯ ಮರು ತನಿಖೆಗೆ ಆದೇಶ ಹೊರಡಿಸಿರುವ ಹಿನ್ನೆಲೆಯಲ್ಲಿ ಪುಟ್ಟರಂಗಶೆಟ್ಟಿ ಎಂಎಸ್‌ಐಎಲ್, ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ತನಿಖೆಗೆ ಸಹಕರಿಸಬೇಕು ಎಂದು ನಿಜಗುಣರಾಜು ಪತ್ರಿಕಾಗೋಷ್ಠಿಯಲ್ಲಿ ಒತ್ತಾಯಿಸಿರುವುದು, ಶಾಸಕರ ರಾಜೀನಾಮೆ ಕೇಳುವ, ಮಾತನಾಡುವ ಯಾವುದೇ ನೈತಿಕತೆ ಅವರಿಗೆ ಇಲ್ಲ. ಪಕ್ಷದ ವರಿಷ್ಠರನ್ನು ಒಲೈಯಿಸಲು ಬಾಯಿ ಚಪಲಕ್ಕಾಗಿ ಶಾಸಕರ ವಿರುದ್ಧ ಮಾತನಾಡುತ್ತಾರೆ. ಇದು ಅವರಿಗೆ ಶೋಭೆ ತರಲ್ಲ ಎಂದರು.

ಕ್ಷೇತ್ರದ ಶಾಸಕರಾಗಿ ಪುಟ್ಟರಂಗಶೆಟ್ಟರು ಉತ್ತಮ ಕೆಲಸ ಕಾರ್ಯಗಳನ್ನು ಮಾಡಿದ್ದರಿಂದಲೇ ಅವರನ್ನು ಕ್ಷೇತ್ರದ ಜನರು ಸತತ ನಾಲ್ಕು ಬಾರಿ ಆಯ್ಕೆ ಮಾಡಿರುವುದು ಕಳೆದ ಅವಧಿಗಳ ಅಭಿವೃದ್ಧಿ ಕೆಲಸಗಳನ್ನು ನಾವು ಹೇಳುವುದಿಲ್ಲ. ಈ ಸಾರಿ ಅವರು ಶಾಸಕರಾದ ಬಳಿಕ ಕ್ಷೇತ್ರದ ವ್ಯಾಪ್ತಿಯ ಗ್ರಾಮಗಳ ರಸ್ತೆಗಳ ಅಭಿವೃದ್ಧಿಗೆ ನೂರಾರು ಕೋಟಿ ರೂ. ಅನುದಾನ ನೀಡಿದ್ದಾರೆ. ಸಿಮೆಂಟ್ ರಸ್ತೆ, ಗ್ರಾಮ ಸಂಪರ್ಕ ರಸ್ತೆಗಳ ಅಭಿವೃದ್ಧಿ, ರಾಷ್ಟ್ರೀಯ ರಾಜ್ಯ ಹೆದ್ದಾರಿಗಳ ಅಭಿವೃದ್ಧಿಯಲ್ಲಿ ತಮ್ಮದೇ ಅದ ವರ್ಚಸ್ಸು ಗಳಿಸಿ ಕ್ಷೇತ್ರದ ಅಭಿವೃದ್ಧಿ ಮಾಡಿದ್ದಾರೆ. ನಿಜಗುಣರಾಜು ಅವರು ಕೂಲಿಂಗ್ ಗ್ಲಾಸ್ ತೆಗೆದು ಕಾರಿನಿಂದ ಕೆಳಗಿಳಿದು ಹಳ್ಳಿ ಹಳ್ಳಿಗೆ ಹೋದರೆ ತಿಳಿಯುತ್ತದೆ. ಇನ್ನು ಫೆ. 17 ರಂದು ಚಾ.ನಗರಕ್ಕೆ ಸಿಎಂ. ಬರುತ್ತಿದ್ದು, ಅವರು ಕ್ಷೇತ್ರಕ್ಕೆ ಘೋಷಣೆ ಮಾಡುವ ಅನುದಾನವನ್ನು ನೋಡಲು ಸಮಾರಂಭಕ್ಕೆ ಬರಲಿ ಎಂದು ಪಂಥಾಹ್ವಾನ ಮಾಡಿದರು.

ಚುಡಾ ಅಧ್ಯಕ್ಷ ಮಹಮದ್ ಅಸ್ಗರ್ ಮಾತನಾಡಿ, ನಗರದ ಅಭಿವೃದ್ಧಿಯಲ್ಲಿ ನಿಜಗುಣರಾಜು, ರಸ್ತೆ ಸಾರ್ವಜನಿಕರ ಹಿತಕ್ಕಾಗಿ ರಸ್ತೆ ಆಗಲೀಕರಣ ಮಾಡಿ, ಒತ್ತುವರಿ ತೆರವು ಮಾಡಿ ಕೊಡಲು ಅನೇಕ ಬಾರಿ ಸೂಚನೆ ನೀಡಿದ್ದರೂ ಅಭಿವೃದ್ಧಿಗೆ ಸಹಕಾರ ನೀಡದ ನಿಜಗುಣರಾಜು ತಮ್ಮ ರೆಸಾರ್ಟ್ ಮುಂದೆ ಚರಂಡಿ ಮಾಡಲು ಬಿಡುತ್ತಿಲ್ಲ.

ಪುಸ್ತಕದಿಂದ ಜ್ಞಾನದೊಂದಿಗೆ ಲಕ್ಷ್ಮೀ ಪುತ್ರರಾಗಬಹುದು: ಡಾ.ಕೆ.ಚಿದಾನಂದಗೌಡ

• ಜ್ಞಾನಯುಗದಲ್ಲಿ ಪುಸ್ತಕಗಳನ್ನು ಹಿಡಿದರೆ ಜೀನದಲ್ಲಿ ಜ್ಞಾನ ಪಡೆಯುವುದರ ಜತೆಗೆ ಲಕ್ಷ್ಮೀ ಪುತ್ರರಾಗಬಹುದು

• ಉದಯವಾಹಿನಿ, ಮೈಸೂರು

ಉದಯವಾಹಿನಿ ಚಿತ್ರ

ಇಂದಿನ ರಾಜಕೀಯ, ಸಾಮಾಜಿಕ, ಧಾರ್ಮಿಕತೆಗಳಲ್ಲಿರುವ ಸಮಸ್ಯೆಗಳಿಗೆ ಕುವೆಂಪು ಅವರ ಕೃತಿಗಳಲ್ಲಿ ಪರಿಹಾರ ಕಾಣಸಿಗುತ್ತದೆ. ಕುವೆಂಪು ಅವರ ಕೆಲವು ಕೃತಿಗಳಲ್ಲಿ ಪರಿಸರದ ಪ್ರೇಮದ ಬಗ್ಗೆ ಹೇಳಿದ್ದರೆ ಅದರೊಳಗೆ ಮಾನವೀಯ ಮೌಲ್ಯಗಳನ್ನು ಬಿತ್ತುವ ಕೆಲಸ ಮಾಡಿದ್ದಾರೆ -ಪ್ರೊ.ಕೆ.ಎಂ.ಸಿದ್ದಪ್ಪ, ಶೇಷಾದ್ರಿಪುರಂ ಪದವಿ ಪೂರ್ವ ಕಾಲೇಜಿನ

ಇಂದಿನ ಯುಗವನ್ನು ಜ್ಞಾನಯುಗ ಎಂದು ಕರೆಯುತ್ತಾರೆ. ಇಂತಹ ಜ್ಞಾನಯುಗದಲ್ಲಿ ಪುಸ್ತಕಗಳನ್ನು ಹಿಡಿದರೆ ಜೀನದಲ್ಲಿ ಜ್ಞಾನ ಪಡೆಯುವುದರ ಜತೆಗೆ ಲಕ್ಷ್ಮೀ ಪುತ್ರರಾಗಬಹುದು ಎಂದು ಕುವೆಂಪು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಡಾ.ಕೆ. ಚಿದಾನಂದಗೌಡ ಹೇಳಿದರು.

ಲೆಗೆಸಿ ಕ್ಲಬ್ ಸಹಯೋಗದೊಂದಿಗೆ ಸಪ್ನಬುಕ್ ಹೌಸ್ ಆವರಣದಲ್ಲಿ ನಡೆದ ರಾಷ್ಟ್ರಕವಿ ಕುವೆಂಪು ಅವರ 120ನೇ ಜನ್ಮ ದಿನಾಚರಣೆ ಹಾಗೂ ಸಪ್ನಬುಕ್ ಹೌಸ್‌ನ 58ನೇ ವಾರ್ಷಿಕೋತ್ಸವದಲ್ಲಿ ಮಾತನಾಡಿದ ಅವರು, ಹಿಂದೆ ಪುಸ್ತಕಗಳನ್ನು ಪ್ರೀತಿಸುವವರು ಸರಸ್ವತಿ ಪುತ್ರರಾಗಿರುತ್ತಿದ್ದರು. ಲಕ್ಷ್ಮೀ ದೇವಿಯನ್ನು ಆರಾಧಿಸುವವರು ಲಕ್ಷ್ಮೀಪುತ್ರರಾಗಿರುತ್ತಿದ್ದರು. ಆದರೆ, 21ನೇ ಶತಮಾನದಲ್ಲಿ ಜ್ಞಾನದ ಸಹಾಯದಿಂದ ಸರಸ್ವತಿ ಪುತ್ರರು, ಲಕ್ಷ್ಮೀ ಪುತ್ರರಾಗಬಹುದು.

ಇನ್‌ಫೋಸಿಸ್ ನಾರಾಯಣ ಮೂರ್ತಿ ಸರಸ್ವತಿ ಪುತ್ರರಾಗಿದ್ದವರು. ಆದರೆ, ಅವರು ನಂಬಿದ ವಿದ್ಯೆ ಕೈ ಹಿಡಿದ ಪರಿಣಾಮ ಅವರು ಲಕ್ಷ್ಮೀ ಪುತ್ರರಾಗಿದ್ದಾರೆ ಎಂದರು.

ಸಪ್ನಬುಕ್ ಹೌಸ್ ಕೂಡ ಸರಸ್ವತಿಯ ಸೇವೆ ಮಾಡಿಕೊಂಡು ಬರುತ್ತಿದೆ. ಹೀಗಾಗಿ ಲಕ್ಷ್ಮೀಪುತ್ರರಾಗಿ ಹಲವಾರು ಶಾಖೆಗಳನ್ನು ತೆರೆದಿದ್ದಾರೆ ಎಂದು ಹೇಳಿದರು. ಕುವೆಂಪು ಅವರ ಮಾತುಗಳನ್ನು ಚಾಚು ತಪ್ಪದೆ ಪಾಲಿಸಿ ಬಂದರೆ ನಮ್ಮ ಸಮಾಜ ಸಮ ಸಮಾಜವಾಗಲಿದೆ. ಪ್ರತಿಯೊಬ್ಬರಿಗೂ ಸಮಾನತೆ ಸಿಗಬೇಕೆಂಬ ದೃಷ್ಟಿಯಿಂದ ಸರಳ ವಿವಾಹಕ್ಕೆ ಆದ್ಯತೆ ನೀಡಿದರು. ತೇಜಸ್ವಿ ಅವರ ಅಣ್ಣನ ನೆನಪು ಕೃತಿ ಓದಿದರೆ ಕುವೆಂಪು ಅವರ ಸಂಪೂರ್ಣ ವ್ಯಕ್ತಿತ್ವ ಕಣ್ಣ ಮುಂದೆ ಬರುತ್ತದೆ. ಕುವೆಂಪು ಅವರು ಧರ್ಮವನ್ನು ಎಲ್ಲೂ ವಿರೋಧ ಮಾಡಿದವರಲ್ಲ. ಧರ್ಮದಲ್ಲಿರುವ ನ್ಯೂನ್ಯತೆಗಳನ್ನು ಮಾತ್ರ ತೋರಿಸಿದರು. ಹೀಗಾಗಿ ನೂರು ದೇವರನೆಲ್ಲ ನೂಕಾಚೆ ದೂರ ಭಾರತಾಂಬೆ ದೇವಿ ನಮಗೆ ಪೂಜಿಸುವ ಬಾರ ಎಂದು ಸುಲಭವಾಗಿ ಹೇಳಿದವರು ಕುವೆಂಪು ಎಂದು ತಿಳಿಸಿದರು.

ಕವಿಯಾದವನು ಸಮಾಜವನ್ನು ಪರಿವರ್ತನೆ ಮಾಡುವ ನಿಟ್ಟಿನಲ್ಲಿ ಅವರ ಬರವಣಿಗೆ ಇರಬೇಕೆ ಹೊರತು ಒಂದು ಸಮುದಾಯಕ್ಕೆ, ಒಬ್ಬ ವ್ಯಕ್ತಿಗೆ ಮೆಚ್ಚಿಸಲು ಸಾಹಿತ್ಯ ಇರಬಾರದು. ಮಹಾಕಾವ್ಯಗಳ ಕಾಲಘಟ್ಟವೇ ಮುಗಿಯಿತು ಎನ್ನುವ ಸಂದರ್ಭದಲ್ಲಿ ವಿಶ್ವಮಟ್ಟದಲ್ಲಿ ನಮ್ಮ ಕನ್ನಡ ಸಾಹಿತ್ಯವನ್ನು ಗುರುತಿಸಲಾಗುತ್ತಿದೆ. ಇದಕ್ಕೆ ಕಾರಣ ಕುವೆಂಪು ಅವರ ಕೊಡುಗೆ ಎಂದರು.

ಕಾರ್ಯಕ್ರಮದಲ್ಲಿ ಕುವೆಂಪು ಅವರ ಪುತ್ರಿ ತಾರಿಣಿ ಚಿದಾನಂದ, ಲೆಗೆಸಿ ಕ್ಲಬ್ ಅಧ್ಯಕ್ಷ ಡಿ.ವಿ.ದಯಾನಂದ್ ಸಾಗರ್ ಸೇರಿದಂತೆ ಇತರರು ಹಾಜರಿದ್ದರು.

ಮನುಕುಲದ ಉದ್ಧಾರಕ್ಕಾಗಿ ರಚನೆ

ಕುವೆಂಪು ಅವರ ಸಾಹಿತ್ಯವನ್ನು ಮನುಕುಲದ ಉದ್ಧಾರಕ್ಕಾಗಿ ರಚನೆ ಮಾಡಿದವರು. ಕುವೆಂಪು ಅವರ ಜಗದ ಜಲಗಾರ ನಾಟಕದಲ್ಲಿ ಶಿವನೇ ಒಬ್ಬ ಸಾಮಾನ್ಯ ಜನರ ಬಳಿ ಬರುವಂತೆ ಮಾಡಿದ್ದಾರೆ. ಇದು ಕುವೆಂಪು ಅವರ ಸಾಹಿತ್ಯಕ್ಕೆ ಇರುವ ಶಕ್ತಿ. ಕುವೆಂಪು ಅವರ ಕೃತಿಗಳು ತಳವರ್ಗದವರಿಗೆ ಆತ್ಮಸ್ಥೈರ್ಯ ತುಂಬುವ ಕೆಲಸ ಮಾಡಿದ್ದರೆ, ಮೇಲ್ವರ್ಗದವರಿಗೆ ಆತ್ಮ ವಿಮರ್ಶೆ ಹುಟ್ಟುವಂತೆ ಮಾಡಿದೆ ಎಂದರು.

ಇಂದಿನ ಯುಗ ಜ್ಞಾನ ಯುಗ

ರಾತ್ರಿ ಲೈಟ್ ಹಾಕಿರೋ ಮನೆಗಳನ್ನೇ ಟಾರ್ಗೆಟ್
ಕಳ್ಳತನ ಪತಿ ಕಾರ್ಯಕ್ಕೆ ಹೆಂಡ್ತಿ, ಸ್ನೇಹಿತರ ಸಾಥ್

• ಉದಯವಾಹಿನಿ, ಚಿಕ್ಕಬಳ್ಳಾಪುರ

ಉದಯವಾಹಿನಿ ಚಿತ್ರ

ಎರಡು ಮೂರು ದಿನ ಸಂಬಂಧಿಕರ ಮನೆಗೆ ಕುಟುಂಬ ಸಮೇತ ಹೋಗುವಾಗ ಮನೆಯಲ್ಲಿ ಲೈಟ್ ಹಾಕಿ ಹೋಗೋದು ಸಾಮಾನ್ಯ, ಬೆಳಕಿದ್ರೆ ಯಾರೋ ಮನೆಯಲ್ಲಿದ್ದಾರೆ. ಕಳ್ಳರು ಮನೆಗೆ ನುಗ್ಗಲ್ಲ ಎಂಬ ಗ್ಯಾರಂಟಿ! ಆದರೆ ಇಲ್ಲೊಬ್ಬ ಕಿಲಾಡಿ ಕಳ್ಳ ದಂಪತಿ ಅಂತಹ ಮನೆಗಳನ್ನೇ ಟಾರ್ಗೆಟ್ ಮಾಡಿ ಕಳ್ಳತನ ಮಾಡಿ ಪೊಲೀಸರ ಅತಿಥಿ ಆಗಿದ್ದಾರೆ.

ಬಂಧಿತ ಆರೋಪಿಗಳನ್ನು ನೂರುಲ್ಲಾ ಅಲಿಯಾಸ್ ಖಾರದಪುಡಿ ನೂರುಲ್ಲಾ, ಆತನ ಸ್ನೇಹಿತ ವಿನೋದ್ ಮಾರ್ಕಕರ್ ಹಾಗೂ ಸಾಗಾರ್ ಎಂದು ಗುರುತಿಸಲಾಗಿದೆ. ಈತ ಹೋದ ಕಡೆಯಲ್ಲೆಲ್ಲಾ ಒಂದೊಂದು ಹೆಸರು ಹೇಳಿಕೊಂಡು ಮನೆಗಳ್ಳತನ ಮಾಡೋದನ್ನ ಕಾಯಕ ಮಾಡಿಕೊಂಡಿದ್ದ. ಈತನಿಗೆ ಸ್ವತಃ ಈತನ ಹೆಂಡತಿ ಹಮೀನಾಬಿ ಹಾಗೂ ಸ್ನೇಹಿತರಾದ ವಿನೋದ್ ಮಾರ್ಕಕರ್, ಸೇರಿದಂತೆ ಸಾಗಾರ್ ಸಾಥ್ ಕೊಡುತ್ತಿದ್ದರು. ಆರೋಪಿ ಹಮೀನಾಬಿ ತಲೆ ಮರೆಸಿಕೊಂಡಿದ್ದಾಳೆ. ಈ ನಾಲ್ಕು ಮಂದಿ ಜ.10 ರಂದು ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ನಗರದ ತ್ಯಾಗರಾಜ ಕಾಲೋನಿಯಲ್ಲಿ ಅಶ್ವತ್ಥನಾರಾಯಣಶೆಟ್ಟಿ ಎಂಬವರ ಮನೆಯಲ್ಲಿ ಕಳ್ಳತನ ಮಾಡಿದ್ದರು. ಅಶ್ವತ್ಥನಾರಾಯಣಶೆಟ್ಟಿ ಪತ್ನಿ ಸಮೇತ ಮಗನ ಮನೆಗೆ ಬೆಂಗಳೂರಿಗೆ ಹೋಗಿದ್ದರು.

ಈ ವೇಳೆ ಕಳ್ಳರ ಭಯದಿಂದ ಮನೆಯಲ್ಲಿ ಒಂದು ಲೈಟ್ ಆನ್ ಮಾಡಿ ಹೋಗಿದ್ದರು. ಆದರೂ ಕೈಚಳಕ ತೋರಿದ್ದ ನೂರುಲ್ಲಾ ಹಾಗೂ ಆತನ ಗ್ಯಾಂಗ್ ಮನೆಯ ಬಿರುವಿನಲ್ಲಿದ್ದ 412 ಗ್ರಾಂ ಚಿನ್ನಾಭರಣ ಸೇರಿದಂತೆ ಎರಡೂವರೆ ಕೆಜಿ ಬೆಳ್ಳಿ ಆಭರಣಗಳು ಹಾಗೂ 1 ಲಕ್ಷ ರೂ. ನಗದನ್ನು ದೋಚಿತ್ತು.

ಗೌರಿಬಿದನೂರು ಪೊಲೀಸರು ಆರೋಪಿಗಳನ್ನ ಹಿಡಿಯಲು ಹೋದಾಗ ಕಾರು ಅಪಘಾತವಾಗಿ ಗಾಯಗೊಂಡಿದ್ದರು. ಆದರೆ ಅದೃಷ್ಟವಶಾತ್ ಪ್ರಾಣಾಪಾಯದಿಂದ ಪೊಲೀಸರು ಪಾರಾಗಿದ್ದರು. ಇದೀಗ ಪಟ್ಟು ಬಿಡದೆ ಕಳ್ಳರನ್ನ ಬಂಧಿಸಿ ಮಾಲನ್ನು ವಶಪಡಿಸಿಕೊಂಡಿದ್ದಾರೆ.

ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಜಿ

• ಉದಯವಾಹಿನಿ, ತುಮಕೂರು

ಮೈಸೂರಿನ ಕರಾಮುವಿಯ ತುಮಕೂರು ಪ್ರಾದೇಶಿಕ ಕೇಂದ್ರದಲ್ಲಿ 2024-25ನೇ ಶೈಕ್ಷಣಿಕ ಸಾಲಿನ ಜನವರಿ ಆವೃತ್ತಿಯ ಯುಜಿಸಿ ಅನುಮೋದಿತ ಕೋರ್ಸ್ ಗಳ ಪ್ರವೇಶಾತಿಗೆ ಆನ್ ಲೈನ್ ಮೂಲಕ ಅರ್ಜಿ ಆಹ್ವಾನಿಸಿದ್ದು, ಸ್ನಾತಕ/ಸ್ನಾತಕೋತ್ತರ ಕೋರ್ಸ್ ಗಳಾದ ಬಿ.ಎ, ಬಿ.ಕಾಂ, ಬಿ.ಬಿ.ಎ, ಬಿ.ಸಿ.ಎ, ಬಿ.ಲಿಬ್.ಐ.ಎಸ್ಸಿ., ಬಿ.ಎಸ್ಸಿ., ಬಿ.ಎಸ್.ಡಬ್ಲ್ಯೂ., ಎಂ.ಎ., ಎಂ.ಸಿ.ಜೆ., ಎಂ.ಕಾಂ., ಎಂ.ಎಸ್ಸಿ., ಎಂ.ಲಿಬ್.ಐ.ಎಸ್ಸಿ., ಎಂ.ಬಿ.ಎ., ಎಂ.ಸಿ.ಎ., ಎಂ.ಎಸ್.ಡಬ್ಲ್ಯೂ ಮತ್ತು ಪಿ.ಜಿ ಸರ್ಟಿಫಿಕೇಟ್., ಡಿಪ್ಲೊಮಾ., ಸರ್ಟಿಫಿಕೇಟ್ ಕೋರ್ಸ್ ಗಳಿಗೆ ಪ್ರವೇಶಾತಿ ಮಾಡಿಕೊಳ್ಳಲಾಗುತ್ತಿದೆ.

ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯ ಮಾತ್ರ ರಾಜ್ಯದಲ್ಲಿ ದೂರ ಶಿಕ್ಷಣ ನೀಡುವ ಏಕ ಮಾತ್ರ ವಿಶ್ವವಿದ್ಯಾನಿಲಯವಾಗಿರುತ್ತದೆ. ಯುಜಿಸಿ ನಿಯಮಾವಳಿ ಪ್ರಕಾರ ಮುಕ್ತ ವಿಶ್ವವಿದ್ಯಾನಿಲಯಗಳ ದೂರ ಶಿಕ್ಷಣದ ಪದವಿ ಮತ್ತು ಸಾಂಪ್ರದಾಯಿಕ ವಿವಿಗಳು ನೀಡುವ ಶಿಕ್ಷಣ ಕ್ರಮಗಳ ಪದವಿಗಳಿಗೆ ಸಮನಾಗಿರುತ್ತದೆ.

ಪ್ರಥಮ ವರ್ಷದ ಪ್ರವೇಶಾತಿ ಶುಲ್ಕದ ವಿವರ: ಬಿ.ಎ-ರೂ.8,400/-., ಬಿ.ಕಾಂ.-ರೂ.8,900/-.,ಬಿ.ಬಿ.ಎ/ಬಿ.ಎಲ್.ಐ.ಎಸ್ಸಿ-12,400/-.,ಬಿ.ಸಿ.ಎ/ಬಿ.ಎಸ್ಸಿ-ರೂ.23,900/-.,ಬಿ.ಎಸ್.ಡಬ್ಲ್ಯೂ-ರೂ.12,900/-., ಎಂ.ಎ-ರೂ.10,600/-., ಎಂ.ಸಿ.ಜೆ-ರೂ.16,200/-., ಎಂ.ಕಾಂ-ರೂ.12,400/-., ಎಂ.ಬಿ.ಎ--ರೂ.29,900/-., ಎಂ.ಎಸ್ಸಿ/ಎಂ.ಸಿ.ಎ-ರೂ.29,700/-., ಎಂ.ಎಸ್.ಡಬ್ಲ್ಯೂ-ರೂ.21,300/-., ಎಂ.ಎಲ್.ಐ.ಎಸ್ಸಿ-ರೂ.18,150/-ಗಳಾಗಿರುತ್ತದೆ.

ಬೋಧನಾ ಶುಲ್ಕ ರಿಯಾಯಿತಿ: ಬಿಪಿಎಲ್ ಕಾರ್ಡ್ ಹೊಂದಿರುವ ಮಹಿಳಾ ವಿದ್ಯಾರ್ಥಿಗಳಿಗೆ, ಡಿಫೆನ್ಸ್/ಮಾಜಿ ಸೈನಿಕ ವಿದ್ಯಾರ್ಥಿಗಳಿಗೆ, ಆಟೋ/ಕ್ಯಾಬ್ ಚಾಲಕರು ಮತ್ತು ಅವರ ಪತಿ/ಪತ್ನಿ ಹಾಗೂ ಇಬ್ಬರು ಮಕ್ಕಳಿಗೆ, ಕೆಎಸ್‌ಆರ್‌ಟಿಸಿ/ಬಿಎಂಟಿಸಿ ನೌಕರರಿಗೆ ಸ್ನಾತಕ/ಸ್ನಾತಕೋತ್ತರ ಪದವಿಗಳ ಬೋಧನಾ ಶುಲ್ಕದಲ್ಲಿ 10% ರಿಯಾಯಿತಿ ಇರುತ್ತದೆ.

ಉಚಿತ ಪ್ರವೇಶಾತಿ: ಕೋವಿಡ್ ನಿಂದ ಮರಣ ಹೊಂದಿದ ಪೋಷಕ ಮಕ್ಕಳಿಗೆ, ಟ್ರಾನ್ಸ್‌ಜೆಂಡರ್/ತೃತೀಯ ಲಿಂಗಿಗಳಿಗೆ, ದೃಷ್ಟಿ ಹೀನ ವಿದ್ಯಾರ್ಥಿಗಳಿಗೆ (ಬಿ.ಎಡ್/ಎಂ.ಬಿ.ಎ ಹೊರತು ಪಡಿಸಿ) ಉಚಿತ ಪ್ರವೇಶಾತಿ ನೀಡಲಾಗುತ್ತಿದೆ.

ಹೆಚ್ಚಿನ ವಿವರಗಳಿಗಾಗಿ: ಪ್ರಾದೇಶಿಕ ನಿರ್ದೇಶಕರು, ಕರಾಮುವಿ ತುಮಕೂರು ಪ್ರಾದೇಶಿಕ ಕೇಂದ್ರ, ರಾಜೀವ್‌ಗಾಂಧಿ ನಗರ, ಗಂಗಸಂದ್ರ ಮುಖ್ಯರಸ್ತೆ, ಮೆಳೆಕೋಟೆ, ತುಮಕೂರು-572105 ದೂರವಾಣಿ ಸಂಖ್ಯೆ-0816-2955580, 9844506629, 9886112434, 7349474339 ಅನ್ನು ಸಂಪರ್ಕಿಸಬಹುದೆಂದು ಪ್ರಾದೇಶಿಕ ನಿರ್ದೇಶಕರಾದ ಡಾ. ಲೋಕೇಶ ಆರ್ ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕುಶಾಲನಗರ ಏರ್‌ಸ್ಟ್ರಿಪ್ ಯೋಜನೆ ಕೊಡಗು ಪ್ರವಾಸಿಗರಿಗೆ ಅನುಕೂಲ

• ಉದಯವಾಹಿನಿ, ಮಡಿಕೇರಿ

ಉದಯವಾಹಿನಿ ಚಿತ್ರ

**ಕೇಂದ್ರ ಸರ್ಕಾರದ ಘೋಷಣೆ ಬಳಿಕ ಮೈಸೂರು-ಕೊಡಗು ಸಂಸದ ಯದುವೀರ್ ಒಡೆಯರ್ ಪ್ರತಿಕ್ರಿಯೆ ನೀಡಿದ್ದು, ಉಡಾನ್ ಯೋಜನೆಯಡಿ ಅಭಿವೃದ್ಧಿಪಡಿಸಲಿರುವ ಐದು ಹೊಸ ಏರ್‌ಸ್ಟ್

ಅಂತರಾಳದಿಂದ... EDITORIAL

ಎಎಪಿ ನೇತೃತ್ವದ ದೆಹಲಿ ಸರ್ಕಾರ ಮತ್ತು ಕೇಂದ್ರ ಸರ್ಕಾರದ ನಡುವೆ ನಿರಂತರವಾಗಿ ಸಂಘರ್ಷ ನಡೆಯುತ್ತಲೇ ಇತ್ತು. ದೆಹಲಿ ಸರ್ಕಾರದ ಕಾರ್ಯನಿರ್ವಹಣೆಯೇ ಕಷ್ಟಕರ ಎಂಬ ಸ್ಥಿತಿ ನಿರ್ಮಾಣ ಆಗಿತ್ತು. ಹಾಗಾಗಿ, ಡಬಲ್ ಎಂಜಿನ್ ಸರ್ಕಾರ ಎಂಬ ಘೋಷಣೆಯು ಜನರ ಮೇಲೆ ಪ್ರಭಾವ ಬೀರಿರುವ ಸಾಧ್ಯತೆಯೂ ಇದೆ.

ತಾನೇ ಸೃಷ್ಟಿಸಿಕೊಂಡ ತೊಡಕುಗಳು

ಎಎಪಿ ಸೋಲಿಗೆ ಮುಖ್ಯ ಕಾರಣ

ದೆಹಲಿ ವಿಧಾನಸಭೆ ಚುನಾವಣೆಯಲ್ಲಿ ಆಮ್ ಆದ್ಮ ಪಕ್ಷವು (ಎಎಪಿ) ಕಠಿಣ ಸವಾಲು ಎದುರಿಸುತ್ತಿದೆ ಅಥವಾ ಅದು ಗೆಲ್ಲುವ ಸಾಧ್ಯತೆಯೇ ಇಲ್ಲ ಎಂದು ಭಾವಿಸಿದ್ದವರು ಕೂಡ ಆ ಪಕ್ಷವು ಈ ರೀತಿಯಲ್ಲಿ ಕುಸಿದು ಹೋಗುತ್ತದೆ ಎಂದು ಅಂದಾಜು ಮಾಡಿರಲಿಕ್ಕಿಲ್ಲ. ಬಿಜೆಪಿಯ ದೊಡ್ಡ ಗೆಲುವು ಕೂಡ ಆಶ್ಚರ್ಯಕರವೇ ಆಗಿದೆ. ಎಎಪಿಯು ತನಗೆ ತಾನೇ ಹಲವು ತೊಡಕುಗಳನ್ನು ಸೃಷ್ಟಿಸಿಕೊಂಡಿತ್ತು. ಭ್ರಷ್ಟಾಚಾರ ವಿರೋಧಿ ನೀತಿಯನ್ನು ಮುಂಚೂಣಿಯಲ್ಲಿ ಇರಿಸಿಕೊಂಡು ಈ ಪಕ್ಷವು ದೆಹಲಿ ರಾಜಕಾರಣವನ್ನು ಪ್ರವೇಶಿಸಿತ್ತು. ರಾಜಕಾರಣ ಮತ್ತು ಆಡಳಿತವನ್ನು ಶುದ್ಧೀಕರಿಸುವುದಾಗಿ ಭರವಸೆ ನೀಡಿತ್ತು. ಅಧಿಕಾರಕ್ಕೆ ಬಂದ ಮೇಲೆ ಜನಕಲ್ಯಾಣದ ಹಲವು ಕಾರ್ಯಕ್ರಮಗಳನ್ನು ಜಾರಿಗೊಳಿಸಿತ್ತು ಮತ್ತು ಅವು ಜನರಿಗೆ ಪ್ರಿಯವೂ ಆಗಿದ್ದವು. ಈ ಪಕ್ಷಕ್ಕೆ ವರ್ಚಸ್ವಿ ನಾಯಕತ್ವ ಇತ್ತು, ಭೂತಕಾಲದ ಹೊರೆಯೇನೂ ಇಲ್ಲದ ಮುಖಂಡರು ಇದ್ದರು. ಆದರೆ, ಕ್ರಮೇಣ ನೀತಿಯು ಸೊರಗುತ್ತಾ ಹೋಯಿತು, ಆರೋಗ್ಯ ಮತ್ತು ಶಿಕ್ಷಣದಂತಹ ಕ್ಷೇತ್ರಗಳಲ್ಲಿ ಮಾಡಿದ ಸುಧಾರಣೆಗಳು ಹೊಸ ಯೋಚನೆಗಳು ಇಲ್ಲದೆ ಜಡವಾಗುತ್ತಾ ಹೋದವು. ಕುಡಿಯುವ ನೀರು ಪೂರೈಕೆ, ತ್ಯಾಜ್ಯ ವಿಲೇವಾರಿ ಮತ್ತು ಯಮುನಾ ನದಿ ಸ್ವಚ್ಛಗೊಳಿಸು ವಿಕೆಯಂತಹ ವಿಚಾರಗಳಲ್ಲಿ ಎಎಪಿ ನೇತೃತ್ವದ ಸರ್ಕಾರ ಯಶಸ್ಸು ಕಾಣಲಿಲ್ಲ. ಎಲ್ಲಾಕ್ಕಿಂತ ಮುಖ್ಯವಾಗಿ, ಭ್ರಷ್ಟಾಚಾರದ ಆರೋಪಗಳು ಎಎಪಿ ನಾಯಕರ ಬಗ್ಗೆ ಇದ್ದ ವಿಶ್ವಾಸಾರ್ಹತೆಯು ಕುಸಿಯುವಂತೆ ಮಾಡಿದವು. ಕೇಳಿಬಂದ ಆರೋಪಗಳು ಸತ್ಯವೇ ಅಥವಾ ಸುಳ್ಳೇ ಎಂಬುದು ಬೇರೆ ವಿಷಯವಾದರೂ ಒಂದು ಜನವರ್ಗ ಪಕ್ಷದಿಂದ ದೂರ ಸರಿಯಲು ಅವು ಸಾಕಾದವು. ಅರವಿಂದ ಕೇಜ್ರಿವಾಲ್ ಸೇರಿ ಮುಂಚೂಣಿ ನಾಯಕರು ಜೈಲು ಸೇರಿದ್ದು ಪಕ್ಷದ ಕುಸಿತಕ್ಕೆ ವೇಗ ಕೊಟ್ಟಿತು. ಎಎಪಿಗೆ ಪ್ರಾದೇಶಿಕ ಪಕ್ಷವೊಂದರ ಬೇರುಗಳಾಗಲಿ, ಗಟ್ಟಿಯಾದ ಸಿದ್ಧಾಂತವಾಗಲಿ ಇರಲಿಲ್ಲ. ಪಕ್ಷವು ಕೆಲವು ನೀತಿಗಳನ್ನು ಮಾತ್ರ ನೆಚ್ಚಿಕೊಂಡಿತ್ತು ಮತ್ತು ಈ ಬಗ್ಗೆ ಜನರಲ್ಲಿ ಇದ್ದ ಮನೋಭಾವ ಭಿನ್ನವಾಗಿತ್ತು. ಈಗ, ಗೆದ್ದಿರುವ ಬಿಜೆಪಿ ಮತ್ತು ಸೋತಿರುವ ಎಎಪಿ ನಡುವಣ ಮತ ಪ್ರಮಾಣದ ವ್ಯತ್ಯಾಸ ಶೇಕಡ 2ರಷ್ಟು ಮಾತ್ರ. ಆದರೆ, ಕಳೆದ ವಿಧಾನಸಭಾ ಚುನಾವಣೆಗೆ ಹೋಲಿಸಿದರೆ ಎಎಪಿ ಕಳೆದುಕೊಂಡಿರುವ ಮತ ಪ್ರಮಾಣ ಸುಮಾರು ಶೇ 10ರಷ್ಟು. ಎರಡು ಪಕ್ಷಗಳ ನಡುವಣ ನೇರ ಹೋರಾಟವಾದ ಕಾರಣಕ್ಕೆ ಬಿಜೆಪಿಯ ಗೆಲುವು ಇನ್ನಷ್ಟು ದೊಡ್ಡದಾಗಿ ಕಾಣಿಸುತ್ತಿದೆ. ಅತ್ಯಂತ ವ್ಯವಸ್ಥಿತವಾದ ಚುನಾವಣಾ ಪ್ರಚಾರವು ಬಿಜೆಪಿಯ ಹೆಗ್ಗುರುತು. ಸಣ್ಣ ಸಣ್ಣ ವಿಚಾರಗಳಿಗೂ ಆ ಪಕ್ಷವು ಆದ್ಯತೆ ನೀಡುತ್ತದೆ. ಜನರನ್ನು ಮೋಡಿ ಮಾಡುವ ನರೇಂದ್ರ ಮೋದಿ ಅವರಂತಹ ವಾಸ್ತುವಿನ ನೆರವು ಆ ಪಕ್ಷಕ್ಕೆ ಇದೆ. ಎಎಪಿ ನೇತೃತ್ವದ ಸರ್ಕಾರದ ಮೇಲೆ ನಿರಂತರವಾಗಿ ಆರೋಪಗಳನ್ನು ಮಾಡುತ್ತಾ ಹಲವು ತಿಂಗಳ ಮೊದಲೇ ಬಿಜೆಪಿ ಚುನಾವಣಾ ಪ್ರಚಾರವನ್ನು ಆರಂಭಿಸಿತ್ತು. ಜನರ ಮನಮುಟ್ಟುವಂತಹ ವಿಚಾರಗಳನ್ನು ಆ ಪಕ್ಷವು ಪ್ರಚಾರಕ್ಕೆ ಬಳಸಿಕೊಂಡಿತು. ಎಎಪಿ ನೀಡಿದ್ದ ಕೊಡುಗೆಗಳನ್ನು ಇನ್ನಷ್ಟು ಉತ್ತಮಪಡಿಸುವ ಭರವಸೆಯನ್ನೂ ನೀಡಿತು. ಆದಾಯ ತೆರಿಗೆ ವಿನಾಯಿತಿಯಲ್ಲಿ ದೊಡ್ಡ ಮಟ್ಟದ ಏರಿಕೆಯು ಮಧ್ಯಮ ವರ್ಗವೇ ಹೆಚ್ಚಾಗಿರುವ ದೆಹಲಿಯಂತಹ ನಗರದ ಮತದಾರರ ಮೇಲೆ ಪ್ರಭಾವ ಬೀರಿರಬಹುದು. ಎಲ್ಲಾ ವರ್ಗಗಳ ಜನರನ್ನೂ ಮೋಡಿ ಮಾಡುವಲ್ಲಿ ಬಿಜೆಪಿ ಯಶಸ್ವಿಯಾಗಿದೆ ಎಂಬುದನ್ನು ಫಲಿತಾಂಶವು ತೋರಿಸುತ್ತಿದೆ. ಎಎಪಿ ನೇತೃತ್ವದ ದೆಹಲಿ ಸರ್ಕಾರ ಮತ್ತು ಕೇಂದ್ರ ಸರ್ಕಾರದ ನಡುವೆ ನಿರಂತರವಾಗಿ ಸಂಘರ್ಷ ನಡೆಯುತ್ತಲೇ ಇತ್ತು. ದೆಹಲಿ ಸರ್ಕಾರದ ಕಾರ್ಯನಿರ್ವಹಣೆಯೇ ಕಷ್ಟಕರ ಎಂಬ ಸ್ಥಿತಿ ನಿರ್ಮಾಣ ಆಗಿತ್ತು. ಹಾಗಾಗಿ, ಡಬಲ್ ಎಂಜಿನ್ ಸರ್ಕಾರ ಎಂಬ ಘೋಷಣೆಯು ಜನರ ಮೇಲೆ ಪ್ರಭಾವ ಬೀರಿರುವ ಸಾಧ್ಯತೆಯೂ ಇದೆ. ಕಾಂಗ್ರೆಸ್ ಪಕ್ಷಕ್ಕೆ ಒಂದು ಸ್ಥಾನವನ್ನೂ ಗೆಲ್ಲುವುದಕ್ಕೆ ಸಾಧ್ಯವಾಗಿಲ್ಲ. ಆದರೆ, ಆ ಪಕ್ಷ ಗಳಿಸಿದ ಮತ ಪ್ರಮಾಣದಲ್ಲಿ ಸ್ವಲ್ಪ ಏರಿಕೆ ಆಗಿದೆ. ಕಾಂಗ್ರೆಸ್ ಜೊತೆಗೆ ಮೈತ್ರಿ ಸಾಧ್ಯವಾಗಿದ್ದಿದ್ದರೆ ಎಎಪಿಯ ಸ್ಥಿತಿ ಈಗಿರುವುದಕ್ಕಿಂತ ಉತ್ತಮವಾಗಿರುತ್ತಿತ್ತು ಎಂದು ಹೇಳಲಾಗುತ್ತಿದೆ. ಮತದಾರರ ಆಯ್ಕೆಯನ್ನು ಈ ರೀತಿಯ ಲೆಕ್ಕಾಚಾರದ ಮೂಲಕ ಅಳೆಯಲು ಸಾಧ್ಯವಿಲ್ಲ. ಅದೇನೇ ಇದ್ದರೂ ಎಎಪಿಗೆ ನೆರವಾಗುವುದು ಕಾಂಗ್ರೆಸ್ ಪಕ್ಷಕ್ಕೆ ಬೇಕಾಗಿರಲಿಲ್ಲ. ಎಎಪಿಗೆ ಹಾನಿ ಉಂಟು ಮಾಡಿ ಅದರ ಬಲ ಕುಗ್ಗಿಸುವುದು ತನ್ನ ಹಿತಾಸಕ್ತಿಗೆ ಪೂರಕ ಎಂಬ ಭಾವನೆ ಕಾಂಗ್ರೆಸ್‌ನಲ್ಲಿ ಇತ್ತು. ಬಿಜೆಪಿಯೇತರ ಪಕ್ಷಗಳ ಕೂಟವಾಗಿರುವ 'ಇಂಡಿಯಾ' ಮೇಲೆ ಈ ಫಲಿತಾಂಶದ ಪರಿಣಾಮ ಏನು ಎಂಬುದು ಇನ್ನಷ್ಟೇ ತಿಳಿಯಬೇಕಿದೆ.

ಬಹುಮುಖ ಪ್ರತಿಭೆ ಕು. ಅನನ್ಯ ಶ್ರೀಕಾಂತ್

ರಂಗಪ್ರವೇಶ

ಕರ್ನಾಟಕ ಸರ್ಕಾರದ ಜೂನಿಯರ್ ನೃತ್ಯಪರೀಕ್ಷೆಯಲ್ಲಿ ಡಿಸ್ಟಿಂಕ್ಷನ್ ಪಡೆದ ವಿಶೇಷ ಅವಳದು. ಅಖಿಲ ಭಾರತೀಯ ಗಂಧರ್ವ ಮಹಾವಿದ್ಯಾಲಯ ಮಂಡಲದಿಂದ ಮಾಧ್ಯಮ ಪೂರ್ಣ ನೃತ್ಯಪರೀಕ್ಷೆಯನ್ನೂ ವಿಶೇಷಾಂಕಗಳಿಂದ ತೇರ್ಗಡೆಯಾದ ಹೆಮ್ಮೆ ಅವಳದು.

ಮೋಹಕ ಕಲಾವಿದೆಯ ಪ್ರಥಮಹೆಜ್ಜೆ

ಕಲಾ ಸಾಹಿತ್ಯ
ವೈ.ಕೆ. ಸಂಧ್ಯಾಶರ್ಮ
ಲೇಖಕರು
ರಂಗಕರ್ಮಿ ಹಾಗೂ ನೃತ್ಯ ನಾಟಕಗಳ ವಿಮರ್ಶಕರು

ಖ್ಯಾತ 'ಸ್ಕೆಚರಲ್ ಸ್ಕೂಲ್ ಆಫ್ ಫೈನ್ ಆರ್ಟ್ಸ್' ನೃತ್ಯಶಾಲೆಯ ಬದ್ಧತೆಯ ಉತ್ತಮ ನೃತ್ಯಗುರು-ಭರತನಾಟ್ಯ ನೃತ್ಯಕಲಾವಿದೆ ಅಕ್ಷರಾ ಭಾರದ್ವಾಜ್ ಅವರ ಸಮರ್ಥ ಮಾರ್ಗದರ್ಶನದಲ್ಲಿ ರೂಪುಗೊಳ್ಳುತ್ತಿರುವ ಭರವಸೆಯ ನೃತ್ಯಗಾರ್ತಿ ಕು. ಅನನ್ಯ ಶ್ರೀಕಾಂತ್ ಬಹುಮುಖ ಪ್ರತಿಭೆಯ ಕಲಾವಿದೆ.

ನೃತ್ಯದೊಡನೆ, ಯೋಗ, ಪಿಯಾನೋ ವಾದನ, ಅಬಾಕಸ್ ಬಲ್ಲ, ಶ್ರೀಕಾಂತ್ ಮತ್ತು ಗೀತಾ ದಂಪತಿಯ ಪುತ್ರಿಯಾದ ಅನನ್ಯ ಕಳೆದ 9 ವರ್ಷಗಳಿಂದ ಅಕ್ಷರ ಭಾರಧ್ವಾಜರ ಬಳಿ ನಿಷ್ಠೆಯಿಂದ ನೃತ್ಯಾಭ್ಯಾಸ ಮಾಡುತ್ತಿದ್ದು, ನಾಡಿನಾದ್ಯಂತ ಅನೇಕ ಕಾರ್ಯಕ್ರಮಗಳಲ್ಲಿ ನರ್ತಿಸಿ ಮೆಚ್ಚುಗೆ ಗಳಿಸಿದ್ದಾಳೆ. ಇದೀಗ ಅನನ್ಯ ವಿದ್ಯುಕ್ತವಾಗಿ ತನ್ನ ಏಕವ್ಯಕ್ತಿ ಪ್ರದರ್ಶನ 'ರಂಗಪ್ರವೇಶ'ವನ್ನು ಇದೇ ತಿಂಗಳ 19 ಬುಧವಾರದಂದು ಸಂಜೆ 6.30 ಗಂಟೆಗೆ ಜೆ.ಸಿ ರಸ್ತೆಯ ಎ.ಡಿ .ಎ. ರಂಗಮಂದಿರದಲ್ಲಿ ನೆರವೇರಿಸಿಕೊಳ್ಳಲಿದ್ದಾಳೆ. ಈ ಮೋಹಕ ಕಲಾವಿದೆಯ ಕಲಾತ್ಮಕ ನರ್ತನವನ್ನು ವೀಕ್ಷಿಸಲು ಎಲ್ಲಾ ಕಲಾರಸಿಕರಿಗೂ ಆದರದ ಸ್ವಾಗತ.

ಬೆಂಗಳೂರಿನ ಶ್ರೀಕಾಂತ್ ಮತ್ತು ಗೀತಾ ಶ್ರೀಕಾಂತ್ ಸುಪುತ್ರಿ ಅನನ್ಯ ಬಾಲಪ್ರತಿಭೆ. ತನ್ನ ನಾಲ್ಕನೆಯ ವಯಸ್ಸಿಗೇ ದೋಹಾದಲ್ಲಿ ಶ್ರೀಮತಿ ಜೆರಿನ್ ಶಾಜಿ ಅವರಿಂದ ನೃತ್ಯ ಕಲಿಯಲು ಆರಂಭಿಸಿದವಳು ವರ್ಷದ ನಂತರ ಬೆಂಗಳೂರಿಗೆ ಬಂದು ಅಕ್ಷರಾ ಅವರಲ್ಲಿ ಭರತನಾಟ್ಯ ಕಲಿಯಲು ಸೇರ್ಪಡೆಗೊಂಡಳು. ಅಲ್ಲಿಂದ ಸತತವಾಗಿ ಕಳೆದ 9 ವರ್ಷಗಳಿಂದ ಅನನ್ಯ ಅತ್ಯಾಸಕ್ತಿಯಿಂದ ನೃತ್ಯದ ಎಲ್ಲಾ ಆಯಾಮಗಳನ್ನು ಅರಿಯುವ ಪ್ರಯತ್ನ ಮಾಡುತ್ತಾ ಬಂದಿದ್ದು, ಪರಿಶ್ರಮದಿಂದ ಅಭ್ಯಾಸ ಮಾಡುತ್ತಿದ್ದಾಳೆ. ಪ್ರಸ್ತುತ ಓದಿನಲ್ಲಿ ಚುರುಕಾಗಿರುವ ಇವಳು, ವಿದ್ಯಾನಿಕೇತನ ಪಬ್ಲಿಕ್ ಶಾಲೆಯಲ್ಲಿ 9 ನೆಯ ತರಗತಿಯಲ್ಲಿ ಓದುತ್ತಿದ್ದಾಳೆ.

ಪಠ್ಯದೊಂದಿಗೆ, ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳಲ್ಲೂ ಮುಂದಿರುವ ಅನನ್ಯ, ಶಾಲೆಯ ಟ್ಯಾಲೆಂಟ್ಸ್ ಡೇ ಸ್ಪರ್ಧೆಗಳಲ್ಲಿ ಭರತನಾಟ್ಯದಲ್ಲಿ ಪ್ರಥಮ ಬಹುಮಾನ ಗಳಿಸಿದ್ದಾಳೆ. ಇದರೊಡನೆ ಕರ್ನಾಟಕಸರ್ಕಾರದ ಜ್ಯೂನಿಯರ್ ನೃತ್ಯಪರೀಕ್ಷೆಯಲ್ಲಿ ಡಿಸ್ಟಿಂಕ್ಷನ್ ಪಡೆದ ವಿಶೇಷ ಅವಳದು. ಅಖಿಲ ಭಾರತೀಯ ಗಂಧರ್ವ ಮಹಾವಿದ್ಯಾಲಯ ಮಂಡಲದಿಂದ ಮಾಧ್ಯಮ ಪೂರ್ಣ ನೃತ್ಯಪರೀಕ್ಷೆಯನ್ನೂ ವಿಶೇಷಾಂಕಗಳಿಂದ ತೇರ್ಗಡೆಯಾದ ಹೆಮ್ಮೆ ಅವಳದು. ಉತ್ತಮ ಕಲಾವಿದೆಯಾದ ಅನನ್ಯ, 'ಸ್ಕೆಚರಲ್ ಸ್ಕೂಲ್ ಆಫ್ ಫೈನ್ ಆರ್ಟ್ಸ್' ನೃತ್ಯಶಾಲೆಯ ಎಲ್ಲಾ ನೃತ್ಯರೂಪಕಗಳು , ಗ್ರೂಪ್ ಪ್ರೊಡಕ್ಷನ್ಗಳಲ್ಲಿ ನಾಡಿನಾದ್ಯಂತ ಅನೇಕ ನೃತ್ಯ ಕಾರ್ಯಕ್ರಮಗಳನ್ನು ನೀಡಿದ್ದಾಳೆ. ಇವಳು ಭಾಗವಹಿಸಿರುವ ಕೆಲವು ಪ್ರತಿಷ್ಠಿತ ವೇದಿಕೆಗಳ ಕಾರ್ಯಕ್ರಮಗಳಲ್ಲಿ ಮುಖ್ಯವಾದವು- ಹಾವೇರಿಯಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಶಿವೋಹಂ ನೃತ್ಯೋತ್ಸವ -ತುಮಕೂರು ಸಿದ್ಧಗಂಗಾ ಮಠ, ಸಾಧನ ಸಂಗಮ ಟ್ರಸ್ಟ್, ಕೇರಳ-ಪಾಲಕ್ಕಾಡ್ ಸಾಸ್ತಪ್ರೀತಿ ಫೆಸ್ಟಿವಲ್ ನಲ್ಲಿ ಏಕವ್ಯಕ್ತಿ ಪ್ರದರ್ಶನ, ಹೊಸೂರು ನಾಟ್ಯಾಂಜಲಿಯಲ್ಲಿ ನೃತ್ಯಪ್ರದರ್ಶನ ಮತ್ತು 'ನಾಟ್ಯಾಂಜಲಿ' ಎಂಬ ಬಿರುದು ಸಂದಿದೆ. ಶಾಸ್ತ್ರೀಯ ಮಕ್ಕಳ ನೃತ್ಯೋತ್ಸವ, ಶಂಕರ ಟಿವಿ ಯಲ್ಲಿ ನಾಟ್ಯರತ್ನ, ವಿಜಯರಂಗದ ತರಂಗರಂಗ, ಡ್ಯಾನ್ಸ್ ಜಾತ್ರೆ, ಭಾರತ್ ಬುಕ್ ರೆಕಾರ್ಡ್ಸ್- 'ಡ್ಯಾನ್ಸ್ ಫಾರ್ ಇಂಡಿಯಾ' ಮುಂತಾದವು ಅವಳು ನೀಡಿರುವ ಕಾರ್ಯಕ್ರಮಗಳು.

ನಟುವಾಂಗ ಕಾರ್ಯಾಗಾರದಲ್ಲಿ ತರಬೇತಿ ಪಡೆದಿರುವ ಅನನ್ಯ, ಪಿಯಾನೋ ವಾದನವನ್ನು ಕಲಿಯುತ್ತಿದ್ದು, ಲಂಡನ್ ಕಾಲೇಜ್ ಆಫ್ ಮ್ಯೂಸಿಕ್ ನಡೆಸುವ ಗ್ರೇಡ್- 2 ಪರೀಕ್ಷೆಯಲ್ಲಿ ಉತ್ತೀರ್ಣಳಾಗಿದ್ದಾಳೆ. 'ನೃತ್ಯಕ್ಕಾಗಿ ಯೋಗ' ಅಧ್ಯಯನ ಮಾಡುತ್ತಿರುವ ಅನನ್ಯ, ನೃತ್ಯದೊಡನೆ ಇನ್ನಿತರ ಕಲೆಗಳಲ್ಲೂ ಸೃಜನಾತ್ಮಕ, ಬೌದ್ಧಿಕ ಪ್ರತಿಭೆ-ಆಸಕ್ತಿ ತೋರುತ್ತಿದ್ದಾಳೆ. ಅಬಾಕಸ್ ನಲ್ಲಿ ಗ್ರಾಂಡ್ ಮಾಸ್ಟರ್ ಹಂತವನ್ನು ಪೂರ್ಣಗೊಳಿಸಿ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ಪರ್ಧೆಗಳಲ್ಲಿ ಜಯಗಳಿಸಿರುವುದು ಅವಳ ಅಗ್ಗಳಿಕೆ.

ವೃತ್ತಿಯಲ್ಲಿ ಎಂಜಿನಿಯರ್ ಪ್ರವೃತ್ತಿಯಲ್ಲಿ ಲೇಖಕರಾಗಿರುವ ಮಿರ್ಲೆಚಂದ್ರಶೇಖರ ಅವರ 'ಬಾಳು ಸತ್ಯ, ಬೆಳಕು ನಿತ್ಯ' ಕೃತಿಯು ನಿಜಜೀವನಕ್ಕೆ ಸಂಬಂಧಿಸಿದ ಅನೇಕ ಸ್ಫೂರ್ತಿದಾಯಕ ಲೇಖನಗಳನ್ನು ಒಳಗೊಂಡಿದೆ. ನೆಲ, ಜಲ, ಪರಿಸರ, ಸಂಬಂಧ, ಸಾಹಿತ್ಯ- ಹೀಗೆ ನಾನಾ ಕ್ಷೇತ್ರಗಳನ್ನು ಕುರಿತು ಲೇಖಕರು ತುಂಬಾ ಸರಳ, ಸುಂದರ ಶೈಲಿಯಲ್ಲಿ ಬರೆದಿದ್ದಾರೆ.

ಸಾವಿಗೆ ವಿನಾಯಿತಿಯಿಲ್ಲ ದುಃಖ ಸ್ಥಿರವಲ್ಲ

ವಿಶ್ವಾಸ್.ಡಿ.ಗೌಡ
• ಉದಯವಾಹಿನಿ, ವಿಶೇಷ



ಕಷ್ಟದ ಪರಿಸ್ಥಿತಿಗಳು ಎಂಥಹುದೇ ಬರಲಿ ಅವುಗಳನ್ನು ಧೈರ್ಯವಾಗಿ ಎದುರಿಸಿ ನಿಲ್ಲುವುದೇ ಮನೋಧೈರ್ಯ ಎಂಬುದನ್ನು ಹಾಲಿವುಡ್ನ ಪ್ರತಿಷ್ಠಿತ ನಟ ಮೆಲ್ ಗಿಬ್ಸನ್ ಕುರಿತಾದ 'ಮನಸ್ಸು ಮಾಡಿದರೆ ಗೆಲ್ಲಲ್ಲಿಕೆ ಸಾಧ್ಯ!?' ಲೇಖನ ಪ್ರತಿಬಿಂಬಿಸುತ್ತದೆ. 'ನಂಬಿಕೆ ಇಡಿ, ಅಹಂ ಬಿಡಿ', ಮದುವೆಗಳು ದಾರಿ ತಪ್ಪುತ್ತಿವೆಯಲ್ಲಾ ಏಕೆ?, 'ಕಾಲಕಾಲಕ್ಕೆ ಆಗಬೇಕಿದ್ದು ಆಗಲಿ' ಕುರಿತ ಬರಹಗಳು ಮದುವೆಯ ಮಹತ್ವವನ್ನು ಸಾರುತ್ತದೆ. 'ತಾರತಮ್ಯ ಬೇಕೆ ಗೌರವಿಸಲು ಮನುಷ್ಯರನ್ನು....' ಮನುಷ್ಯತ್ವ ಮುಖ್ಯ ಎಂದು ತಿಳಿಸುತ್ತದೆ. 'ಕುಟುಂಬದಲ್ಲಿ ಇಬ್ಬರೂ ದುಡಿಯಬೇಕೆ?' ಲೇಖನ ಅಮ್ಮನ ಪಾತ್ರ ಎಷ್ಟು ಮುಖ್ಯ ಎಂಬುದನ್ನು ನಿವೇದಿಸುತ್ತದೆ.

'ನೋಡಿ ಸುಮ್ ಸುಮ್ಮೆ ನಗುವ ಕಾಲವಿದು!'- ಪಾರ್ಕುಗಳಿಗೆ ವಾಕಿಂಗ್, ಜಾಗಿಂಗ್ಗೆ ಬರುವ, ತಮ್ಮ ಮನೆಯ ನಾಯಿಗಳನ್ನು ವಾಕ್ ಮಾಡಿಸಲು ಬಂದು ಟಸ್ಸು- ಪುಸ್ಸು ಇಂಗ್ಲಿಷ್ ಮಾತನಾಡುವವರ ಬಗ್ಗೆ ನವಿರು ಹಾಸ್ಯದಲ್ಲಿರುವ ಲೇಖನ. 'ಕಟ್ಟಿಕೊಂಡವಳೇ ಕೊನೆ ತನಕ!' ನಿವೃತ್ತಿಯ ನಂತರ ಎರಡನೇ ಸಂಸಾರ ಆರಂಭಿಸಿ, ಮನೆಯಿಂದ ಹೊರದೂಡಿಸಿಕೊಂಡು ಕಂಡೋರ ಬಳಿ ಇಲ್ಲ ಸಲ್ಲದ ನೆಪ ಹೇಳಿ ಸಾಲ ಮಾಡುವವನ ಕಥೆ.'ದೊಡ್ಡವರು ಯಾರು?' ಕಷ್ಟದಲ್ಲಿದ್ದಾಗ ಸಹಾಯ ಮಾಡೋರು ಎಂಬುದನ್ನು ತಿಳಿಸುತ್ತದೆ. 'ನಾ ಮಾಡುವುದೇ ಸರಿ!' ಲೇಖನ ಒಳಿತು- ಕೆಡುಕುಗಳ ವಿಮರ್ಶಿಸಿ, ಮುಂದೆ ಸಾಗಬೇಕಾದ ಅಗತ್ಯತೆಯನ್ನು ಒತ್ತಿ ಹೇಳುತ್ತದೆ. 'ಮಗನ ಏಳ್ಗೆ ಅಪ್ಪ ಹಾಕಿಕೊಟ್ಟ ಹಾದಿಯಲ್ಲಿ' ಲೇಖನ ಮಕ್ಕಳ ಪೋಷಣೆಯಲ್ಲಿ ತಂದೆ- ತಾಯಿ ಪೈಕಿ ಯಾರ ಪಾತ್ರ ಹೆಚ್ಚು ಎಂಬ ಬಗ್ಗೆ ಹೋಲಿಕೆ ಇದೆ. 'ಯಾರೂ ಅರಿಯದ ನೇಗಿಲ ಯೋಗಿಯ ಬದುಕು' ಲೇಖನ ಅನ್ನದಾತರ ಸಮಸ್ಯೆಗಳು, ಅದಕ್ಕೆ ಕಾರಣಕರ್ತರನ್ನು ಅನಾವರಣ ಮಾಡುತ್ತದೆ.

ಮೈಸೂರಿನ ಲಿಂಗಾಂಬುದಿ ಸಸ್ಯಶಾಸ್ತ್ರೀಯ ತೋಟದ ಸುಂದರ ಚಿತ್ರಣವಿದೆ. ಬೆಂಗಳೂರಿನ ಕಬ್ಬನ್ ಪಾರ್ಕ್ ಬಗ್ಗೆ ಕೂಡ ಅತ್ಯುತ್ತಮವಾದ ವಿವರಣಾತ್ಮಕವಾಗಿ ಬರಹವಿದೆ. 'ಅಯೋಧ್ಯೆಯ ರಾಮಲಲ್ಲಾ, ಚುಂಚನಕಟ್ಟೆಯ ಹನುಮನ ದರ್ಶನಕ್ಕೆ ಹೋಗೋಣ' ಲೇಖನವೂ ಪ್ರವಾಸೋದ್ಯಮ ದೃಷ್ಟಿಯಿಂದ ಮುಖ್ಯ. ಏಕೆಂದರೆ ಎರಡು ಕಡೆಯೂ ಶಿಲ್ಪಿ ಅರುಣ್ ಯೋಗಿರಾಜ್ ಅವರೇ ವಿಗ್ರಹ ಕೆತ್ತಿದ್ದರೂ ರಾಮಲಲ್ಲಾಗೆ ಸಿಕ್ಕಷ್ಟು ಪ್ರಚಾರ ಹನುಮನಿಗೆ ಸಿಕ್ಕಿಲ್ಲ ಎಂಬುದು ಲೇಖಕರ ಆಕ್ಷೇಪ.

'ಇರುವುದೊಂದೇ ಭೂಮಿ' ಪರಿಸರ ಮಹತ್ವ ಕುರಿತು, 'ಕರಗದ ಪ್ಲಾಸ್ಟಿಕ್ನಿಂದಾಗಿ ಕೊರಗುತ್ತಿರುವ ಭೂಮಿ' ಪ್ಲಾಸ್ಟಿಕ್ ಬಳಕೆಯಿಂದಾಗುವ ಅಪಾಯದ ಬಗ್ಗೆ ಎಚ್ಚರಿಸುತ್ತದೆ. ಅದೇ ರೀತಿ 'ನೀರಿಗೂ ಬೇಕಿದೆ ಬ್ಯಾಂಕ್'- ಮಿತವಾಗಿ ಬಳಸಬೇಕು ಎಂದು ತಿಳಿಸುತ್ತದೆ.

'ಎಲ್ಲಾ ಶಕ್ತಿ ನಿಮ್ಮೊಳಗೇ ಇದೆ. ನೀವು ಏನು ಬೇಕಾದರೂ ಆಗಬಹುದು' ಎಂಬ ಸ್ವಾಮಿ ವಿವೇಕಾನಂದರ ಮಾತುಗಳೇ ಶೀರ್ಷಿಕೆಯಾಗಿರುವ ಲೇಖನದಲ್ಲಿ ಕೊರೋನಾ ವೈರಸ್ ದಾಳಿ ಮಾಡಿದಾಗ ಮನುಷ್ಯತ್ವ ಮೆರೆಯಿತು ಎಂಬುದನ್ನು 'ಪಾಸಿಟಿವ್' ಆಗಿ ಬರೆದಿದ್ದಾರೆ. 'ಬದುಕಿಗೆ ಬದಲಿಯಿಲ್ಲ, ಸಾವಿಗೆ ವಿನಾಯಿತಿಯಿಲ್ಲ, ದುಃಖ ಸ್ಥಿರವಲ್ಲ, ನೆನಪುಗಳು ಕಹಿಯಲ್ಲ', ಎಂಬ ಸಿದ್ದಯ್ಯ ಪುರಾಣಿಕರ ಮಾತುಗಳು ಸಕಾಲಿಕವಾಗಿವೆ.

'ಮಹಿಳೆಯರು ಮಾನವ ಕುಲದವರಲ್ಲವೇ ?' ಲೇಖನದಲ್ಲಿ ಪ್ರತಿನಿತ್ಯ ನಡೆಯುತ್ತಿರುವ ದೌರ್ಜನ್ಯಗಳಿಗೆ ಕೊನೆ ಎಂದು ಪ್ರಶ್ನಿಸುತ್ತಾರೆ. ಅದೇ ರೀತಿ ಮಹಿಳಾ ದಿನಾಚರಣೆಯನ್

ನಾನು ದೇವದಾಸಿಯರ ಆಸ್ತಿ ಕಬಳಿಸಿಲ್ಲ, ದಾಖಲೆ ಮುಂದಿಟ್ಟ ದಢೇಸೂಗೂರು

ನಮ್ಮ ಕುಟುಂಬದ ಮೇಲೆ ಕೇಸ್ ಹಾಕ್ಸಿ ಅರೆಸ್ಟ್ ಮಾಡಲು ಅಧಿಕಾರಿಗಳ ಮೇಲೆ ಒತ್ತಡ ಹಾಕಿದ್ದೆ ಸಚಿವ ತಂಗಡಗಿ

• ಉದಯವಾಹಿನಿ, ಕಾರಟಗಿ

ಕನಕಗಿರಿ ಕ್ಷೇತ್ರದಲ್ಲಿ ಹಾಲಿ ಮತ್ತು ಮಾಜಿಗಳ ನಡುವೆ ವಾಕ್ಸಮರ ಆರೋಪ ಮತ್ತು ಪ್ರತ್ಯಾರೋಪಗಳ ಯುದ್ಧ ಸದ್ಯಕ್ಕೆ ನಿಲ್ಲುವ ಸೂಚನೆ ಕಾಣ್ತಾ ಇಲ್ಲ, ಇತ್ತೀಚಿಗಷ್ಟೇ ಸಚಿವ ಶಿವರಾಜ್ ತಂಗಡಗಿ ಯವರು ಕಾರಟಗಿ ಪುರಸಭೆಯ ಕಚೇರಿಯಲ್ಲಿ ಹಮ್ಮಿಕೊಂಡ ಸರ್ಕಾರಿ ಕಾರ್ಯಕ್ರಮದಲ್ಲಿ ನಿಯಮ ಉಲ್ಲಂಘಿಸಿ ರಾಜಕೀಯವಾಗಿ ಮಾತನಾಡಿದ್ದರು. ಮಾಜಿ ಶಾಸಕ ಬಸವರಾಜ್ ದಡೆಸುಗೂರು ಬಿಜೆಪಿಯ ಜಿಲ್ಲಾಧ್ಯಕ್ಷ ಆಗಬೇಕಾ ಸರಿಯಾಗಿ ಮೊದಲು ಕನ್ನಡ ಮಾತನಾಡೋಕೆ ಕಲಿಯಲಿ, ಎಂದು ವ್ಯಂಗ್ಯ ಮಾಡಿದ್ದರು. ದಡೆಸುಗುರು ಗ್ರಾಮದ ದೇವದಾಸಿಯರ 64 ಎಕರೆ ಭೂಮಿಯನ್ನು ಲಪಟಾಯಿಸಿದ್ದಾರೆ ಎಂದು ಆರೋಪ ಮಾಡಿದ್ದರು

ಈ ನಡುವೆ ಮಾಜಿ ಶಾಸಕ ದಡೆಸುಗೂರು ಅವರ ಮೇಲೆ ಜಾತಿ ನಿಂದನಾ ಪ್ರಕರಣ ದಾಖಲಾಗಿತ್ತು, ಪೋಲಿಸ್ ಇಲಾಖೆ ಅವರನ್ನು ಬಂಧಿಸಲು ಮುಂದಾಗಿತ್ತು ಆದರ ಬೆನ್ನಲ್ಲೇ ರಾಜ್ಯ ಹೈಕೋರ್ಟ್‌ನಲ್ಲಿ ಜಾಮೀನು ಪಡೆದ ಮಾಜಿ ಶಾಸಕ ದಡೆಸುಗೂರು ಕಾರಟಗಿ ಪಟ್ಟಣದ ಕಾರ್ಯಾಲಯದಲ್ಲಿ ಪತ್ರಿಕಾಗೋಷ್ಠಿಯನ್ನು ನಡೆಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಮತ್ತು ಕ್ಷೇತ್ರದ ಶಾಸಕ ಶಿವರಾಜ್ ಎಸ್ ತಂಗಡಗಿ ಅವರ ವಿರುದ್ಧ ಕೆಂಡಮಂಡಲರಾದರು ರಾಜಕೀಯ ಮಾಡಬೇಕು. ಆದರೆ ಅಧಿಕಾರ ದುರುಪಯೋಗಪಡಿಸಿಕೊಂಡು

ಉದಯವಾಹಿನಿ ಚಿತ್ರ

ದಢೇಸುಗೂರು ನೇರ ಆರೋಪ

ವೈಶ್ಯಮದಿಂದ ರಾಜಕೀಯ ಮಾಡಬಾರದು.

ಅಭಿವೃದ್ಧಿಗಾಗಿ ರಾಜಕೀಯ ಮಾಡಿ. ಸಚಿವರೆ ನಮ್ಮ ಕುಟುಂಬದ ಅಣ್ಣ ತಮ್ಮಂದಿರ ಜಗಳದೊಳಗೆ ನೀನು ಬೇಳೆ ಬೇಯಿಸಿಕೊಳ್ಳಲು ಬಂದಿದ್ದೀಯಾ ಖಾಸಗಿ ವ್ಯಕ್ತಿಗಳಿಗೆ ಹಣ ನೀಡಿ ನನ್ನ ವಿರುದ್ಧ ಎತ್ತಿ ಕಟ್ಟಿದ್ದೀಯಾ ಇಡೀ ನಮ್ಮ ಕುಟುಂಬದವರ ಮೇಲೆ ಪ್ರಕಣ ದಾಖಲು ಮಾಡಿಸಿದ್ದೀಯಾ ಮುಖ್ಯಮಂತ್ರಿಗಳ ಜೊತೆ ಗೃಹ ಇಲಾಖೆ ಮೇಲೆ ಒತ್ತಡ ಹಾಕಿಸಿ ನನ್ನನ್ನು ಬಂಧಿಸಲು ಅಧಿಕಾರಿಗಳಿಗೆ ಸೂಚನೆ ನೀಡಿ ಅಧಿಕಾರ ದುರುಪಯೋಗಪಡಿಸಿಕೊಂಡಿದ್ದಿಯಾ ಅಧಿಕಾರ ಶಾಶ್ವತ ಅಲ್ಲ ಅನ್ನೋದು ನೆನಪಿನಲ್ಲಿಟ್ಟುಕೊಳ್ಳಿ ನೀನು ಕ್ಷೇತ್ರಕ್ಕೆ ಬಂದಾಗ ಎಷ್ಟು ಆಸ್ತಿ ಇತ್ತು ಬಂದ ಮೇಲೆ ಎಷ್ಟು ಕೋಟಿ ಅಕ್ರಮವಾಗಿ ಆಸ್ತಿ ಮಾಡಿದ್ದೀಯಾ ಪ್ರತಿಯೊಂದು ದಾಖಲೆ ನನ್ನ ಹತ್ತಿರ ಇದೆ ಸಮಯ ಎಲ್ಲರಿಗೂ ಬರುತ್ತೆ ಬಂದಾಗ ಅವುಗಳನ್ನು ಹೊರಗೆ ಇಡುತ್ತೀನಿ ಎಂದು ಸಚಿವ ಶಿವರಾಜ್ ತಂಗಡಗಿ ವಿರುದ್ಧ ಗುಡುಗಿದರು ನಾನು ಯಾವುದೇ ರೀತಿಯ ದೇವದಾಸಿಯರ ಆಸ್ತಿಯನ್ನು ಕಬಳಿಸಿಲ್ಲ ನಾನು ಕಬಳಿಸಿದ್ದೆ ನಿಜವಾದರೆ ರಾಜಕೀಯ ನಿವೃತ್ತಿ ಮಾಡುತ್ತೇನೆ.

ದೇವದಾಸಿಯರ ಆಸ್ತಿಗಳನ್ನು ನಾನು ಕಬಳಿಸಿದ್ದು ನೀನು ರುಜು ಮಾಡದಿದ್ದರೆ ನೀನು ರಾಜಕೀಯ ನಿವೃತ್ತಿ ಮಾಡ್ತೀಯಾ ಎಂದು ಸವಾಲ್ ಎಸೆದರು ಬ್ರಾಹ್ಮಣರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡುತ್ತಿದ್ದಾರೆ ಬ್ರಾಹ್ಮಣರು ಕೂಡ ಕಲ್ಲು ಹೊಡೆಯುತ್ತಿದ್ದಾರೆ ಎಂದು ಬ್ರಾಹ್ಮಣರ ಬಡತನವನ್ನು ವ್ಯಂಗ್ಯವಾಡಿದ್ದಾರೆ ಬ್ರಾಹ್ಮಣರೆಂದರೆ ವೇದಗಳನ್ನು ಪಾರಾಯಣ ಮಾಡಿ ಲೋಕ ಕಲ್ಯಾಣ ಮಾಡುವಂಥವರು ಆದರೆ ಅವರ ಬಗ್ಗೆ ಈ ರೀತಿ ಮಾತನಾಡಬಾರದು ಎಂದರು ಇನ್ನು ನಿಮಗೆ ಕನ್ನಡ ಉಚ್ಚಾರಣೆ ಸರಿಯಾಗಿ ಬರುವುದಿಲ್ಲ ಅಂತ ಸಚಿವರು ಹೇಳುತ್ತಿದ್ದಾರೆ ಎನ್ನುವ ಪತ್ರಕರ್ತರ ಮಾತಿಗೆ ಪ್ರತಿಕ್ರಿಯೆ ನೀಡಿದ ದಡೆಸೂಗುರವರು ಕನ್ನಡವನ್ನೇ ಬರೆಯೋಕೆ ಬಾರದ ಮಂತ್ರಿಯನ್ನು ಮೀಡಿಯದಾಗ ನೀವೆಲ್ಲಾ ನೋಡ್ತೀರಿ ಕನ್ನಡದ ಶಬ್ದವನ್ನು ಬರೆಯಲು ಕೈ ಗಧ ಗಧ ಗಧ ನಡುಗುತ್ತೈತಿ. ಪಾಪ ಶಿವಾರೆಡ್ಡಿ ವಕೀಲರು ಹೇಳ್ತಾಯಿದ್ರು ಸರ್ ಹಿಂಗ ಬರೆಯಿರಿ ಅಂತಾ, ಆದ್ರೂ ತಪ್ಪು ತಪ್ಪಾಗಿ ಬರೆದಿದ್ದು ಇಡೀ ರಾಜ್ಯದ ಜನ ನೋಡಿದ್ದಾರೆ. ಹೌದು ನನಗೆ ಕನ್ನಡ ಮಾತಾಡೋಕೆ ಬರೋದಿಲ್ಲ ಆಗ ನನ್ನ ಬಡತನ ಹಾಗಿತ್ತು ಹೀಗಾಗಿ ನಾನು ಶಾಲೆ ಕಲಿತಿಲ್ಲ ನಿಜ, ನೀನು ಶಾಲೆ ಕಲಿತ ಮನುಷ್ಯ ಸರ್ಟಿಫಿಕೇಟ್ ಬೇರೆ ತಗೊಂಡಿದ್ದಿಯಾ ರಾಜ್ಯದ ಮಂತ್ರಿ ಬೇರೆ ನಿನಗೇನಾಗಿದೆ ಬರೆಯೋಕೆ ಕನ್ನಡನೇ ಬರೆಯೋಕೆ ಬರಲ್ಲ ಕನ್ನಡ ಮಂತ್ರಿ ಖಾತೆ ತಗೊಂಡಿ ! ನಿನ್ನಂಗ ಎಲ್ಲರಿಗೆ ಕಲಿಸ್ತೀ ಅಂತ ಅನುಮಾನ ಮೂಡ್ತಾ ಇದೆ ಅಂತ ವ್ಯಂಗ್ಯವಾಡಿದರು

ಸಚಿವ ತಂಗಡಗಿ ಸಾಹೇಬರು ಹೇಳೋದೆಲ್ಲ ಬರೀ ಸುಳ್ಳು !

ಯಾವುದೇ ದಾಖಲೆಗಳಿಲ್ಲದೆ ಆರೋಪ ಮಾಡುವುದು ಅವರ ಜಾಯಮಾನದಲ್ಲಿ ಬಂದುಬಿಟ್ಟಿದೆ ಆದರೆ ನಾನು ದಾಖಲೆಗಳ ಜೊತೆ ಮಾತನಾಡುತ್ತಿದ್ದೇನೆ ಸೋಮಲಾಪುರ ಹೋಬಳಿಯ ದಡೇಸೂಗುರು ಗ್ರಾಮದ ಸರ್ವೆ ನಂಬರ್ 84 ರಲ್ಲಿ ಹಿಸ್ಸಾ ಅದಲಿ ಬದಲಿಯಾಗಿದ್ದರಿಂದ ರಸ್ತೆಗೆ ಹೊಂದಿಕೊಂಡಿರುವ ಭೂಮಿಯ ಕುರಿತು ನಮ್ಮ ಎರಡು ಕುಟುಂಬಗಳ ನಡುವೆ ತಕರಾರು ಬಂದಿದೆ ಅಷ್ಟೇ ಆದರೆ ನಾನು ಯಾವುದೇ ದೇವದಾಸಿಯರ ಭೂಮಿಯನ್ನು ಕಬಳಿಸಿಲ್ಲ ಇದನ್ನು ತಿಳಿಯದೆ ಸಚಿವ ಸಾಹೇಬರು ಬಾಯಿಗೆ ಬಂದೆ ಅಂತೆ ಮಾತನಾಡುತ್ತಿದ್ದಾರೆ. ಅಧಿಕಾರದ ಅಹಂನಲ್ಲಿ ಇಷ್ಟ ಬಂದಂತೆ ಮಾತನಾಡುತ್ತಿದ್ದಾರೆ

ಗ್ರಾಮ ಆಡಳಿತ ಅಧಿಕಾರಿಗಳ ಅನಿರ್ದಿಷ್ಟವಧಿ ಧರಣಿ

• ಉದಯವಾಹಿನಿ, ಹುಣಸಗಿ

ಗ್ರಾಮ ಆಡಳಿತ ಅಧಿಕಾರಿಗಳ ಬೇಡಿಕೆಗಳು ಈಡೇರಿಸುವವರೆಗೂ ಅನಿರ್ದಿಷ್ಟವಧಿ ಮುಷ್ಕರ ಮಾಡಲಾಗುತ್ತದೆ ಎಂದು ಗ್ರಾಮ ಆಡಳಿತ ಅಧಿಕಾರಿಗಳ ಸಂಘಟನೆಯ ಅಧ್ಯಕ್ಷರಾದ ಹಸನ್ ಡಿ. ಎಂ ಹೇಳಿದರು.

ಪಟ್ಟಣದ ತಹಶೀಲ್ದಾರ ಕಾರ್ಯಾಲಯದ ಮುಂದೆ ಅನಿರ್ದಿಷ್ಟವಧಿ ಮುಷ್ಕರ ಕೈಗೊಂಡು ಮಾತನಾಡಿದ ಅವರು, ದಿನಾಂಕ 26.09.2024 ರಂದು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಭಾ ಭವನ ಚಿತ್ರದುರ್ಗದಲ್ಲಿ ನಡೆದ ರಾಜ್ಯ ಕಾರ್ಯಕಾರಿಣಿ ಸಭೆಯಲ್ಲಿ ಗ್ರಾಮ ಆಡಳಿತ ಧಿಕಾರಿಗಳ ಭರವಸೆಗಳನ್ನು ಈಡೇರಿಸುತ್ತೇವೆ ಎಂದು ಇಲ್ಲಿಯವರೆಗೆ ಯಾವುದೇ ರೀತಿಯಾದ ಕ್ರಮ ಕೈಗೊಂಡಿಲ್ಲ. ಆದ್ದರಿಂದ ಎರಡನೇ ಹಂತದ ಮಷ್ಕಾರಕ್ಕೆ ಸಂಗವು ಮುಂದಾಗಿದೆ ಎಂದರು. ಈ ಸಂದರ್ಭದಲ್ಲಿ ಗ್ರಾಮ ಆಡಳಿತ ಅಧಿಕಾರಿಗಳ ಸಂಘಟನೆಯ ಗೌರವ ಅಧ್ಯಕ್ಷರಾದ ಬಾಲಪ್ಪ ದೊಡಮನಿ, ಸಂಘದ ಪ್ರಧಾನ ಕಾರ್ಯದರ್ಶಿ ಸುರೇಶ ಹಚ್ಚಡ, ಗ್ರಾಮ ಆಡಳಿತ ಅಧಿಕಾರಿಗಳಾದ ಬಸರೆಡ್ಡಿ ಕುಪ್ಪಿ, ಶಿವಶಂಕರ ಲೋಟಗೇರಿ, ಸಂತೋಷರಡ್ಡಿ, ಅರವಿಂದ ಖಂಡೇಕರ, ದೇವಪ್ಪ ಚವ್ಹಾಣ, ಪರಶುರಾಮ ಕೆಂಭಾವಿ, ಧರೇಶ ದೊಡಮನಿ, ಬಸವರಾಜ ವಾಲಿಕಾರ, ಶ್ರೀಶೈಲ ನಾಯಕ, ಅಮರೇಶ ಲೋಟಗೇರಿ, ಸುಲೋಚನಾ ವಿಜಯಲಕ್ಷ್ಮಿ, ದೀಪ್ತಿ, ಚನ್ನಮ್ಮ ಹಾಗೂ ತಾಲ್ಲೂಕಿನ ಗ್ರಾಮ ಆಡಳಿತ ಅಧಿಕಾರಿಗಳು ಇತರರು ಇದ್ದರು.

ಉದಯವಾಹಿನಿ ಚಿತ್ರ

ಗ್ರಾಮ ಆಡಳಿತ ಧಿಕಾರಿಗಳ ಮೂಲಭೂತ ಸೌಲಭ್ಯಗಳಾದ ಸುಸಜ್ಜಿತವಾದ ಕಚೇರಿ, ಗುಣಮಟ್ಟದ ಟೇಬಲ್, ಆನ್ಲೈನ್ ಸೇವೆ ನೀಡಲು ಮೊಬೈಲ್, ಲ್ಯಾಪ್ಟಾಪ್ ಹಾಗೂ ಗ್ರಾಮ ಆಡಳಿತ ಅಧಿಕಾರಿಗಳ ಹುದ್ದೆಯನ್ನು ತಾಂತ್ರಿಕ ಹುದ್ದೆಗಳಿಗೆ ನೀಡುವ ವೇತನ ಶ್ರೇಣಿ ನಿಗದಿಪಡಿಸಬೇಕು ಮತ್ತು ಗ್ರಾಮ ಆಡಳಿತ ಅಧಿಕಾರಿಗಳ ಸಮಸ್ಯೆಗಳನ್ನು ಬಗೆಹರಿಸಿ ಬೇಡಿಕೆಗಳನ್ನು ಈಡೇರಿಸಬೇಕು ಒಂದು ವೇಳೆ ಭರವಸೆ ನೀಡಿ ಸಮಸ್ಯೆಗಳನ್ನು ಬಗೆಹರಿಸದಿದ್ದರೆ ಮುಂದಿನ ದಿನಮಾನಗಳಲ್ಲಿ ಉಗ್ರವಾದ ಹೋರಾಟ ಮಾಡಲಾಗುತ್ತದೆ ಎಂದು ಆಗ್ರಹಿಸಿದರು.

ಕಂದಾಯ ಇಲಾಖೆಯಲ್ಲಿ ನಿರಂತರವಾಗಿ ಸರ್ಕಾರದಿಂದ ಅಭಿವೃದಿ

• ಉದಯವಾಹಿನಿ, ಚಿತ್ತಾಪುರ

ತಾಲ್ಲೂಕಿನ ಕಂದಾಯ ಇಲಾಖೆಯ ಗ್ರಾಮ ಆಡಳಿತ ಅಧಿಕಾರಿಗಳು ತಮ್ಮ ಕೆಲಸ ಸ್ಥಗಿತಗೊಳಿಸಿ ವಿವಿಧ ಸೌಲಭ್ಯ ನೀಡುವಂತೆ ಹಾಗೂ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಸೋಮವಾರ ಸ್ಥಳೀಯ ತಹಶೀಲ್ದಾರ್ ಕಚೇರಿ ಆವರಣದಲ್ಲಿ ಅನಿರ್ಧಿಷ್ಟಾವಧಿ ಮುಷ್ಕರ ನಡೆಸಿದರು.

ಕಂದಾಯ ಇಲಾಖೆಯಲ್ಲಿ ನಿರಂತರವಾಗಿ ಸರ್ಕಾರದಿಂದ ಅಭಿವೃದ್ಧಿಪಡಿಸಿರುವ ಎಲ್ಲಾ ವೆಬ್ ಮತ್ತು ಮೊಬೈಲ್ ತಂತ್ರಾಂಶಗಳ ಮೂಲಕ 21 ಬಗೆಯ ವಿವಿಧ ಕೆಲಸ ಮಾಡುವ ಅನಿವಾರ್ಯತೆಯಿದೆ. ಗ್ರಾಮ ಆಡಳಿತ ಅಧಿಕಾರಿಗಳಿಗೆ ಸುಸಜ್ಜಿತ ಕಚೇರಿ ಸೌಲಭ್ಯ, ಗುಣಮಟ್ಟದ ಟೇಬಲ್, ಕುರ್ಚಿ, ಅಲ್ವೇರಾ. ಮೊಬೈಲ್ ಫೋನ್, ಸಿಯುಜಿ ಸಿಮ್ ಮತ್ತು ಡೇಟಾ, ಗೂಗಲ್ ಕ್ರೋಮ್ ಬುಕ್, ಲ್ಯಾಪಟಾಪ್, ಪ್ರಿಂಟರ್. ಸ್ಕ್ಯಾನರ್ ಸೌಲಭ್ಯ ಒದಗಿಸಬೇಕು. ತಾಂತ್ರಿಕ ಹುದ್ದೆಗಳಿಗೆ ನೀಡುವ ವೇತನ ಶ್ರೇಣಿ ನಿಗದಿಪಡಿಸಿ ಆದೇಶ ಮಾಡಬೇಕು ಎಂದು ಮುಷ್ಕರ ನಿರತರು ಒತ್ತಾಯಿಸಿದರು. ಕಳೆದ ನಾಲ್ಕು ವರ್ಷಗಳಿಂದ ಕಂದಾಯ ಇಲಾಖೆಯಲ್ಲಿ ಪದಜ್ಯೋತಿ ಹಾಗೂ ವರ್ಗಾವಣೆಗೆ ಸಂಬಂಧಿಸಿದಂತೆ ಕೆ.ಸಿ.ಎಸ್. ಆರ್ ನಿಯಮ 16ಎ, ಉಪನಿಯಮ (2) ಹಿಂಪಡೆಯದಿದ್ದರಿಂದ ನೌಕರರ ಜೀವನದಲ್ಲಿ ಹಲವಾರು ಸಮಸ್ಯೆಗಳು ಉಂಟಾಗಿರುತ್ತವೆ. ನಿಯಮ ಮರುಸ್ಥಾಪಿಸಬೇಕು ಅಥವಾ ಇತರೆ ಎಲ್ಲಾ ಇಲಾಖೆಗಳಲ್ಲಿ ಮಾಡಿರುವಂತೆ ವರ್ಗಾವಣೆ ಮಾರ್ಗಸೂಚಿ ರಚಿಸಬೇಕು ಎಂದು ಆಗ್ರಹಿಸಿದರು.

ಮುಷ್ಕರದಲ್ಲಿ ಗ್ರಾಮ ಆಡಳಿತ ಅಧಿಕಾರಿಗಳ ಜಿಲ್ಲಾ ಸಂಘದ ಅಧ್ಯಕ್ಷ ಮೋತಿಲಾಲ್ ಚವಾಣ್, ತಾಲ್ಲೂಕು ಸಂಘದ ಸುನಿಲ್ ಚವಾಣ್. ಉಪಾಧ್ಯಕ್ಷ ಮೈನೋದ್ದಿನ್, ಪ್ರಧಾನ ಕಾರ್ಯದರ್ಶಿ ವೆಂಕಟಪ್ಪ, ಖಜಾಂಚಿ ಮಾರುತಿ, ಬಸವರಾಜ ಹಲಕರ್ಟ, ಸಂಗಮೇಶ ಹಾಗರಗಿ, ಮಹಾಂತೇಶ ಬಡಿಗೇರ, ರಾಜು, ಪರಶುರಾಮ, ನಾಗಣ್ಯಾ, ಹಜರತ್, ಸತೀಶ, ವಿಜಯಕುಮಾರ, ಅನೀಲಕುಮಾರ, ಶೇಕಪ್ಪಾ, ಸಂಜಯಕುಮಾರ, ನರಸರೆಡ್ಡಿ, ಭುವನೇಶ್ವರಿ, ಪೂಜಾ, ಸಿದ್ದಮ್ಮ, ಜ್ಯೋತಿ, ಶಶಿಕಲಾ, ಹಾಲಯ್ಯ, ಪರಿಮಳ, ಚಂದ್ರಶಾ ಹಾಜರಿದ್ದರು.

ಉದಯವಾಹಿನಿ ಚಿತ್ರ

ಕೇದಾರ ಜಗದ್ಗುರುಗಳ ಅಡ್ಡಪಲ್ಲಕ್ಕಿ ಉತ್ಸವ

ಉದಯವಾಹಿನಿ ಚಿತ್ರ

• ಉದಯವಾಹಿನಿ, ಅರಸೀಕೆರೆ

ಉತ್ತರಾಖಂಡ ರಾಜ್ಯದ ಕೇದಾರನಾಥ ರಾವಲು ಭೀಮಾಶಂಕರಲಿಂಗ ಶಿವಾಚಾರ್ಯ ಭಗವತ್ಪಾದರ ಅಡ್ಡಪಲ್ಲಕ್ಕಿ ಉತ್ಸವ ಸೋಮವಾರ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ವಿವಿಧ ಕಲಾ ತಂಡಗಳೊಂದಿಗೆ ನಗರದಲ್ಲಿ ವಿಜೃಂಭಣೆಯಿಂದ ನೆರವೇರಿತು.

ನಗರದ ಪ್ರವಾಸಿ ಮಂದಿರದಿಂದ ಆರಂಭವಾದ ಬೆಳ್ಳಿ ಅಡ್ಡಪಲ್ಲಕ್ಕಿ ಉತ್ಸವದಲ್ಲಿ ಅಪಾರ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡಿದ್ದರು.

ಉತ್ಸವದಲ್ಲಿ ಧ್ವಜ ಕುಣಿತ, ಚೆಂಡೆ ವಾದ್ಯ, ಮಹಿಳೆಯರ ವೀರಗಾಸೆ ಕುಣಿತ, ನಾಸಿಕ್ ಡೋಲು, ಕರಡೆ ವಾದ್ಯ, ಹೀಗೆ ವಿವಿಧ ಕಲಾ ತಂಡಗಳು ಉತ್ಸವಕ್ಕೆ ಮೆರಗು ನೀಡಿತ್ತು. ಸಾಂಪ್ರದಾಯಿಕವಾಗಿ 108 ಪೂರ್ಣ ಕುಂಭ ಹೊತ್ತ ಮಹಿಳೆಯರು ಮೆರವಣಿಗೆಯಲ್ಲಿ ಸಾಗಿದರು. ಉತ್ಸವದಲ್ಲಿ ಭಾಗವಹಿಸಿದ್ದ ವೀರಶೈವ ಸಮಾಜದವರು, ಶ್ರೀಗಳ ದರ್ಶನ ಪಡೆದರು. ನಗರದ ಬಿ.ಎಚ್. ರಸ್ತೆಯ ಹಾಸನ ವೃತ್ತ, ಪಿ.ಪಿ.ವೃತ್ತ, ಧನ್ವಂತ್ರಿ ಸರ್ಕಲ್, ಸಾಯಿನಾಥ ರಸ್ತೆಯ ಮೂಲಕ ಸಾಗಿದ ಉತ್ಸವ, ನಂತರ ವೀರಶೈವ ಸಮುದಾಯ ಭಕ್ತರು ಅಲಂಕೃತ ಅಡ್ಡ ಪಲ್ಲಕ್ಕಿಯನ್ನು ಹೊತ್ತು ಪುನೀತರಾದರು. ಗುರುಗಳು ಪಲ್ಲಕ್ಕಿಯಲ್ಲಿ ಭಕ್ತರಿಗೆ ಪ್ರಸಾದ ನೀಡುವ ಮೂಲಕ ಆಶೀರ್ವದಿಸಿದರು. ಕೇದಾರನಾಥ ರಾವಲು ಭೀಮಾಶಂಕರಲಿಂಗ ಶಿವಾಚಾರ್ಯ ಭಗವತ್ಪಾದರ ಭಾವಚಿತ್ರಗಳ ಫ್ಲೆಕ್ಸ್‌ಗಳು ನಗರದಲ್ಲಿ ರಾರಾಜಿಸುತ್ತಿದ್ದವು. ಪಲ್ಲಕ್ಕಿ ಉತ್ಸವ ಸಾಗುತ್ತಿದ್ದ ರಸ್ತೆಯನ್ನು ತಳಿರು ತೋರಣಗಳಿಂದ ಅಲಂಕರಿಸಲಾಗಿತ್ತು.

ನೊಣವಿನಕೆರೆ ಕಾಡುಸಿದ್ಧೇಶ್ವರ ಮಠದ ಕರಿವೃಷಭ ಶಿವಯೋಗಿ ಶ್ವರ ಸ್ವಾಮೀಜಿ, ಶಾಸಕ ಕೆ.ಎಂ.ಶಿವಲಿಂಗೇಗೌಡ, ವಿವಿಧ ಮಠಾಧೀಶರು, ರಾಜಕೀಯ ಮುಖಂಡರು, ಜನಪ್ರತಿನಿಧಿಗಳು, ಪಂಚಪೀಠ ಧಾರ್ಮಿಕ ಆಚರಣಾ ಸಮಿತಿ, ತಾಲ್ಲೂಕು ವೀರಶೈವ ಲಿಂಗಾಯತ ಸಮಾಜ ಹಾಗೂ ಭಕ್ತರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಪ್ರಪಂಚದಲ್ಲಿಯೇ ಅತಿ ಹೆಚ್ಚು ಉತ್ಪಾದನೆ ಮಾಡುವ ದೇಶ ಭಾರತ

ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಬಾಳೆ ಬೆಳೆಯ ಸುಧಾರಿತ ಬೇಸಾಯ ಕ್ರಮ

• ಉದಯವಾಹಿನಿ, ಚಿತ್ರದುರ್ಗ

ಬಾಳೆಯು ಮಾವಿನ ನಂತರ ನಮ್ಮ ದೇಶದ ಪ್ರಮುಖ ಹಣ್ಣಿನ ಬೆಳೆಯಾಗಿದ್ದು, ಭಾರತ ದೇಶವು ಪ್ರಪಂಚದಲ್ಲಿಯೇ ಅತಿ ಹೆಚ್ಚು ಉತ್ಪಾದನೆ ಮಾಡುವ ದೇಶವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ ಎಂದು ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಸಹಾಯಕ ಕೃಷಿ ನಿರ್ದೇಶಕ ರಜನೀಕಾಂತ ಹೇಳಿದರು.

ಬಬ್ಬೂರುಫಾರಂನ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಈಚೆಗೆ ಜಿಲ್ಲೆಯ ವಿವಿಧ ಗ್ರಾಮಗಳಿಂದ ಆಗಮಿಸಿದ ರೈತರಿಗೆ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಕೃಷಿಯಲ್ಲಿ ತುಂತುರು ಮತ್ತು ಹನಿ ನೀರಾವರಿ ಘಟಕಗಳ ಅಳವಡಿಕೆ ಮತ್ತು ನಿರ್ವಹಣೆ, ಬಾಳೆ ಬೆಳೆಯ ಸುಧಾರಿತ ಬೇಸಾಯ ಕ್ರಮಗಳು, ಸಮಗ್ರ ರೋಗ ಮತ್ತು ಕೀಟಗಳ ನಿರ್ವಹಣೆ ಕುರಿತು ಆಯೋಜಿಸಲಾದ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಮುಖವಾಗಿ ಏಲಕ್ಕಿ ಬಾಳೆ ಮತ್ತು ಪಚ್ಚ ಬಾಳೆಯನ್ನು ಚಿತ್ರದುರ್ಗ ಜಿಲ್ಲೆಯಲ್ಲಿ ಐದು ಸಾವಿರ ಹೆಕ್ಟೇರಿಗಿಂತ ಅಧಿಕ ಪ್ರದೇಶದಲ್ಲಿ ಬೆಳೆಯುತ್ತಿದ್ದಾರೆ. ಸೂಕ್ಷ್ಮ ನೀರಾವರಿ ಘಟಕಗಳನ್ನು ಉಪಯೋಗಿಸುವುದರಿಂದ ನೀರಿನ ಮಿತ ಬಳಕೆ ಮತ್ತು ಗೊಬ್ಬರದ ಉಳಿತಾಯ, ನೀರು ಹಾಯಿಸಲು ಕೂಲಿ ಕಾರ್ಮಿಕರ ಉಳಿತಾಯ, ಕಳೆಗಳ ನಿಯಂತ್ರಣ, ವಿದ್ಯುತ್ ಶಕ್ತಿ ಉಳಿತಾಯ ಹಾಗೂ ಕೊಳವೆಬಾವಿ ಮತ್ತು ತೆರೆದ ಬಾವಿಗಳಲ್ಲಿನ ನೀರಿನ ಸದ್ಬಳಕೆ ಮತ್ತು ಅವುಗಳ ಬಳಕೆಯ ಅವಧಿ ಹೆಚ್ಚಿಸುವಲ್ಲಿ ಸಹಕಾರಿಯಾಗಿದೆ ಎಂದರು.

ನಮ್ಮ ಕರ್ನಾಟಕ ರಾಜ್ಯವು ರಾಷ್ಟ್ರದಲ್ಲಿಯೇ ಅತಿ ಹೆಚ್ಚು ಪ್ರದೇಶದಲ್ಲಿ ಸೂಕ್ಷ್ಮ ನೀರಾವರಿ ಅಳವಡಿಸಿದ ರಾಜ್ಯವಾಗಿದೆ. ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆ ಅಡಿ ರೈತರು ಅಗತ್ಯ ದಾಖಲಾತಿಗಳೊಂದಿಗೆ ತಮ್ಮ ಹತ್ತಿರದ ರೈತ ಸಂಪರ್ಕ ಕೇಂದ್ರವನ್ನು ಸಂಪರ್ಕಿಸಿ ತುಂತುರು ನೀರಾವರಿ ಘಟಕಗಳನ್ನು ಪಡೆಯಬಹುದಾಗಿದೆ. ಒಮ್ಮೆ ಸೂಕ್ಷ್ಮ ನೀರಾವರಿ ಪದ್ಧತಿಗೆ ಸಹಾಯಧನ ಪಡೆದ ಸಾಮಾನ್ಯ ವರ್ಗದ ರೈತರಿಗೆ ಮತ್ತೊಮ್ಮೆ ಸಹಾಯಧನ ಪಡೆಯಲು ಅವಕಾಶವಿರುವುದಿಲ್ಲ. ಆದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ರೈತರಿಗೆ ಪ್ರತಿ ಏಳು ವರ್ಷಕ್ಕೊಮ್ಮೆ ಸೂಕ್ಷ್ಮ ನೀರಾವರಿ ಘಟಕಗಳನ್ನು ಸಹಾಯಧನದಲ್ಲಿ ನೀಡಲು ಅವಕಾಶವಿರುತ್ತದೆಂದರು. ಹಾಗೂ ಹೆಚ್ಚಿನ ಮಾಹಿತಿಗಾಗಿ ತಮ್ಮ ಹತ್ತಿರದ ರೈತ ಸಂಪರ್ಕ ಕೇಂದ್ರಕ್ಕೆ ಸಂಪರ್ಕಿಸಲು ಕೋರಿದರು. ಜೈನ್ ಇರಿಗೇಷನ್ ಸಂಸ್ಥೆಯ ಪ್ರತಿನ

ದಿನ ಭವಿಷ್ಯ

ರಾಹುಕಾಲ	ಮಧ್ಯಾಹ್ನ	03:00 ರಿಂದ 04:30
ಗುಳಿಕ ಕಾಲ	ಬೆಳಿಗ್ಗೆ	12:00 ರಿಂದ 01:30
ಯಮಗಂಡ ಕಾಲ	ಬೆಳಿಗ್ಗೆ	09:00 ರಿಂದ 10:30

ಮೇಷ ನಿಮ್ಮ ಅತ್ಯಂತ ಪ್ರೀತಿಯ ಕನಸು ನನಸಾಗುತ್ತದೆ. ಆದರೆ ತುಂಬಾ ಸಂತೋಷ ಸ್ವಲ್ಪ ಸಮಸ್ಯೆಗಳನ್ನು ಉಂಟುಮಾಡಬಹುದಾದ್ದರಿಂದ ನಿಮ್ಮ ಉತ್ಸಾಹವನ್ನು ನಿಯಂತ್ರಣದಲ್ಲಿರಿಸಿಕೊಳ್ಳಿ. ಗಡಿಬಿಡಿಯ ನಿರ್ಧಾರಗಳನ್ನು ಕೈಗೊಳ್ಳಬೇಡಿ – ವಿಶೇಷವಾಗಿ ಪ್ರಮುಖ ಹಣಕಾಸಿನ ವ್ಯವಹಾರಗಳ ಬಗ್ಗೆ ಮಾತನಾಡುವಾಗ.

ವೃಷಭ ನಿಮ್ಮ ಚಿಂತನೆ, ಶಕ್ತಿಯನ್ನು ನೀವು ವಾಸ್ತವವಾಗಿ ಏನನ್ನು ನೋಡಬಯಸುತ್ತೀರೋ ಅದನ್ನು ಸಾಧಿಸುವಲ್ಲಿ ನಿರ್ದೇಶಿಸಿ. ಇದುವರೆಗೆ ನಿಮ್ಮ ಸಮಸ್ಯೆಯಂದರೆ ನೀವು ಪ್ರಯತ್ನಿಸದೇ ಕೇವಲ ಆಸೆಪಡುತ್ತೀರಿ. ಹಣಕ್ಕೆ ಸಂಬಂಧಿಸಿದ ಯಾವುದೇ ಸಮಸ್ಯೆಯನ್ನು ಇಂದು ಪರಿಹರಿಸಬಹುದು,

ಮಿಥುನ ಯಾವುದಾದರೂ ಸೃಜನಾತ್ಮಕ ಕೆಲಸದಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳಿ. ಸೋಮಾರಿಯಾಗಿ ಕುಳಿತುಕೊಳ್ಳುವ ನಿಮ್ಮ ಅಭ್ಯಾಸ ಮಾನಸಿಕ ಶಾಂತಿಗೆ ಮಾರಣಾಂತಿಕವಾಗಬಹುದು. ಹೊಸ ಹಣಗಳಿಕೆಯ ಅವಕಾಶಗಳು ಲಾಭದಾಯಕ ವಾಗಿರುತ್ತವೆ. ನಿಮ್ಮ ಮಕ್ಕಳಿಂದ ನೀವು ಕೆಲವು ಪಾಠಗಳನ್ನು ಕಲಿಯಲಿದ್ದೀರಿ.

ಕರ್ಕಾಟಕ ನೀವು ವಿಶ್ರಾಂತಿ ಪಡೆಯಲು ಸಾಧ್ಯವಾಗುವ ಒಂದು ದಿನ. ನಿಮ್ಮ ಸ್ನಾಯುಗಳಿಗೆ ವಿಶ್ರಾಂತಿ ನೀಡಲು ತೈಲದಿಂದ ನಿಮ್ಮ ದೇಹಕ್ಕೆ ಮಸಾಜ್ ಮಾಡಿ. ನಿಧಿಗಳ ಹಠಾತ್ ಒಳಹರಿವು ನಿಮ್ಮ ಪಾವತಿಗಳು, ತಕ್ಷಣದ ವೆಚ್ಚಗಳನ್ನು ನೋಡಿ ಕೊಳ್ಳುತ್ತದೆ. ನಿಮ್ಮ ಕುಟುಂಬದ ಕಲ್ಯಾಣಕ್ಕಾಗಿ ಕೆಲಸ ಮಾಡಿ.

ಸಿಂಹ ನಿಮ್ಮ ಅತ್ಯಂತ ಪ್ರೀತಿಯ ಕನಸು ನನಸಾಗುತ್ತದೆ. ಆದರೆ ತುಂಬಾ ಸಂತೋಷ ಸ್ವಲ್ಪ ಸಮಸ್ಯೆಗಳನ್ನು ಉಂಟುಮಾಡಬಹುದಾದ್ದರಿಂದ ನಿಮ್ಮ ಉತ್ಸಾಹವನ್ನು ನಿಯಂತ್ರಣದಲ್ಲಿರಿಸಿಕೊಳ್ಳಿ. ನಿಮ್ಮ ಹಿಂದಿನ ಸಾಲವನ್ನು ಇಂದಿನ ವರೆಗೂ ಮರುಪಾವತಿ ಮಾಡದೇ ಇರುವ ನಿಮ್ಮ ಸಂಬಂಧಿಕರಿಗೆ ಸಾಲ ಕೊಡಬಾರದು.

ಕನ್ಯಾ ಒಂದು ಲಾಭಕರ ದಿನ ಮತ್ತು ನೀವು ಧೀರ್ಘಕಾಲದ ಅನಾರೋಗ್ಯಕ್ಕೆ ಪರಿಹಾರ ಹುಡುಕಲು ಸಾಧ್ಯವಾಗಬಹುದು. ದಿನದ ಆರಂಭವು ಚೆನ್ನಾಗಿ ಅಗಿದರು, ಸಂಜೆಯ ಸಮಯದಲ್ಲಿ ಯಾವುದೇ ಕಾರಣದಿಂದ ನಿಮ್ಮ ಹಣ ಖರ್ಚಾಗಬಹುದು. ಇದರಿಂದ ನೀವು ತೊಂದರೆಗೊಳಗಾಗಬಹುದು.

ತುಲಾ ನಿಮ್ಮ ಶೀಘ್ರ ಕ್ರಮ ನಿಮ್ಮ ಸುದೀರ್ಘವಾದ ಸಮಸ್ಯೆಯನ್ನು ಪರಿಹರಿಸುತ್ತದೆ. ಇಂದು ಹಣಕಾಸಿನ ಭಾಗವು ಉತ್ತಮವಾಗಿರುತ್ತದೆ ಆದರೆ ಇದರೊಂದಿಗೆ ನೀವು ನಿಮ್ಮ ಹಣವನ್ನು ವ್ಯರ್ಥವಾಗಿ ಖರ್ಚು ಮಾಡದಂತೆ ನೋಡಿಕೊಳ್ಳಬೇಕು. ಕೌಟುಂಬಿಕ ಸಮಸ್ಯೆಗೆ ಮೊದಲ ಆದ್ಯತೆ ನೀಡಬೇಕು.

ವೃಶ್ಚಿಕ ನೀವು ಬಹುಕಾಲದಿಂದ ಎದುರು ನೋಡುತ್ತಿದ್ದ ಜೀವನದ ಒತ್ತಡಗಳಿಂದ ಇಂದು ಶಮನ ಪಡೆಯುತ್ತೀರಿ. ಅವುಗಳನ್ನು ಶಾಶ್ವತವಾಗಿ ದೂರವಿಸಿರಿಸಲು ನಿಮ್ಮ ಜೀವನಶೈಲಿಯನ್ನು ಬದಲಿಸಲು ಇದು ಸರಿಯಾದ ಸಮಯ. ನೀವು ನಿಮ್ಮ ತಂತ್ರಗಳನ್ನು ಅಳವಡಿಸಿದಲ್ಲಿ ಇಂದು ಸ್ವಲ್ಪ ಹೆಚ್ಚುವರಿ ಹಣ ಸಂಪಾದಿಸುತ್ತೀರಿ.

ಧನಸ್ಸು ಸಾಧ್ಯವಾದರೆ ದೀರ್ಘ ಪ್ರಯಾಣವನ್ನು ತಪ್ಪಿಸಿ. ಏಕೆಂದರೆ ನೀವು ಪ್ರಯಾಣಿಸು ತುಂಬಾ ದುರ್ಬಲರಾಗಿದ್ದೀರಿ, ಇದು ಮತ್ತಷ್ಟು ನಿಮ್ಮನ್ನು ದುರ್ಬಲಗೊಳಿಸುತ್ತದೆ. ಸಣ್ಣ ಉದ್ಯೋಗವನ್ನು ಮಾಡುವ ಜನರು, ಇಂದು ತಮ್ಮ ಆಪ್ತರಿಂದ ಯಾವುದೇ ಸಲಹೆಯನ್ನು ಪಡೆಯಬಹುದು.

ಮಕರ ನೀವು ಪರಿಸ್ಥಿತಿಯ ನಿಯಂತ್ರಣ ಹೊಂದುತ್ತಿದ್ದಂತೆ ನಿಮ್ಮ ಆತಂಕ ಕಣ್ಮರೆ ಯಾಗುತ್ತದೆ. ಇದು ಧೈರ್ಯದ ಮೊದಲ ಸ್ಪರ್ಶದಲ್ಲಿ ಕುಸಿದುಹೋಗುವ ಸಾಬೂನಿನ ಗುಳ್ಳೆಯಷ್ಟೇ ಗಟ್ಟಿಯೆಂದು ನೀವು ಅರ್ಥ ಮಾಡಿಕೊಳ್ಳುತ್ತೀರಿ. ಕೆಲವು ದುಃಖದ ಸಮಯದಲ್ಲಿ ನೀವು ಸಂಗ್ರಹಿಸುವ ಹಣ ಮಾತ್ರ ನಿಮ್ಮ ಕೆಲಸಕ್ಕೆ ಬರುತ್ತದೆ ಎಂಬುದನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಿ.

ಕುಂಭ ಇಂದು ನೀವು ಭರವಸೆಯ ಮಾಯಾಜಾಲದಲ್ಲಿದ್ದೀರಿ. ತಮ್ಮ ವ್ಯಾಪರಕ್ಕಾಗಿ ಮನೆಯಿಂದ ಹೊರಗೆ ಹೋಗಿರುವ ವ್ಯಾಪಾರಿಗಳು, ತನ್ನ ಹಣವನ್ನು ಜಾಗರೂಕವಾಗಿಡಿ, ಹಣದ ಕಳ್ಳತನವಾಗುವ ಸಾಧ್ಯತೆ ಇದೆ. ಇಂದು ನೀವು ಸಲಹೆ ಕೊಟ್ಟರೆ ಅದನ್ನು ಸ್ವೀಕರಿಸಲೂ ಸಿದ್ಧವಾಗಿರಿ.

ಮೀನ ಒಬ್ಬ ಸಂತನ ಆಶೀರ್ವಾದದಿಂದ ಮನಶ್ಶಾಂತಿ. ನೀವು ವಿಪರೀತವಾಗಿ ಖರ್ಚು ಮಾಡುವುದನ್ನು ನಿಲ್ಲಿಸಿದಾಗ ಮಾತ್ರ ನಿಮ್ಮ ಹಣವು ನಿಮ್ಮ ಕೆಲಸಕ್ಕೆ ಬರುತ್ತದೆ, ಇಂದು ನೀವು ಈ ವಿಷಯವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬಹುದು. ನೆರೆಮನೆಯವರ ಜೊತಗಿನ ಜಗಳ ನಿಮ್ಮ ಮನಸ್ಸು ಕೆಡಿಸುತ್ತದೆ.

ಕಾಯಕ ಶರಣರ ದಾರಿಯಲ್ಲಿ ಸಾಗೋಣ

ಕಾಯಕ ಶರಣರ ಜಯಂತಿಯಲ್ಲಿ ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ

• ಉದಯವಾಹಿನಿ, ಚಿತ್ರದುರ್ಗ

ಕಾಯಕ ಶರಣರ ಆದರ್ಶ ಪಾಲನೆ, ಅವರ ಮಾರ್ಗದರ್ಶನದಲ್ಲಿ ನಾವುಗಳು ನಡೆದು, ಮೂಢನಂಬಿಕೆ, ಕಂದಾಚಾರಗಳಿಂದ ಹೊರಬಂದು ಉತ್ತಮ ಸಮಾಜ ನಿರ್ಮಿಸೋಣ ಎಂದು ಅಪರ ಜಿಲ್ಲಾಧಿಕಾರಿ ಬಿ.ಟಿ. ಕುಮಾರಸ್ವಾಮಿ ಹೇಳಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಹಿಂಭಾಗದ ಪತ್ರಿಕಾ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆ ವತಿಯಿಂದ ಸೋಮವಾರ ಹಮ್ಮಿಕೊಂಡಿದ್ದ ಮಾದರ ಚೆನ್ನಯ್ಯ, ಮಾದರ ಧೂಳಯ್ಯ, ಡೋಹರ ಕಕ್ಕಯ್ಯ, ಉರಿಲಿಂಗ ಪೆದ್ದಿ ಹಾಗೂ ಸಮಗಾರ ಹರಳಯ್ಯ ಮೊದಲಾದ ಕಾಯಕ ಶರಣರ ಜಯಂತಿ ಆಚರಣೆ ಸಮಾರಂಭದಲ್ಲಿ ಕಾಯಕ ಶರಣರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಅವರು ಮಾತನಾಡಿದರು.

ಕಾಯಕ ಶರಣರಾದ ಮಾದರ ಚೆನ್ನಯ್ಯ, ಮಾದರ ಧೂಳಯ್ಯ, ಡೋಹರ ಕಕ್ಕಯ್ಯ, ಉರಿಲಿಂಗ ಪೆದ್ದಿ ಹಾಗೂ ಸಮಗಾರ ಹರಳಯ್ಯ ಅವರು ತಮ್ಮ ಕಾಯಕದಿಂದ ಗುರುತಿಸಿಕೊಂಡವರು. ಕಾಯಕದ ಮೂಲಕ ಕೈಲಾಸ ಕಂಡ ಶರಣರು. ಕಾಯಕ ಹಾಗೂ ದಾಸೋಹದ ಪರಿಕಲ್ಪನೆ 12ನೇ ಶತಮಾನದ ಶರಣರು ನೀಡಿದ ಬಹುದೊಡ್ಡ ಕೊಡುಗೆ ಎಂದು ಹೇಳಿದರು. ಕಾಯಕ ಶರಣರು ಹಾಕಿಕೊಟ್ಟ ವಿಚಾರಧಾರೆಗಳು, ಅವರ ಬದುಕು ಮತ್ತು ಬರವಣಿಗೆ ಎರಡೂ ಸಾಮಿಪ್ಯವಿದೆ. ಕಾಯಕ ತತ್ವಕ್ಕೆ ಆದ್ಯತೆ ನೀಡಿ ಬದ್ಧತೆ ಬದುಕು ನಿರ್ವಹಿಸಿದ 12ನೇ ಶತಮಾನದ ಶರಣರ ನಡೆ-ನುಡಿ ಒಂದಾಗಿದ್ದವು. ಜಾತಿ, ಮತ, ಪಂಥ, ಮೇಲು-ಕೀಳು ಎನ್ನದೆ ಕಾಯಕ ಮಾಡಿದವರು. ಇಂತಹ ಶರಣರ ತತ್ವಾದರ್ಶಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಂಡು ಬಾಳಬೇಕು ಎಂದು ಸಲಹೆ ನೀಡಿದರು.

ಉದಯವಾಹಿನಿ ಚಿತ್ರ

12ನೇ ಶತಮಾನ ಬಹಳ ಮುಖ್ಯವಾಗಿ ಧಾರ್ಮಿಕ ಅಂದೋಲನದ ಕಾಲಘಟ್ಟ. ಜೊತೆಗೆ ಸಾಮಾಜಿಕ ಅಂದೋಲನವೂ ಆಗಿತ್ತು. ನಿರ್ಲಕ್ಷ್ಯಕ್ಕೆ ಒಳಗಾದ ಸಮುದಾಯಗಳಿಗೆ ಅವಕಾಶ ಕೊಟ್ಟ ಕಾಲ. ಅನುಭಾವಗಳನ್ನು ಹಂಚಿಕೊಟ್ಟ ಕಾಲಘಟ್ಟ. ಅನುಭವ ಮಂಟಪದಲ್ಲಿ ಯಾವುದೇ ಜಾತಿಯ ತಾರತಮ್ಯ ಇಲ್ಲದೇ ಅನುಭವಗಳನ್ನು ಚರ್ಚಿಸಿ ಒಪ್ಪಿಕೊಳ್ಳುವ ವೇದಿಕೆಯಾಗಿತ್ತು. ನಿರ್ಲಕ್ಷ್ಯಕ್ಕೆ ಒಳಗಾದ ಸಮುದಾಯಗಳಿಗೆ ವೇದಿಕೆ ಕಲ್ಪಿಸಿದವರು ಬಸವಣ್ಣನವರು. ಇಂತಹ ವೇದಿಕೆಯನ್ನು ಕಾಯಕ ಶರಣರು ಸಮರ್ಪಕವಾಗಿ ಬಳಸಿಕೊಂಡರು ಎಂದು ಹೇಳಿದರು.

ಪ್ರಾಧ್ಯಾಪಕ ಡಾ. ಕೆ.ಆರ್.ಜೆ. ರಾಜಕುಮಾರ್

ಕಾಯಕ ಶರಣರ ಕುರಿತು ಉಪನ್ಯಾಸ ನೀಡಿದ ಉಪನ್ಯಾಸಕ ಡಾ.ಕೆರೆಯಾಗಳಹಳ್ಳಿ ತಿಪ್ಪೇಸ್ವಾಮಿ, ವಚನ ಚಳುವಳಿ ದಲಿತವರ್ಗದವರು ಹೆಚ್ಚು ಕಟ್ಟಿದ ಚಳುವಳಿ. ಮೌಢ್ಯ, ಕಂದಾಚಾರ, ಜಾತೀಯತೆ, ಅಸಮಾನತೆ ಎದ್ದು ಕಾಣುತ್ತಿತ್ತು. ಆ ಸಂದರ್ಭದಲ್ಲಿ ಅಸಮಾನತೆ ಹೋಗಲಾಡಿಸಲು ಅನುಭವ ಮಂಟಪದಲ್ಲಿ ಚರ್ಚಿಸಿ, ಹೊಸ ಸಮಾಜ ಕಟ್ಟಲು ಪ್ರಯತ್ನಿಸಿದರು ಎಂದು ತಿಳಿಸಿದ ಅವರು, ನಮ್ಮ ನಮ್ಮ ಕಾಯಕ ಮಾಡುತ್ತಾ ಉತ್ತಮ ಸಮಾಜ ನಿರ್ಮಾಣಕ್ಕೆ ನಾವೆಲ್ಲರೂ ಪ್ರಯತ್ನಿಸೋಣ ಎಂದು ಹೇಳಿದರು. ಉಪನ್ಯಾಸಕ ಡಾ.ಓಬಳೇಶ್ ಮಾತನಾಡಿ, 12ನೇ ಶತಮಾನದ ವಚನ ಚಳುವಳಿಯನ್ನು ಸುವರ್ಣಯುಗ ಎಂದು ಕರೆಯಲಾಗುತ್ತದೆ. ಕಾಯಕ ಎಂಬುವುದು ಜೀವನಕ್ಕಾಗಿ ಕೈಗೊಂಡ ಕೇವಲ ವೃತ್ತಿಯಲ್ಲ. ವೃತ್ತಿಗಳನ್ನು ಗೌರವಯುತವಾಗಿ ಕಾಣುವುದೇ ಕಾಯಕ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ದಲಿತ ಸಂಘರ್ಷ ಸಮಿತಿಯಲ್ಲಿ ಶೋಷಿತರ ಪರವಾಗಿ ಹೋರಾಟ ಮಾಡಿದಂತಹ ದಲಿತ ಹೋರಾಟಗಾರರಾದ ಎಂ.ಜಯ್ಯಣ್ಣ, ಮಾಡನಾಯಕನಹಳ್ಳಿ ರಂಗಪ್ಪ, ನಾರಾಯಣಸ್ವಾಮಿ ಅವರ ಕುಟುಂಬ ವರ್ಗದವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ತಹಶೀಲ್ದಾರ್ ಡಾ.ನಾಗವೇಣಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಬಿ.ಎಂ.ಗುರುನಾಥ್, ಆಹಾರ ಇಲಾಖೆ ಸಹಾಯಕ ನಿರ್ದೇಶಕ ಎಸ್.ಕೆ.ಮಲ್ಲಿಕಾರ್ಜುನ್, ದಲಿತ ಮುಖಂಡರಾದ ಜೆ.ಜೆ.ಹಟ್ಟಿ ಬಿ.ರಾಜಪ್ಪ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಉಪಾಧ್ಯಕ್ಷ ಡಿ.ಎನ್. ಮೈಲಾರಪ್ಪ, ನಗರಸಭಾ ಮಾಜಿ ಅಧ್ಯಕ್ಷ ಹೆಚ್.ಸಿ. ನಿರಂಜನಮೂರ್ತಿ, ಕಣಿವೆ ಮಾರಮ್ಮ ಕನ್ನಡ ಅಭಿಮಾನಿಗಳ ಸಂಘದ ಅಧ್ಯಕ್ಷ ಎಂ.ತಿಪ್ಪೇಸ್ವಾಮಿ ಸೇರಿದಂತೆ ಮತ್ತಿತರರು ಇದ್ದರು. ಭಾಗ್ಯಮ್ಮ ಮತ್ತು ತಂಡದವರು ಗೀತಗಾಯನ ನಡೆಸಿಕೊಟ್ಟರು.

ಜಾನಪದ ಕಲಾತಂಡಗಳೊಂದಿಗೆ ಮೆರವಣಿಗೆ

ಕಾಯಕ ಶರಣರ ಜಯಂತಿ ಅಂಗವಾಗಿ ಚಿತ್ರದುರ್ಗ ನಗರದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದ ಬಳಿಯಿಂದ ಜಾನಪದ ಕಲಾತಂಡಗಳೊಂದಿಗೆ ಕಾಯಕ ಶರಣರ ಭಾವಚಿತ್ರ ಮೆರವಣಿಗೆಗೆ ತಹಶೀಲ್ದಾರ್ ಡಾ.ನಾಗವೇಣಿ ಚಾಲನೆ ನೀಡಿದರು. ನಗರದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಿಂದ ಆರಂಭವಾದ ಮೆರವಣಿಗೆಯು ಓಬವ್ವ ವೃತ್ತದ ಮೂಲಕ ಜಿಲ್ಲಾಧಿಕಾರಿಗಳ ಕಚೇರಿವರೆಗೆ ಮೆರವಣಿಗೆ ನಡೆಯಿತು.

ವಿದ್ಯಾರ್ಥಿಗಳು ಕಠಿಣ ಪರಿಶ್ರಮ ಪಡಬೇಕು: ಪಾರ್ವತಿ

• ಉದಯವಾಹಿನಿ, ಕೆಂಭಾವಿ

ಕಠಿಣ ಪರಿಶ್ರಮದಿಂದ ಅಧ್ಯಯನ ಮಾಡಿದರೆ ಯಾವುದೇ ಕ್ಷೇತ್ರದಲ್ಲಾದರೂ ಸಾಧನೆ ಮಾಡಲು ಸಾಧ್ಯ. ಸಾಧನೆಗೆ ಪರಿಶ್ರಮವೇ ಹೊರತು ಅನ್ಯಮಾರ್ಗವಲ್ಲ ಎಂದು ವಿದ್ಯಾವಾಹಿನಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಪಾರ್ವತಿ ಬಾಪೂಗೌಡ ಹೇಳಿದರು.

ಉದಯವಾಹಿನಿ ಚಿತ್ರ

ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಬೀಳ್ಕೊಡು

ಪಟ್ಟಣದಲ್ಲಿರುವ ಹಿಲ್ ಟಾಪ್ ಕಾಲೋನಿಯಲ್ಲಿರುವ ವಿದ್ಯಾವಾಹಿನಿ ಪದವಿ ಪೂರ್ವ ಕಾಲೇಜಿನಲ್ಲಿ ಶನಿವಾರ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಅವರು ಮಾತನಾಡಿದರು. ಪ್ರಸ್ತುತ ದಿನಗಳಲ್ಲಿ ಅಂಕಗಳ ಜೊತೆಗೆ ಜೀವನದ ಮೌಲ್ಯಗಳ ಬೆಳೆಸಿಕೊಳ್ಳಬೇಕಾದ ಅಗತ್ಯವಿದೆ. ವಿದ್ಯಾರ್ಥಿಗಳು ಯಾವುದೇ ಕಾರಣಕ್ಕೂ ನಿರಾಶೆಯಾಗಬಾರದು. ಆತ್ಮವಿಶ್ವಾಸ ಬೆಳೆಸಿಕೊಳ್ಳಬೇಕು ಎಂದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಯಾಳಗಿ ಪ್ರೌಢ ಶಾಲೆಯ ಮುಖ್ಯಗುರುಗಳಾದ ಶಿವಣ್ಣಗೌಡ ಪಾಟೀಲ್ ಮಾತನಾಡಿ ವಿದ್ಯಾರ್ಥಿ ಜೀವನದಲ್ಲಿ ಶಿಸ್ತು ಬಹಳ ಪ್ರಮುಖವಾಗಿರುತ್ತದೆ. ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳಬೇಕು. ಸಕರಾತ್ಮಕ ಚಿಂತನೆಗಳ ಮೈಗೂಡಿಸಿಕೊಳ್ಳಬೇಕು. ಆತ್ಮ ವಿಶ್ವಾಸದಿಂದ ಮುನ್ನಡೆದರೆ ಜೀವನದಲ್ಲಿ ಏನನ್ನಾದರೂ ಸಾಧಿಸಬಹುದು. ಗುರಿ ಸಾಧನೆ ಮಾಡಬೇಕಾದರೆ ನಿರಂತರ ಪ್ರಯತ್ನ ಅಗತ್ಯವಾಗಿದೆ. ಮಕ್ಕಳ ಬಗ್ಗೆ ಪಾಲಕರು ಬಹಳಷ್ಟು ನಿರೀಕ್ಷೆಗಳನ್ನಿಟ್ಟಿಕೊಂಡಿರುತ್ತಾರೆ. ಪಾಲಕರು ಮಕ್ಕಳ ಮನಸ್ಸು ಅರ್ಥಮಾಡಿ ಕೊಳ್ಳಬೇಕು. ಮಕ್ಕಳಿಗೆ ಯಾವ ಕ್ಷೇತ್ರದಲ್ಲಿ ಆಸಕ್ತಿಯಿದೆಯೋ ಅದೇ ಕ್ಷೇತ್ರದಲ್ಲಿ ಅವರನ್ನು ಪ್ರೋತ್ಸಾಹಿಸಬೇಕು ಅಂದಗಾ ಮಾತ್ರ ಮಕ್ಕಳು ನಿಶ್ಚಿತ ಗುರಿ ತಲುಪುತ್ತಾರೆ ಎಂದರು.

ಈ ಸಂಧರ್ಭದಲ್ಲಿ ಸಂಸ್ಥೆಯ ಅಧ್ಯಕ್ಷರು ವಿಶ್ವನಾಥರೆಡ್ಡಿ ಅಬ್ಬೆತುಮಕೂರ್, ಡಾ. ಮಹಾಂತೇಶ್ ಸುಬೇದಾರ್, ಸಿದ್ದು ನಡಕೂರ್, ರುದ್ರಗೌಡ ಅಸಂತಪುರ, ಶ್ರೇಶೈಲ್ ಸಿಂದಗಿ, ಸುರೇಶ ಪರಸನಹಳ್ಳಿ, ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

ಬಡ ಕುಟುಂಬಗಳಿಗಾಗಿ ನಮ್ಮ ಕ್ಲಿನಿಕ್ ಸೆಂಟರಿ ಸೇವೆ

ಉದಯವಾಹಿನಿ, ಹುಣಸಗಿ

ರಾಜ್ಯಾದ್ಯಂತ ನಮ್ಮ ಕ್ಲಿನಿಕ್ ಆರಂಭವಾಗಿದ್ದು ನಮ್ಮ ಹುಣಸಗಿ ತಾಲ್ಲೂಕಿನಲ್ಲಿ ಪ್ರಾರಂಭವಾಗಿದ್ದು ಅದರ ಸದುಪಯೋಗ ಎಲ್ಲರೂ ಪಡೆದುಕೊಳ್ಳಬೇಕು ಎಂದು ಸುರಪುರ ವಿಧಾನಸಭಾ ಕ್ಷೇತ್ರದ ಶಾಸಕರಾದ ರಾಜಾ ವೇಣುಗೋಪಾಲ ನಾಯಕ ಹೇಳಿದರು.

ಜಿಲ್ಲಾ ಪಂಚಾಯತ, ಯಾದಗಿರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಪಟ್ಟಣದ ಕಿತ್ತೂರು ರಾಣಿ ಚನ್ನಮ್ಮ ವೃತ್ತದ ಹತ್ತಿರ ನಮ್ಮ ಕ್ಲಿನಿಕ್ ಸೆಂಟರಿ ಉದ್ಘಾಟನೆ ಮಾಡಿ ಮಾತನಾಡಿದವರು, ಬಡವರ ಆರೋಗ್ಯ ದೃಷ್ಟಿಯಿಂದ ಈ ಒಂದು ಯೋಜನೆ ಜಾರಿಗೆ ತಂದಿದ್ದು, ಆರೋಗ್ಯ ಸಮಸ್ಯೆಯಾದಾಗ ನಮ್ಮ ಕ್ಲಿನಿಕ್ ಗೆಬೇಟಿ ಗುಣ ಪಡಿಸಿಕೊಳ್ಳಬೇಕು. ಸರ್ಕಾರವು ಬಡವರಿಗಾಗಿಯೇ ಈ ಒಂದು ಯೋಜನೆ ಜಾರಿಗೆ ತಂದಿದೆ ಎಂದರು ಈ ಸಂದರ್ಭದಲ್ಲಿ ತಾಲ್ಲೂಕು ಆಡಳಿತ ವೈದ್ಯಧಿಕಾರಿಗಳು ಡಾ.ರಾಜಾವೆಂಕಟಪ್ಪ ನಾಯಕ

ಉದಯವಾಹಿನಿ ಚಿತ್ರ

ಕಾಂಗ್ರೇಸ್ ಪಕ್ಷದ ಹಿರಿಯ ಮುಖಂಡರಾದ ವೆಂಕೋಬ ಸಾಹುಕಾರ, ಚನ್ನಯ್ಯ ಸ್ವಾಮಿ ಹಿರೇಮಠ, ಪಟ್ಟಣ ಪಂಚಾಯತ್ ಅಧ್ಯಕ್ಷರಾದ ತಿಪ್ಪಣ್ಣ ರಾಟೋಡ, ಪಟ್ಟಣ ಪಂಚಾಯತ ಉಪಾಧ್ಯಕ್ಷರಾದ ಶಾಂತಣ್ಣ ಮಲಗಲದಿನ್ನಿ, ಚಂದ್ರಶೇಖರ ಸಾಹು ದಂಡಿನ,

ಶರಣಗೌಡ ಪಾಟೀಲ ವಜ್ಜಲ, ಬಾಪುಗೌಡ ಪಾಟೀಲ, ಮಹಾದೇವಿ ಬೇವಿನಾಳ ಮಠ, ಭೀಮರಾಯ ಮುಲಿಮನಿ, ಶರಣು ದಂಡಿನ, ದೊಡ್ಡ ದೇಸಾಯಿ ದೇವರಗೋನಾಲ, ವೆಂಕಟೇಶ ಹೊಸಮನಿ, ರವಿ ಮಲಗಲದಿನ್ನಿ, ಕಾಸಿಂಸಾಬ ಚೌದ್ರಿ ಹಾಗೂ ಇತರರು ಇದ್ದರು.

ಪಿಎನ್‌ಜಿ ಪೈಪ್‌ನಲ್ಲಿ ಬೆಂಕಿ: ಆತಂಕ

• ಉದಯವಾಹಿನಿ, ಧಾರವಾಡ

ರಜತಗಿರಿಯ ಒಂದನೇ ಕ್ರಾಸ್‌ನಲ್ಲಿ ಪಿಎನ್‌ಜಿ (ಕೊಳವೆ ಮೂಲಕ ಪೂರೈಸುವ ಅಡುಗೆ ಅನಿಲ) ಪೈಪ್‌ನಲ್ಲಿ ಬೆಂಕಿ ಹೊತ್ತಿಕೊಂಡು ಆತಂಕ ಸೃಷ್ಟಿಯಾಗಿತ್ತು. ಅಗ್ನಿಶಾಮಕ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದರು. ಶಾಲ್ಮಲಾ ಅಪಾರ್ಟಮೆಂಟ್ ಪಕ್ಕದ ರಸ್ತೆ ಬದಿಯ ಚರಂಡಿಯಲ್ಲಿ ಹಾದು ಹೋಗಿರುವ ಪಿಎನ್‌ಜಿ ಪೈಪ್‌ನಲ್ಲಿ ಬೆಳಿಗ್ಗೆ 11 ಗಂಟೆ ಹೊತ್ತಿನಲ್ಲಿ ಬೆಂಕಿ ಹೊತ್ತಿಕೊಂಡಿತ್ತು.

ಬೆಂಕಿ ಕೆನ್ನಾಲಿಗೆಗೆ ಚರಂಡಿ ಬದಿಯ ಪ್ರಾಸ್ಟಿಕ್, ಕಸಕಡ್ಡಿ, ಪೊದೆಗಳು, ಗಿಡಗಳು ಸುಟ್ಟಿವೆ. ಅಗ್ನಿಶಾಮಕ ಸಿಬ್ಬಂದಿ ಕಾರ್ಯಾಚರಣೆ ನಡೆಸಿದರು. ರಜತಗಿರಿ ಮತ್ತು ಗಾಂಧಿನಗರದಲ್ಲಿನ ಪಿಎನ್‌ಜಿ ಕೊಳವೆ ಮಾರ್ಗದ ವಾಲ್ವ್ ಬಂದ್ ಮಾಡಿ ಅನಿಲ ಸರಬರಾಜು ನಿಲ್ಲಿಸಲಾಯಿತು. ನೀರು ಹರಿಸಿ ಬೆಂಕಿ ನಂದಿಸಲ

ಕರ್ಮ ಮಾರ್ರೆ..! ಪಿಎಲ್‌ಎ ಸೈನಿಕರ ದೇಶ ನಿಷ್ಠೆ ಮೇಲೆ ಕ್ಸಿ ಜಿನ್‌ಪಿಂಗ್ ಅನುಮಾನ; ಯಾರಿಗೆ ವರದಾನ?

ಚೀನೀ ಸೈನಿಕರ ನಿಷ್ಠೆ ಹೆಚ್ಚಿಸಲು ಶೈಕ್ಷಣಿಕ ಶಿಬಿರ ಆಯೋಜನೆ

ಬೀಜಿಂಗ್: ಚೀನಾದ ಪೀಪಲ್ಸ್ ಲಿಬರೇಷನ್ ಆರ್ಮಿ(ಪಿಎಲ್‌ಎ)ಯ ಸೈನಿಕರಲ್ಲಿ ದೇಶ ನಿಷ್ಠೆಯ ಕೊರತೆ ಎದ್ದು ಕಾಣುತ್ತಿದೆ ಎಂದು ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅನುಮಾನ ವ್ಯಕ್ತಪಡಿಸಿದ್ದಾರೆ. ಈ ಕಾರಣಕ್ಕೆ ಪಿಎಲ್‌ಎ ಸೈನಿಕರಿಗಾಗಿ ಬೃಹತ್ ಶೈಕ್ಷಣಿಕ ಶಿಬಿರಗಳನ್ನು ಆಯೋಜಿಸಲು ಕ್ಸಿ ಜಿನ್‌ಪಿಂಗ್ ನಿರ್ಧರಿಸಿದ್ದು, ಪಿಎಲ್‌ಎ ಸೈನಿಕರ ನಿಷ್ಠೆಯ ಕೊರತೆ ಯನ್ನು ನೀಗಿಸಲು ಕ್ರಮ ಕೈಗೊಳ್ಳುವಂತೆ ಹಿರಿಯ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಪಿಎಲ್‌ಎನ ಉನ್ನತ ಅಧಿಕಾರಿಗಳ ನಿಷ್ಠೆ ಸಾಕಾಗುತ್ತಿಲ್ಲ ಎಂದು ಹೇಳಿರುವ ಕ್ಸಿ ಜಿನ್‌ಪಿಂಗ್, ಕಳೆದ ಫೆಬ್ರವರಿ 4, 2025ರಂದು ಚೀನೀ ಸೈನಿಕರಿಗಾಗಿ ಬೃಹತ್ ಶೈಕ್ಷಣಿಕ ಶಿಬಿರಗಳ ಆಯೋಜನೆಯ ಘೋಷಣೆ ಮಾಡಿದ್ದಾರೆ. ಈ ಶಿಬಿರವನ್ನು ಕ್ಸಿ ಜಿನ್‌ಪಿಂಗ್ ನೇತೃತ್ವದ ಸೆಂಟ್ರಲ್ ಮಿಲಿಟರಿ ಕಮಿಷನ್‌ನ ಪೊಲಿಟಿಕಲ್ ವರ್ಕ್ ಡಿಪಾರ್ಟ್‌ಮೆಂಟ್‌ನಿಂದ ಆಯೋಜಿಸಲಾಗುವುದು ಎಂದು ಮೂಲಗಳು ಖಚಿತಪಡಿಸಿವೆ. ಪಿಎಲ್‌ಎನಲ್ಲಿ ಸರಣಿ ಭ್ರಷ್ಟಾಚಾರ ಆರೋಪಗಳು ಕೇಳಿಬಂದಿದ್ದು, ಇದು ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರ ಆತ್ಮವಿಶ್ವಾಸವನ್ನು ಅಲುಗಾಡಿಸಿವೆ. ಉನ್ನತ ಪಿಎಲ್‌ಎ ಅಧಿಕಾರಿಗಳು ರಕ್ಷಣಾ ಉದ್ಯಮದ ಪ್ರಮುಖ ವ್ಯಕ್ತಿಗಳ ವಿರುದ್ಧ ಭಾರೀ ಭ್ರಷ್ಟಾಚಾರದ ಆರೋಪಗಳು ಕೇಳಿಬಂದಿವೆ. ಈ ಪೈಕಿ ಸಿಎಮ್‌ಸಿ ಸದಸ್ಯ ಅಡ್ಮಿರಲ್ ಮಿಯಾವೊ ಹುವಾ ಮತ್ತು ಹಿಂದಿನ ರಕ್ಷಣಾ ಸಚಿವ ಲಿ ಶಾಂಗ್‌ಫು ವಿರುದ್ಧದ ಭ್ರಷ್ಟಾಚಾರ ಆರೋಪಗಳು ಕ್ಸಿ ಜಿನ್‌ಪಿಂಗ್ ಅವರನ್ನು ತೀವ್ರವಾಗಿ ಚಿಂತಿಸುವಂತೆ ಮಾಡಿವೆ.

ಮಾಜಿ ರಕ್ಷಣಾ ಸಚಿವ ವೀ ಫೆಂಗ್‌ಹೆ ಅವರನ್ನು ಕಳೆದ ಜೂನ್‌ನಲ್ಲಿ ವಜಾಗೊಳಿಸಲಾಗಿದ್ದು, ಭ್ರಷ್ಟಾಚಾರ ಆರೋಪಗಳನ್ನು ಹೊತ್ತ ಒಟ್ಟು 9 ಹಿರಿಯ ಸೇನಾ ಜನರಲ್‌ಗಳನ್ನು ಡಿಸೆಂಬರ್ 2023ರಲ್ಲಿ ವಜಾಗೊಳಿಸಲಾಗಿದೆ. ವಿವಿಯೇಷನ್ ಕಾರ್ಪೊರೇಷನ್ ಆಫ್ ಚೀನಾ ಝೌ ಕ್ಸಿನ್‌ಮಿನ್‌ನಂತಹ ರಕ್ಷಣಾ ನಿಗಮಗಳ ಮುಖ್ಯಸ್ಥರನ್ನೂ ಹುದ್ದೆಯಿಂದ ವಜಾಗೊಳಿಸಲಾಗಿದೆ. ಚೀನಾ ನ್ಯಾಷನಲ್ ನ್ಯೂಕ್ಲಿಯರ್ ಕಾರ್ಪೊರೇಷನ್‌ನ ಯು ಜಿಯಾನ್‌ಫೆಂಗ್, ಜನರಲ್ ಮ್ಯಾನೇಜರ್ ಹಾವೊ ಝಾವೊಪಿಂಗ್, ಉಪ ಜನರಲ್ ಮ್ಯಾನೇಜರ್ ಯಾಂಗ್ ವೀ, ಚೀನಾ ಆರ್ಡನನ್ಸ್ ಎಕ್ವಿಪ್‌ಮೆಂಟ್ ಗ್ರೂಪ್‌ನ ಅಧ್ಯಕ್ಷ ಕ್ಸು ಕ್ಸಿಯಾನ್‌ಪಿಂಗ್ ಮತ್ತು ಚೀನಾ ಆರ್ಡನನ್ಸ್ ಇಂಡಸ್ಟ್ರಿ ಗ್ರೂಪ್‌ನ ಜನರಲ್ ಮ್ಯಾನೇಜರ್ ಲಿಯು ದಾಶನ್ ಸೇರಿದಂತೆ ಹಲವಾರು ಉನ್ನತ ಅಧಿಕಾರಿಗಳ ಪ್ರೊಫೈಲ್‌ಗಳನ್ನು ಕಂಪನಿ ವೆಬ್‌ಸೈಟ್‌ಗಳಿಂದ ತೆಗೆದುಹಾಕಲಾಗಿದೆ.

ಈ ಕುರಿತು ಮಾತನಾಡಿರುವ ಚಾಥಮ್ ಹೌಸ್‌ನ ಏಷ್ಯಾ-ಪೆಸಿಫಿಕ್ ಪ್ರೋಗ್ರಾಂನ ಹಿರಿಯ ಸಂಶೋಧನಾ ಸಹೋದ್ಯೋಗಿ ವಿಲಿಯಂ ಮ್ಯಾಥ್ಯೂಸ್, ಪಿಎಲ್‌ಎನಲ್ಲಿ ಗಮನಾರ್ಹ ಬದಲಾವಣೆ ತರಲು ಮುಂದಾಗಿರುವ ಅಧ್ಯಕ್ಷ ಕ್ಸಿ ಜಿನ್‌ಪಿಂಗ್, ಪ್ರಮುಖವಾಗಿ ಹಿರಿಯ ಮಿಲಿಟರಿ ಅಧಿಕಾರಿಗಳಲ್ಲಿ ಕಂಡುಬರುತ್ತಿರುವ ನಿಷ್ಠೆಯ ಕೊರತೆಯನ್ನು ನೀಗಿಸಲು ಬಯಸಿದ್ದಾರೆ ಎಂದು ಹೇಳಿ ದ್ದಾರೆ. ಚೀನಾದ ಮಿಲಿಟರಿ ಕೈಗಾರಿಕಾ ಸಾಮರ್ಥ್ಯವು ಅಮೆರಿಕಕ್ಕಿಂತ ಹೆಚ್ಚಾಗಿದ್ದು, ಅದರ ಶಸ್ತ್ರಾಸ್ತ್ರಗಳು ಪಶ್ಚಿಮ ಪೆಸಿಫಿಕ್‌ನಲ್ಲಿರುವ ಅಮೆರಿಕನ್ ಸೇನಾ ನೆಲೆಗಳಿಗೆ ನಿಜ ವಾದ ಬೆದರಿಕೆಗಳನ್ನು ಪ್ರತಿನಿಧಿಸುತ್ತವೆ. ಆದಾಗ್ಯೂ, ಪರಿಣಾಮಕಾರಿ ಕಮಾಂಡ್ ರಚನೆಯ ಕೊರತೆ ಚೀನಾದ ಈ ಮೇಲುಗೈಯನ್ನು ಮರೆಮಾಚುತ್ತಿದೆ. ಇದೇ ಕಾರಣಕ್ಕೆ ಕ್ಸಿ ಜಿನ್‌ಪಿಂಗ್ ಪಿಎಲ್‌ಎನಲ್ಲಿ ವ್ಯಾಪಕ ಬದಲಾವಣೆಗೆ ಮುಂದಡಿ ಇಟ್ಟಿದ್ದಾರೆ ಎಂದು ವಿಲಿ ಯಂ ಮ್ಯಾಥ್ಯೂಸ್ ವಿಶ್ಲೇಷಿಸಿದ್ದಾರೆ. ವ್ಯವಸ್ಥಿತ ಭ್ರಷ್ಟಾಚಾರ, ನಿಷ್ಠೆ ಮತ್ತು ನಿಯಂತ್ರಣದ ಮೇಲಿನ ಕಾಳಜಿಗಳು ಕ್ಸಿ ಅವರನ್ನು ಪಿಎಲ್‌ಎ ಮತ್ತು ಅದರ ಸಂಬಂಧಿತ ಕೈಗಾರಿಕಾ ಸಂಕೀರ್ಣದ ವ್ಯಾಪಕ ಶುದ್ಧೀಕರಣಕ್ಕೆ ಒತ್ತಾಯಿಸುತ್ತಿವೆ. ಜೊತೆಗೆ ಹೊಸ ಮಿಲಿಟರಿ ತಂತ್ರಜ್ಞಾನದ ಯುಗ ಕ್ಕಾಗಿ ಪಿಎಲ್‌ಎಯನ್ನು ಸನ್ನದ್ಧಗೊಳಿಸುವುದು ಕ್ಸಿ ಜಿನ್‌ಪಿಂಗ್ ಅವರ ಉದ್ದೇಶವಾಗಿದೆ ಎಂದು ವಿಲಿಯಂ ಮ್ಯಾಥ್ಯೂಸ್ ಅಂದಾಜಿಸಿದ್ದಾರೆ.

ತೈವಾನ್‌ಅನ್ನು ವಶಪಡಿಸಿಕೊಂಡು ಅದನ್ನು ಸಿಸಿಪಿಯ ಭಾಗವಾಗಿ ಮಾಡುವುದು ಕ್ಸಿ ಜಿನ್ ಪಿಂಗ್ ಅವರ ಮಹತ್ವಾಕಾಂಕ್ಷಿ ಯೋಜನೆಯಾಗಿದೆ. ಇದು ಯಶಸ್ವಿಯಾಗಬೇಕಾದರೆ ಪಿಎಲ್‌ಎ ಸೈನಿಕರ ನಿಷ್ಠೆ ಪ್ರಶ್ನಾತೀತವಾಗಿರಬೇಕು ಎಂದು ಕ್ಸಿ ಜಿನ್‌ಪಿಂಗ್ ಬಯಸುತ್ತಾರೆ. ಇದಕ್ಕಾಗಿ ಪಿಎಲ್‌ಎ ಸೈನಿಕರಿಗಾಗಿ ಕಲಿಕೆ, ಸೈದ್ಧಾಂತಿಕ ಪರಿವರ್ತನೆಯನ್ನು ಬಲಪಡಿಸುವ ಪ್ರಾಯೋಗಿಕ ಶಿಬಿರಗಳನ್ನು ಆಯೋಜಿಸಲು ಕ್ಸಿ ಜಿನ್‌ಪಿಂಗ ನಿರ್ಧರಿಸಿದ್ದಾರೆ ಎಂದು ಹೇಳಿದ್ದಾರೆ.

ಸಮರ್ಥ ಪಡೆಯ ನಿರ್ಮಾಣ

ಚೀನಾದ ಪೀಪಲ್ಸ್ ಲಿಬರೇಷನ್ ಆರ್ಮಿ(ಪಿಎಲ್‌ಎ)ಯ ಸೈನಿಕರಲ್ಲಿ ದೇಶ ನಿಷ್ಠೆಯ ಕೊರತೆ ಎದ್ದು ಕಾಣುತ್ತಿದೆ ಎಂದು ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅನುಮಾನ ವ್ಯಕ್ತಪಡಿಸಿದ್ದಾರೆ. ಈ ಕಾರಣಕ್ಕೆ ಪಿಎಲ್‌ಎ ಸೈನಿಕರಿಗಾಗಿ ಬೃಹತ್ ಶೈಕ್ಷಣಿಕ ಶಿಬಿರಗಳನ್ನು ಆಯೋಜಿಸಲು ಕ್ಸಿ ಜಿನ್‌ಪಿಂಗ್ ಮುಂದಾಗಿದ್ದಾರೆ. ತೈವಾನ್ ವಶಪಡಿಸಿಕೊಳ್ಳುವ ತಮ್ಮ ಮಹತ್ವಾಕಾಂಕ್ಷಿ ಯೋಜನೆಗೆ ದೇಶ ನಿಷ್ಠೆಯುಳ್ಳ ಸೈನಿಕರನ್ನು ಒಳಗೊಂಡ ಸಮರ್ಥ ಪಡೆಯ ನಿರ್ಮಾಣಕ್ಕೆ ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಮುಂದಾಗಿದ್ದಾರೆ.

- **ಪಿಎಲ್‌ಎನಲ್ಲಿ ಮಹತ್ತರ ಬದಲಾವಣೆಗೆ ಮುಂದಾದ ಕ್ಸಿ ಜಿನ್‌ಪಿಂಗ್**
- **ಪಿಎಲ್‌ಎ ಸೈನಿಕರ ದೇಶನಿಷ್ಠೆ ಬಗ್ಗೆ ಅನುಮಾನ ವ್ಯಕ್ತಪಡಿಸಿದ ಚೀನಾ ಅಧ್ಯಕ್ಷ**
- **ಪಿಎಲ್‌ಎ ಸೈನಿಕರ ತಲೆಗೆ ಗ್ರೇಟರ್ ಚೀನಾ ಸಿದ್ಧಾಂತದ ಹುಳ ಬಿಡಲಿದ್ದಾರೆ.**

ಬಾಂಗ್ಲಾದಲ್ಲಿ ಆಪರೇಷನ್ ಡೆವಿಲ್ ಹಂಟ್ ಶುರು

ಢಾಕಾ: ಬಾಂಗ್ಲಾ ದೇಶದಲ್ಲಿ ಹಿಂಸಾಚಾರ ನಡೆಸುತ್ತಿರುವವರನ್ನು ಹತ್ತಿಕ್ಕಲು ಅಲ್ಲಿನ ಸರ್ಕಾರ ಆಪರೇಷನ್ ಡೆವಿಲ್ ಹಂಟ್ ಕಾರ್ಯಾಚರಣೆ ಆರಂಭಿಸಿದೆ. ಪದಚ್ಯುತ ಪ್ರಧಾನಿ ಶೇಖ್ ಹಸೀನಾ ಕುಟುಂಬ ಮತ್ತು ಅವರ ಪಕ್ಷದ ಅವಾಮಿ ಲೀಗ್ನ ನಾಯಕರಿಗೆ ಸೇರಿದ ಆಸ್ತಿಗಳನ್ನು ಗುರಿಯಾಗಿಸಿಕೊಂಡು ಬಾಂಗ್ಲಾ ದೇಶದಾದ್ಯಂತ ಹಿಂಸಾಚಾರದ ಹೊಸ ಅಲೆಯನ್ನು ನಿಭಾಯಿಸಲು ಭದ್ರತಾ ಪಡೆಗಳು ರಾಷ್ಟ್ರವ್ಯಾಪಿ ಜಂಟಿ ಪಡೆಗಳ ಕಾರ್ಯಾಚರಣೆಯ ಅಡಿಯಲ್ಲಿ 1,300 ಕ್ಕೂ ಹೆಚ್ಚು ವ್ಯಕ್ತಿಗಳನ್ನು ಬಂಧಿಸಲಾಗಿದೆ.

ಸರ್ಕಾರದ ಮುಖ್ಯ ಸಲಹೆಗಾರ ಮುಹಮದ್ ಯೂನಸ್ ನೇತತ್ವದ ಮಧ್ಯಂತರ ಸರ್ಕಾರವು ಢಾಕಾದ ಹೊರವಲಯದಲ್ಲಿರುವ ಗಾಜಿಪುರದಲ್ಲಿ ಅವಾಮಿ ಲೀಗ್ ನಾಯಕನ ನಿವಾಸದ ಮೇಲೆ ದಾಳಿಯ ಸಂದರ್ಭದಲ್ಲಿ ವಿದ್ಯಾರ್ಥಿ ಕಾರ್ಯಕರ್ತರು ಗಾಯಗೊಂಡ ಹಿಂಸಾತಕ ಘರ್ಷಣೆಯ ನಂತರ ಕಾರ್ಯಾಚರಣೆಯನ್ನು ಪ್ರಾರಂಭಿಸಿತು.

ಹಿಂಸಾಚಾರವು ನಂತರ ದೇಶದ ಇತರ ಭಾಗಗಳಿಗೆ ಹರಡಿತು, ಗುಂಪುಗಳು ಅವಾಮಿ ಲೀಗ್‌ನ ಚಿಹ್ನೆಗಳನ್ನು ಗುರಿಯಾಗಿಸಿಕೊಂಡವು. ಆರಂಭದಲ್ಲಿ ವಿದ್ಯಾರ್ಥಿಗಳ ನೇತತ್ವದ ಕೋಟಾ ವಿರೋಧಿ ಚಳುವಳಿಯಾಗಿ ಪ್ರಾರಂಭವಾದ ಹಿಂಸಾತಕ ಪ್ರತಿಭಟನೆಗಳ ಉತ್ತುಂಗದಲ್ಲಿ ಶೇಖ್ ಹಸೀನಾ ಅವರನ್ನು ಆಗಸ್ಟ್ 2024 ರಲ್ಲಿ ಪ್ರಧಾನಿ ಹುದ್ದೆಯಿಂದ ಹೊರಹಾಕಲಾಯಿತು.

ಯೂನಸ್ ಸರ್ಕಾರವು ನಂತರ ದೇಶದ ಅಧಿಕಾರವನ್ನು ವಹಿಸಿಕೊಂಡಿತು, ಇದು ಹಸೀನಾ ಅವರ ಅವಾಮಿ ಲೀಗ್ ಸದಸ್ಯರು, ಯೂನಸ್ ಸರ್ಕಾರದ ಬೆಂಬಲಿಗರ ನಡುವೆ ನಿರಂತರ ಹಿಂಸಾಚಾರಕ್ಕೆ ಕಾರಣವಾಗಿದೆ.

16 ಇಸ್ರೇಲಿ,566 ಪ್ಯಾಲಿಸ್ತೈನಿಯರ ಬಿಡುಗಡೆ

ಟೆಲ್ ಅವೀವಾ: ಇಸ್ರೇಲ್-ಹಮಾಸ್ ಕದನ ವಿರಾಮ ಒಪ್ಪಂದದ ಭಾಗವಾಗಿ 16 ಇಸ್ರೇಲಿ ಒತ್ತೆಯಾಳುಗಳು ಮತ್ತು 566 ಪ್ಯಾಲೆಸ್ಟೀನಿಯನ್ ಕೈದಿಗಳನ್ನು ಇಲ್ಲಿಯವರೆಗೆ ಬಿಡುಗಡೆ ಮಾಡಲಾಗಿದೆ. ಮೂರು ವಾರಗಳ ಅವಧಿಯಲ್ಲಿ ಕದನ ವಿರಾಮದ ಮೊದಲ ಹಂತದ ಅಂತ್ಯದ ವೇಳೆಗೆ, 33 ಒತ್ತೆಯಾಳುಗಳು ಮತ್ತು 1,900 ಕೈದಿಗಳನ್ನು ಬಿಡುಗಡೆ ಮಾಡಲಾಗಿದೆ ಎಂದು ನಿರೀಕ್ಷಿಸಲಾಗಿದೆ. 33ಮಂದಿ ಒತ್ತೆಯಾಳುಗಳ ಪೈಕಿ ಎಂಟು ಮಂದಿ ಸತ್ತಿದ್ದಾರೆ ಎಂದು ಇಸ್ರೇಲ್ ಹೇಳುತ್ತದೆ. 2023ರ ಅಕ್ಟೋಬರ್ 7ರಂದು ಇಸ್ರೇಲ್ ಮೇಲೆ ದಾಳಿ ಮಾಡಿದಾಗ 251 ಒತ್ತೆಯಾಳುಗಳನ್ನು ವಶಪಡಿಸಿಕೊಂಡಿತು ಮತ್ತು ಸುಮಾರು 1,200 ಜನರನ್ನು ಕೊಂದಿತು, ಇದರಿಂದ ಗಾಜಾ ಯುದ್ಧಕ್ಕೆ ಕಾರಣವಾಗಿತ್ತು.

ಪ್ಯಾಲೆಸ್ಟೀನಿಯನ್ನರ ಗುಂಪು ನೆಟ್‌ಜಾರಿಮ್ ಕಾರಿಡಾರ್‌ನಲ್ಲಿ ಹಾದುಹೋಗುತ್ತಿರುವುದು ಕಂಡುಬಂದಿದೆ ಹೆಚ್ಚಾಗಿ ತಮ್ಮ ಕೈಬಿಟ್ಟ ಮನೆಗಳಿಗೆ ತೆರಳಿ ಅವುಗಳ ಹುಡುಕಾಟ ನಡೆಸಿದ್ದಾರೆ. ನಾವು ನೋಡಿದ್ದು ಒಂದು ದುರಂತ, ಭಯಾನಕ ವಿನಾಶ.ಆಕ್ರಮಣ ಎಲ್ಲಾ ಮನೆಗಳು, ಅಂಗಡಿಗಳು, ತೋಟಗಳು,



ಮಸೀದಿಗಳು, ವಿಶ್ವವಿದ್ಯಾಲಯಗಳು ಮತ್ತು ನ್ಯಾಯಾಲಯವನ್ನು ನಾಶಪಡಿಸಿತು ಎಂದು ನೆಟ್‌ಜಾರಿಮ್‌ನ ಉತ್ತರಕ್ಕೆ ಅಲ್-ಮಗ್ರಾಕಾದ ನಿವಾಸಿ ಒಸಾಮಾ ಅಬು ಕಾಮಿಲ್ ಹೇಳಿದ್ದಾರೆ.

ದಕ್ಷಿಣ ಗಾಜಾದ ಖಾನ್ ಯೂನಿಸ್ ನಗರದಲ್ಲಿ ಒಂದು ವರ್ಷಕ್ಕೂ ಹೆಚ್ಚು ಕಾಲ ವಾಸಿಸಲು ಒತ್ತಾಯಿಸಲ್ಪಟ್ಟ 57 ವರ್ಷದ ವ್ಯಕ್ತಿ, ಈಗ ನಮ್ಮ ಮನೆಯ ಅವಶೇಷಗಳ ಪಕ್ಕದಲ್ಲಿ ನನಗೂ ನನ್ನ ಕುಟುಂಬಕ್ಕೂ ಟೆಂಟ್ ಹಾಕಲು ಯೋಜಿಸಿರುವುದಾಗಿ ಹೇಳಿದ್ದಾರೆ. ನೆಟ್‌ಜಾರಿಮ್ ಕಾರಿಡಾರ್‌ಗೆ ಆಗಮಿಸುವುದು ಬೆಳಿಗ್ಗೆಯವರೆಗೆ ತನಗೆ ಸಾವು ಎಂದರ್ಥ ಎಂದು ಮತ್ತೊಬ್ಬ ಪ್ಯಾಲೆಸ್ಟೀನಿಯನ್ ಪ್ರಜೆ ಮಹಮೂದ್ ಅಲ್-ಸರ್ಹಿ ತಿಳಿಸಿದ್ದಾರೆ.

ಇಸ್ರೇಲ್ ನಡೆಸಿದ ದಾಳಿಯಲ್ಲಿ ಕನಿಷ್ಠ 48,189 ಪ್ಯಾಲೆಸ್ಟೀನಿಯನ್ನರು ಸಾವನ್ನಪ್ಪಿದ್ದಾರೆ ಎಂದು ಗಾಜಾದ ಹಮಾಸ್ ನಡೆಸುತ್ತಿರುವ ಆರೋಗ್ಯ ಸಚಿವಾಲಯ ತಿಳಿಸಿದೆ. ಇಸ್ರೇಲ್ ದಾಳಿಯಿಂದ ಗಾಜಾದ ಸುಮಾರು ಮೂರನೇ ಎರಡರಷ್ಟು ಕಟ್ಟಡಗಳು ಹಾನಿಗೊಳಗಾಗಿವೆ ಅಥವಾ ನಾಶವಾಗಿವೆ ಎಂದು ವಿಶ್ವಸಂಸ್ಥೆ ಹೇಳಿದೆ.

ಹತ್ತಿರದ ಜೈತುನ್ ಪ್ರದೇಶದಲ್ಲಿರುವ ತನ್ನ ಮನೆಯನ್ನು ಉಲ್ಲೇಖಿಸಿ ನಮ್ಮ ನಾಶವಾದ ಮನೆಯನ್ನು ನಾನು ಮೊದಲ ಬಾರಿಗೆ ನೋಡಿದೆ ಎಂದು ಅವರು ಹೇಳಿದರು.

ಯುದ್ಧದ ಆರಂಭದಲ್ಲಿ ಇಸ್ರೇಲಿ ಮಿಲಿಟರಿ ಪ್ಯಾಲೆಸ್ಟೀನಿಯನ್ ಪ್ರದೇಶದ ಮೇಲೆ ಭೂ ಆಕ್ರಮಣವನ್ನು ಪ್ರಾರಂಭಿಸುವ ಮೊದಲು ಸಾಮೂಹಿಕ ಸ್ಥಳಾಂತರಿಸುವ ಆದೇಶಗಳನ್ನು ನೀಡಿದಾಗ, ಉತ್ತರ ಗಾಜಾದ ಸುಮಾರು 700,000 ನಿವಾಸಿಗಳು ದಕ್ಷಿಣ ಪ್ರದೇಶಗಳಿಗೆ ಪಲಾಯನ ಮಾಡಿದ್ದರು.

ವಿದ್ಯಾರ್ಥಿಗಳೊಂದಿಗೆ ಪ್ರಧಾನಿ ಮೋದಿ ಪರೀಕ್ಷಾ ಪೇ ಚರ್ಚೆ

ನವದೆಹಲಿ: ಜೀವನದಲ್ಲಿ ಅಂಕ ಗಳಿಸುವುದೇ ಮಹಾನ್ ಸಾಧನೆಯಾಗುವುದಿಲ್ಲ. ಅದಕ್ಕಿಂತಲೂ ಜ್ಞಾನ ಸಂಪಾದನೆ ಮಾಡುವುದು ಮುಖ್ಯ. ಸಮಯ ನಿರ್ವಹಣೆ, ಕಾರ್ಯತಂತ್ರ, ಸ್ಪರ್ಧಾತಕ ಯುಗಕ್ಕೆ ತಕ್ಕಂತೆ ಸಿದ್ಧರಾಗಬೇಕೆಂದು ಪ್ರಧಾನಿ ನರೇಂದ್ರಮೋದಿ ಅವರು ವಿದ್ಯಾರ್ಥಿಗಳಿಗೆ ಕರೆ ಕೊಟ್ಟಿದ್ದಾರೆ. ಪ್ರತಿ ವರ್ಷದಂತೆ ಪರೀಕ್ಷಾ ಸಮಯದಲ್ಲಿ ವಿದ್ಯಾರ್ಥಿಗಳ ಜೊತೆ ನಡೆಸುವ ಪರೀಕ್ಷಾ ಪೇ ಚರ್ಚಾದಲ್ಲಿ ಮಾತನಾಡಿದ ಅವರು ವಿದ್ಯಾರ್ಥಿಗಳಿಗೆ ಹಲವಾರು ವಿಷಯಗಳನ್ನು ಒತ್ತಿ ಹೇಳಿದರು. ನೀವು ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸುವುದು, ಡಿಸ್ಟಿಂಕ್ಷನ್‌ನಲ್ಲಿ ತೇರ್ಗಡೆಯಾಗುವುದೇ ನಿಮ ಗುರಿಯಾಗಿರಬಾರದು. ಯಶಸ್ಸು ಸಾಧಿಸುವವರು ನಿಮಗೆ ಆದರ್ಶರಾಗಬೇಕು. ಒಲಿಂಪಿಕ್ ವಿಜೇತೆ ಮೇರಿ ಕೋಮ್, ಪ್ಯಾರ ಒಲಿಂಪಿಕ್ ಚಿನ್ನದ ವಿಜೇತೆ ಅವಾನಿ ಲೇಕಾರ, ಆಧ್ಯಾತಿಕ ನಾಯಕ ಸದ್ಗುರು, ಚಿತ್ರನಟಿ ದೀಪಿಕಾ ಪಡುಕೋಣೆ, ವಿಕ್ರಮ್ ಮಸ್ಸಿ ಮತ್ತಿತರರು ನಿಮಗೆ ಆದರ್ಶಪ್ರಾಯರಾಗಬೇಕೆಂದು ಕಿವಿಮಾತು ಹೇಳಿದರು. ಪ್ರತಿಯೊಬ್ಬ ವಿದ್ಯಾರ್ಥಿಗಳು ಸಮಯ ಪಾಲನೆ ಮಾಡುವುದು ಅತ್ಯಗತ್ಯ. ಶಿಕ್ಷಕರು ನೀಡುವ ಪಾಠ ಚಟುವಟಿಕೆಗಳನ್ನು ಅಂದೆಯೇ ಕಲಿಯಬೇಕು. ತಂದೆತಾಯಿಗಳು ಒತ್ತಾಯ ಮಾಡುವ ಯಾವುದೇ ವಿಷಯಗಳ ಬಗ್ಗೆ ಗಮನ ನೀಡಬೇಡಿ.

ನಿಮಗೆ ನೀವು ಮನಸಾರೆ ಇಷ್ಟಪಡುವ ವಿಷಯಗಳ ಮೇಲೆ ಹೆಚ್ಚು ಗಮನಹರಿಸಬೇಕು. ಯಾವ ವಿಷಯಗಳನ್ನು ಎಷ್ಟು ಸಮಯದಲ್ಲಿ ಓದಬೇಕು ಎಂಬುದನ್ನು ಮೊದಲೇ ಖಾತ್ರಿಪಡಿಸಿಕೊಂಡು ಸಮಯ ನಿಗದಿಪಡಿಸಿಕೊಳ್ಳಿ ಎಂದು ಸಲಹೆ ಮಾಡಿದರು. ಶಿಕ್ಷಕರು ಕೂಡ ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ಇಂತಿಷ್ಟೇ ಅಂಕಗಳನ್ನು ತೆಗೆಯಬೇಕೆಂದು ಒತ್ತಡ ಹಾಕಬಾರದು.

ನೀವು ಪ್ರತಿಯೊಂದು ವಿಷಯಕ್ಕೂ ಶಿಕ್ಷಣ ತಜ್ಞರ ಸಲಹೆ ಕೇಳುವುದನ್ನು ಮೊದಲು ನಿಲ್ಲಿಸಿ ಅದನ್ನು ಮೀರಿ ಹೋದಾಗ ಮಾತ್ರ ಯಶಸ್ಸು ಸಾಧಿಸಲು ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ವಿದ್ಯಾರ್ಥಿಗಳಿಗೆ ಶಾಲೆಯಲ್ಲಿ ಉತ್ತಮವಾದ ಪರಿಸರವನ್ನು ಸೃಷ್ಟಿಸಬೇಕು. ಜೀವನದ ಮೌಲ್ಯಗಳನ್ನು ಅಳವಡಿಸಿಕೊಳ್ಳಲು ಒತ್ತು ನೀಡಬೇಕು. ಹಿರಿಯ ಆದರ್ಶಗಳನ್ನು ಪ್ರತಿದಿನ ತಿಳಿ ಹೇಳಬೇಕು. ಮೌಲ್ಯಯುತ ಜೀವನ ಏನೆಂಬುದನ್ನು ತಿಳಿ ಹೇಳಬೇಕು ಎಂದು ತಿಳಿಸಿದರು.ವಿದ್ಯಾರ್ಥಿಗಳು ಶೈಕ್ಷಣಿಕ ಪರೀಕ್ಷೆಗಳನ್ನೇ ನಿಜವಾದ ಕಲಿಕೆ ಎಂದು ತಪ್ಪಾಗಿ ಗ್ರಹಿಸಿದ್ದಾರೆ. ಪರೀಕ್ಷೆಯಲ್ಲಿ ಅಂಕ ಗಳಿಸುವುದಕ್ಕಷ್ಟೇ ತಯಾರಿ ಮಾಡಿಕೊಂಡರೆ ಸಾಲದು. ಜ್ಞಾನ ಗಳಿಸುವತ್ತಲೂ ಗಮನಹರಿಸಬೇಕು. ಇದಕ್ಕೆ ಕೇವಲ ಶಿಕ್ಷಕರು ಮಾತ್ರವಷ್ಟೇ ಅಲ್ಲ ಪೋಷಕರು ಕೂಡ ಕೈಜೋಡಿಸಬೇಕು ಎಂದು ಹೇಳಿದರು.

ನೀವು ಪ್ರಧಾನಿಯಾಗಿರದಿದ್ದರೆ ಮತ್ತು ಸಚಿವರಾಗಿದ್ದರೆ ನೀವು ಯಾವ ಇಲಾಖೆಯನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದಿರಿ ಎಂಬ ಪ್ರಶ್ನೆಗೆ ಉತ್ತರಿಸಿದ ಪ್ರಧಾನಿ, ಕೌಶಲ್ಯ ಬಹಳ ಮುಖ್ಯವಾದ ಕಾರಣ ನಾನು ಕೌಶಲ್ಯ ವಿಭಾಗವನ್ನು ಆಯ್ಕೆ ಮಾಡುತ್ತೇನೆ ಎಂದು ಹೇಳೀದರು. ಈ ಬಾರಿ ಪ್ರಧಾನಿ ನರೇಂದ್ರಮೋದಿ ಅವರ ಪರೀಕ್ಷಾ ಪೇ ಚರ್ಚೆಯಲ್ಲಿ 3.3 ಕೋಟಿ ವಿದ್ಯಾರ್ಥಿಗಳು, 20,71,000 ಶಿಕ್ಷಕರು ಹಾಗೂ 5.51 ಲಕ್ಷ ಪೋಷಕರು ಭಾಗಿಯಾಗಿದ್ದರು.

**ವಿದ್ಯಾರ್ಥಿಗಳು ಕೇವಲ ಓದುವುದು, ಬರೆಯುವುದಕ್ಕೆ ಮಾತ್ರ ಸೀಮಿತವಾಗಬೇಡಿ. ಉತ್ತಮ ಆರೋಗ್ಯ, ಹಿತಮಿತ ಆಹಾರ, ನಿದ್ರೆಯನ್ನು ಮಾಡುವುದನ್ನು ಮರೆಯ

ಸಾಧನೆಗೆ ವಿಶ್ವಾಸವನ್ನು ನಾಳೆಗೆ ಭರವಸೆ ತಂದವಳು



ಡೈನ್ ಸ್ಟಾರ್ ರಿಷಬ್ ಶೆಟ್ಟಿ ಅವರು ಮದುವೆ ಆ್ಯನಿವರ್ಸರಿ ಸಂಭ್ರಮದಲ್ಲಿದ್ದಾರೆ. ಪತ್ನಿ ಪ್ರಗತಿ ಶೆಟ್ಟಿಗೆ ಸ್ಪೆಷಲ್ ಮದುವೆ ವಾರ್ಷಿಕೋತ್ಸವಕ್ಕೆ ಶುಭಕೋರಿದ್ದಾರೆ. ಸಾಧನೆಗೆ ವಿಶ್ವಾಸವನ್ನು, ನಾಳೆಗೆ ಭರವಸೆಯನ್ನು ತಂದವಳು ಎಂದು ಪತ್ನಿಗೆ ಪ್ರೀತಿಯಿಂದ ರಿಷಬ್ ವಿಶ್ ಮಾಡಿದ್ದಾರೆ.

ನನ್ನ ಸಂಗಾತಿಯಾಗಿ ಹೃದಯಕ್ಕೆ ಒಲವನ್ನು, ಸಾಧನೆಗೆ ವಿಶ್ವಾಸವನ್ನು, ನಾಳೆಗೆ ಭರವಸೆಯನ್ನು ತಂದವಳು ನೀನು.

ಈ ಸಂಸಾರವೆಂಬ ಸಾರ್ಥಕತೆಯಲ್ಲಿ ನನ್ನ ಸಹನೆ, ಶಕ್ತಿ, ಸರ್ವಸ್ವಗಳಾಗಿ ಸದಾ ಜೊತೆಗಿರು ಎಂದು ಪತ್ನಿಗೆ ಮದುವೆ ಆ್ಯನಿವರ್ಸರಿಗೆ ರಿಷಬ್ ಶುಭ ಕೋರಿದ್ದಾರೆ. ಪ್ರಗತಿ ಶೆಟ್ಟಿ ಕೂಡ ಪತಿಗೆ ವಿಶೇಷವಾಗಿ ವಿಶ್ ಮಾಡಿದ್ದಾರೆ. ಕನಸುಗಳನ್ನು ಹಂಚಿಕೊಳ್ಳುವುದರಿಂದ ಹಿಡಿದು ಅವುಗಳನ್ನು ಒಟ್ಟಿಗೆ ರಚಿಸುವವರೆಗೆ ಪ್ರತಿ ವರ್ಷ, ನಮ್ಮ ಪ್ರಯಾ ಣವು ಇನ್ನಷ್ಟು ಮಾಂತ್ರಿಕವಾಗಿರುತ್ತದೆ. ನಿಮ್ಮ ಅಚಲ ಬೆಂಬಲ ಕ್ಕಾಗಿ, ನನ್ನ ಶಕ್ತಿಯಾಗಿದ್ದಕ್ಕಾಗಿ ಮತ್ತು ಈ ಸುಂದರ ಜೀವನ ಕ್ಕಾಗಿ ನಾವು ಸಿನಿಮಾದ ಅದರಾಚೆಗೆ ಒಟ್ಟಿಗೆ ನಿರ್ಮಿಸುತ್ತಿದ್ದೇವೆ. ನಿಮ್ಮೊಂದಿಗೆ ಈ ವಿಶೇಷ ಕನಸಿನ ಜೀವನಕ್ಕಾಗಿ ದೇವರಿಗೆ ಧನ್ಯವಾದಗಳು. ಲವ್ ಯು ಫಾರೆವರ್ ವಾರ್ಷಿಕೋತ್ಸವದ ಶುಭಾಶಯಗಳು ಎಂದು ಬರೆದುಕೊಂಡಿದ್ದಾರೆ. ಈ ಜೋಡಿಗೆ ಅಭಿ ಮಾನಿಗಳು ಶುಭಹಾರೈಸಿದ್ದಾರೆ. ಅಂದಹಾಗೆ, ಕಿರಿಕ್ ಪಾರ್ಟಿ ಸಕ್ಸಸ್ ಬಳಿಕ 2017ರಲ್ಲಿ ಪ್ರಗತಿ ಶೆಟ್ಟಿ ಜೊತೆ ರಿಷಬ್ ಶೆಟ್ಟಿ ದಾಂಪತ್ಯ ಜೀವನಕ್ಕೆ ಕಾಲಿಟ್ಟರು. ಕುಂದಾಪುರದಲ್ಲಿ ಆಪ್ತರು, ಗುರುಹಿರಿಯರ ಸಮ್ಮುಖದಲ್ಲಿ ಈ ಮದುವೆ ನಡೆಯಿತು.

ಪುಣ್ಯ ಸ್ನಾನ ಮಾಡಿದ ಪ್ರೇಮ್

ದೇಶದ ಕೋಟ್ಯಂತರ ಜನ ಉತ್ತರ ಪ್ರದೇಶದಲ್ಲಿ ನಡೆಯುತ್ತಿರುವ ಮಹಾ ಕುಂಭ ಮೇಳದಲ್ಲಿ ಭಾಗವಹಿಸಿ ಪುನೀತರಾಗುತ್ತಿದ್ದಾರೆ. ಹೀಗಿರುವಾಗ ಕನ್ನಡದ ನಟ ನೆನೆಪಿರಲಿ ಪ್ರೇಮ್ ಕೂಡ ಪುಣ್ಯ ಸ್ನಾನ ಮಾಡಿದ್ದಾರೆ. ಈ ಕುರಿತು ನಟ ಸೋಶಿಯಲ್ ಮೀಡಿಯಾದಲ್ಲಿ ಪೋಸ್ಟ್ ಕೂಡ ಹಂಚಿಕೊಂಡಿದ್ದಾರೆ.

ಕುಂಭ ಮೇಳ ಪುಣ್ಯ ಸ್ನಾನ. ಎಲ್ಲಾರ ಬಾಳು ಅಮೃತಮಯವಾಗಿರಲಿ ಎಂದು ಪ್ರೇಮ್ ಸೋಶಿಯಲ್ ಮೀಡಿಯಾದಲ್ಲಿ ಬರೆದುಕೊಂಡಿದ್ದಾರೆ. ಇದರೊಂದಿಗೆ ಪುಣ್ಯ ಸ್ನಾನದ ಫೋಟೋ ಕೂಡ ನಟ ಹಂಚಿಕೊಂಡಿದ್ದಾರೆ. ಇನ್ನೂ ಇತ್ತೀಚೆಗೆ ಕನ್ನಡದ ಕಲಾವಿದರಾದ ರಾಜ್ ಬಿ ಶೆಟ್ಟಿ, ನಿರೂಪಕಿ ಅನುಶ್ರೀ, ಕೆಜಿಎಫ್ ನಟಿ ಶ್ರೀ ನಿಧಿ ಶೆಟ್ಟಿ, ಬಿಗ್ ಬಾಸ್ ಸಾನ್ಯ ಅಯ್ಯರ್ ಸೇರಿದಂತೆ ಅನೇಕರು ಮಹಾ ಕುಂಭಮೇಳದಲ್ಲಿ ಭಾಗಿಯಾಗಿದ್ದರು.

ನಮ್ಮ ಸುತ್ತ ಒಳ್ಳೆಯ ಸ್ನೇಹಿತರಿರೋದು ಮುಖ್ಯ

ಸ್ಯಾಂಡಲ್‌ವುಡ್ ನಟಿ ಪವಿತ್ರಾ ಗೌಡ ಹಂಚಿಕೊಂಡಿರುವ ವಿಡಿಯೋವೊಂದು ಸೋಶಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ. ನಮ್ಮ ಸುತ್ತ ಒಳ್ಳೆಯ ಸ್ನೇಹಿತರು ಇರಬೇಕು ಎಂದು ಆಪ್ತರ ಬಗ್ಗೆ ಮನದಾಳ ಮಾತನ್ನು ಎಂದು ನಟಿ ಇನ್ಸ್ಟಗ್ರಾಂನಲ್ಲಿ ಹಂಚಿಕೊಂಡಿದ್ದಾರೆ. ನಮ್ಮ ಸುತ್ತ ಒಳ್ಳೆಯ ಸ್ನೇಹಿತರು ಇರೋದು ಎಷ್ಟು ಮುಖ್ಯ ಎಂಬುದನ್ನು ನಾನು ಕಲಿತೆ. ನಿಮ್ಮ ಜೊತೆ ಇದ್ದುಕೊಂಡು ಒಳ್ಳೆಯದನ್ನೇ ಮಾಡಲು ಪುಶ್ ಮಾಡುತ್ತಾರೆ. ನೀವು ಕೆಳಗೆ ಬೀಳಲು ಬಿಡುವುದಿಲ್ಲ. ನನಗೂ ಒಳ್ಳೆಯ ಫ್ರೆಂಡ್ಸ್ ಇದ್ದಾರೆ ಎಂದು ನಟಿ ರಾಶಿ ಖನ್ನಾ ಮಾತನಾಡಿರುವ ವಿಡಿಯೋನ ಪವಿತ್ರಾ ಶೇರ್ ಮಾಡಿಕೊಂಡಿದ್ದಾರೆ. ಒಳ್ಳೆಯದನ್ನು ಮಾಡುವ ಗೆಳೆಯರ ಜೊತೆ ಸದಾ ಇರಿ. ನಿಮ್ಮ ತಳ್ಳುವವರ ಜೊತೆ ಅಲ್ಲ. ನೀನು ನನ್ನನ್ನು ಭೇಟಿ ಮಾಡಿಯೇ ಇಲ್ಲ, ನೀನು ನನಗೆ ಸಮಯ ಕೊಡಲೇ ಇಲ್ಲ ಎಂದು ಹೇಳುವವರು ಗೆಳೆಯರಲ್ಲ. ಭೇಟಿ ಆಗದಿದ್ದರೂ ಪರವಾಗಿಲ್ಲ, ನಾನು ನಿನ್ನ ಪರವಾಗಿ ನಿಲ್ಲುತ್ತೇನೆ ಎನ್ನುವವರು ಸ್ನೇಹಿತರು ಎಂದು ವಿಡಿಯೋದಲ್ಲಿ ಹೇಳಲಾಗಿದೆ. ಇದನ್ನು ನಟಿ ಹಂಚಿಕೊಂಡಿದ್ದಾರೆ. ಈ ಮೂಲಕ ನಟಿ ಯಾರಿಗೆ ಟಾಂಗ್ ಕೊಟ್ರು ಎಂದು ಫ್ಯಾನ್ಸ್ ಸೋಶಿ ಯಲ್ ಮೀಡಿಯಾದಲ್ಲಿ ಚರ್ಚಿಸುತ್ತಿದ್ದಾರೆ. ಇನ್ನೂ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಬೇಲ್ ಸಿಕ್ಕಿಲೆ ಸದ್ಯ ಅವರು ಉದ್ಯಮದಲ್ಲಿ ತೊಡಗಿಸಿಕೊಂಡಿದ್ದಾರೆ. ಅವರ ಬೋಟಿಕ್ ಹೆಚ್ಚಿನ ಗಮನ ವಹಿಸುತ್ತಿದ್ದಾರೆ.

ಕಳ್ಳನಿಗೂ ಕರುಣೆ ತೋರಿಸಿದ ಸೈಫ್

ನಟ ಸೈಫ್ ಅಲಿ ಖಾನ್ ಅವರು ತಮ್ಮ ಮನೆಯಲ್ಲಿ ನಡೆದ ಭೀಕರ ಘಟನೆಯ ಬಗ್ಗೆ ಮೊದಲ ಬಾರಿಗೆ ಮಾತನಾಡಿದ್ದಾರೆ. ಮಾಧ್ಯಮವೊಂದಕ್ಕೆ ನೀಡಿದ ಸಂದರ್ಶನದಲ್ಲಿ ಹಲವು ವಿಷಯಗಳ ಬಗ್ಗೆ ಪ್ರತಿಕ್ರಿಯಿಸಿದ್ದಾರೆ. ತಮ್ಮ ಮನೆಗೆ ನುಗ್ಗಿ ಚಾಕು ಹಾಕಿದ ಕಳ್ಳನ ಬಗ್ಗೆಯೂ ಅವರು ಕರುಣೆ ತೋರಿದ್ದಾರೆ. ಆ ಬಗ್ಗೆ ಇಲ್ಲಿದೆ ಮಾಹಿತಿ.

ಕಳ್ಳರ ದಾಳಿ ವೇಳೆ ಚೂರಿ ಇರಿತಕ್ಕೆ ಒಳಗಾದ ಸೈಫ್ ಅಲಿ ಖಾನ್ ಅವರು ಈಗ ಚೇತರಿಸಿಕೊಂಡಿದ್ದಾರೆ. ತಮ್ಮ ಮನೆಯಲ್ಲಿ ನಡೆದ ಆ ಕಹಿ ಘಟನೆಯ ಬಗ್ಗೆ ಇದೇ ಮೊದಲ ಬಾರಿಗೆ ಅವರು ಪ್ರತಿಕ್ರಿಯೆ ನೀಡಿದ್ದಾರೆ. ಡೆಲ್ಲಿ ಟೈಮ್ಸ್'ಗೆ ನೀಡಿದ ಸಂದರ್ಶನದಲ್ಲಿ ಅವರು ಅನೇಕ ವಿಚಾರಗಳನ್ನು ಹಂಚಿಕೊಂಡಿದ್ದಾರೆ. ಕದಿಯಲು ಮನೆಯೊಳಗೆ ನುಗ್ಗಿದ್ದ ಕಳ್ಳ ದಾಳಿ ಮಾಡಿದಾಗ ಸೈಫ್ ಅವರಿಗೆ ಹಲವು ಗಾಯಗಳು ಆಗಿದ್ದವು. ಅವರನ್ನು ಕೂಡಲೇ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಹಾಗಿದ್ದರೂ ಕೂಡ ಆ ಕಳ್ಳನ ಬಗ್ಗೆ ಸೈಫ್ ಅಲಿ ಖಾನ್ ಅವರು ಕರುಣೆ ತೋರಿಸಿದ್ದಾರೆ.

ಸೈಫ್ ಅಲಿ ಖಾನ್ ಅವರು ಇನ್ನುಂದೆ ಹೆಚ್ಚು ಎಚ್ಚರಿಕೆಯಿಂದ ಇರಬೇಕು. ತಮ್ಮ ರಕ್ಷಣೆಗಾಗಿ ವೆಪನ್ ಇಟ್ಟುಕೊಳ್ಳಬೇಕು ಎಂದು ಕೆಲವರು ಅಭಿಪ್ರಾಯ ತಿಳಿಸಿದ್ದುಂಟು. ಆ ಬಗ್ಗೆ ಕೇಳಿದ ಪ್ರಶ್ನೆಗೆ ಸೈಫ್ ಉತ್ತರಿಸಿದ್ದಾರೆ. ಏನೂ ಬದಲಾಗಲ್ಲ. ನನಗೆ ಅಪಾಯ ಇದೆ ಎಂದು ನಾನು ಭಾವಿಸಿಲ್ಲ. ಕಳ್ಳ ಪ್ಲ್ಯಾನ್ ಮಾಡಿ ಈ ದಾಳಿ ಮಾಡಿಲ್ಲ. ನನಗೆ ಅನಿಸಿದ ಹಾಗೆ ಆತನ ದರೋಡೆ ಪ್ರಯತ್ನ ವಿಫಲ ಆಗಿದೆ. ಆತ ಪಾಪ. ನನಗಿಂತಲೂ ಅವನ ಜೀವನ ಹಾಳಾಗಿದೆ' ಎಂದು ಸೈಫ್ ಅಲಿ ಖಾನ್ ವಿವರಿಸಿದ್ದಾರೆ. ಸಾಮಾನ್ಯವಾಗಿ ಇಂಥ ಘಟನೆಗಳು ನಡೆದ ಬಳಿಕ ಸೆಲೆಬ್ರಿಟಿಗಳು, ಉದ್ಯಮಿಗಳು ತಮ್ಮ ರಕ್ಷಣೆಗಾಗಿ ಗನ್ ಇಟ್ಟುಕೊಳ್ಳಲು ಬಯಸುತ್ತಾರೆ. ಆದರೆ ಸೈಫ್ ಅಲಿ ಖಾನ್ ಅವರು ಗನ್ ಸಹವಾಸವೇ ಬೇಡ ಎನ್ನುತ್ತಿದ್ದಾರೆ. ಒಂದು ವೇಳೆ ಮನೆಯಲ್ಲಿ ಗನ್ ಇದ್ದರೆ ಅದನ್ನು ಮಕ್ಕಳು ಮುಟ್ಟುವ ಸಾಧ್ಯತೆ ಇರುತ್ತದೆ. ಗನ್ ಇದ್ದಲ್ಲಿ ಅಪಾಯ ಖಂಡಿತವಾಗಿಯೂ ಇರುತ್ತದೆ ಎಂಬ ಕಾರಣದಿಂದ ಸೈಫ್ ಅಲಿ ಖಾನ್ ಅವರು ಗನ್ ಇಟ್ಟುಕೊಳ್ಳುವುದಿಲ್ಲ ಎಂದಿದ್ದಾರೆ.

ಸಿಟಿ ಲೈಟ್ಸ್ ಸಿನಿಮಾಗೆ ಚಾಲನೆ

ಮೋನಿಷಾ, ವಿನಯ್ ರಾಜ್‌ಕುಮಾರ್ ಅವರು ಸಿಟಿ ಲೈಟ್ಸ್ ಸಿನಿಮಾದ ಪೋಸ್ಟರ್‌ನಲ್ಲಿ ಡಿಫ ರೆಂಟ್ ಗೆಟಪ್ ಧರಿಸಿದ್ದಾರೆ. ದುನಿಯಾ ವಿಜಯ್ ನಿರ್ದೇಶನ ಮಾಡುತ್ತಿರುವ ಈ ಚಿತ್ರಕ್ಕೆ ಬೆಂಗಳೂರಿನಲ್ಲಿ ಅದ್ದೂರಿಯಾಗಿ ಮುಹೂರ್ತ ಮಾಡಲಾಗಿದೆ. ಈ ವೇಳೆ ಸಿನಿಮಾ ಬಗ್ಗೆ ಚಿತ್ರ ತಂಡ ದವರು ಒಂದಷ್ಟು ಮಾಹಿತಿ ಹಂಚಿಕೊಂಡರು. ಸಿಟಿ ಲೈಟ್ಸ್' ಸಿನಿಮಾದಲ್ಲಿ ದುನಿಯಾ ವಿಜಯ್ ಅವರ 2ನೇ ಮಗಳು ಮೋನಿಷಾ ನಾಯಕಿಯಾಗಿ ನಟಿಸುತ್ತಿದ್ದಾರೆ. ರಾಘವೇಂದ್ರ ರಾಜ್‌ಕುಮಾರ್ ಅವರ ಮಗ ವಿನಯ್ ರಾಜ್‌ಕುಮಾರ್ ನಾಯಕನಾಗಿದ್ದಾರೆ.

ಈ ಸಿನಿಮಾಗೆ ದುನಿಯಾ ವಿಜಯ್ ಅವರೇ ನಿರ್ದೇಶನ ಮಾಡುತ್ತಿರುವುದು ವಿಶೇಷ. ಸೋಮವರ ಈ ಚಿತ್ರಕ್ಕೆ ಬೆಂಗಳೂರಿನ ಬಂಡೆ ಮಹಾಕಾಳಿ ದೇವಸ್ಥಾನದಲ್ಲಿ ಮುಹೂರ್ತ ಮಾಡಲಾಗಿದೆ. ಅನೇಕ ಸೆಲೆಬ್ರಿಟಿಗಳು ಈ ಕಾರ್ಯಕ್ರಮದಲ್ಲಿ ಭಾಗಿ ಆಗಿದ್ದರು. ಸಿನಿಮಾ ಬಗ್ಗೆ ದುನಿಯಾ ವಿಜಯ್, ಮೋನಿಷಾ, ವಿನಯ್ ರಾಜ್‌ಕುಮಾರ್ ಮುಂತಾದವರು ಮಾತನಾಡಿದರು. ನಟನೆ, ನಿರ್ದೇಶನ ಹಾಗೂ ನಿರ್ಮಾಣದಲ್ಲಿ ದುನಿಯಾ ವಿಜಯ್ ಅವರು ಯಶಸ್ಸು ಕಂಡಿದ್ದಾರೆ. ಈಗ ಅವರ ಮಕ್ಕಳು ಕೂಡ ಚಿತ್ರರಂಗಕ್ಕೆ ಕಾಲಿಟ್ಟಿದ್ದಾರೆ.

ಮೊದಲ ಮಗಳು ಮೋನಿಕಾ ಬಳಿಕ 2ನೇ ಪುತ್ರಿ ಮೋನಿಷಾ ಕೂಡ ಬಣ್ಣದ ಲೋಕಕ್ಕೆ ಎಂಟ್ರಿ ನೀಡಿದ್ದಾರೆ.

ಅವರು ನಟಿಸಿರುವ ಸಿಟಿ ಲೈಟ್ಸ್ ಸಿನಿಮಾದ ಹೊಸ ಪೋಸ್ಟರ್ ಬಿಡುಗಡೆ ಆಗಿದ್ದು, ಪ್ರೇಕ್ಷಕರಲ್ಲಿ ಕುತೂಹಲ ಮೂಡಿಸಿದೆ.

ಸಿಟಿ ಲೈಟ್ಸ್ ಚಿತ್ರದ ಮುಹೂರ್ತ ಸಮಾರಂಭದಲ್ಲಿ ರಾಘವೇಂದ್ರ ರಾಜ್‌ಕುಮಾರ್ ಹಾಗೂ ಮಂಗಳಾ ಅವರು ಕ್ಲ್ಯಾಪ್ ಮಾಡಿ ಶುಭ ಹಾರೈಸಿದರು. ಸತೀಶ್ ನೀನಾಸಂ, ಯುವ ರಾಜ್‌ಕುಮಾರ್, ಪ್ರವೀಣ್ ತೇಜ್, ನವೀನ್ ಶಂಕರ್, ಲೂಸ್ ಮಾದ ಯೋಗಿ, ಬಿ. ಸುರೇಶ್, ಕೆ. ಮಂಜು. ಉಮಾಪತಿ, ಕೆ.ಪಿ. ಶ್ರೀಕಾಂತ್ ಸೇರಿದಂತೆ ಅನೇಕರು ಮುಹೂರ್ತ ಸಮಾರಂಭಕ್ಕೆ ಸಾಕ್ಷಿಯಾದರು. ಜವಾಬ್ ದಾರಿ ದೀಪಗಳು' ಎಂಬ ಟ್ಯಾಗ್ ಲೈನ್ ಈ ಸಿನಿಮಾದ ಶೀರ್ಷಿಕೆಗೆ ಇದೆ. ಈ ಸಿನಿಮಾ ಮೂಲಕ ವಿನಯ್ ರಾಜ್‌ಕುಮಾರ್ ಅವರು ಹೊಸ ಬಗೆಯ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ಊರಿನಿಂದ ಇಬ್ಬರು ಬೆಂಗಳೂರಿಗೆ ಬಂದ ನಂತರ ಏನೆಲ್ಲ ಕಷ್ಟ ಎದುರಿಸುತ್ತಾರೆ ಎಂಬುದೇ ಈ ಸಿನಿಮಾದ ಕಥೆ' ಎಂದು ವಿನಯ್ ರಾಜ್‌ಕುಮಾರ್ ಹೇಳಿದ್ದಾರೆ. ಮೋನಿಷಾ ಅವರು ಲಂಡನ್‌ನಲ್ಲಿ ನಟನೆಯ ಪಾಠ ಕಲಿತು ಬಂದಿದ್ದಾರೆ. 'ಸಿಟಿ ಲೈಟ್ಸ್' ಚಿತ್ರಕ್ಕಾಗಿ ತಯಾರಿ ಕೂಡ ಮಾಡಿಕೊಂಡಿರುವುದಾಗಿ ಅವರು ತಿಳಿಸಿದ್ದಾರೆ. ಕಾಕ್ರೋಚ್ ಸುಧಿ ಕೂಡ ಈ ಸಿನಿಮಾದಲ್ಲಿ ನಟಿಸುತ್ತಿದ್ದಾರೆ. ಈ ಸಿನಿಮಾಗೆ ಚರಣ್ ರಾಜ್ ಸಂಗೀತ ನಿರ್ದೇಶನ ಮಾಡುತ್ತಿದ್ದಾರೆ. ಮಾಸ್ತಿ ಸಂಭಾಷಣೆ ಬರೆಯುತ್ತಿದ್ದಾರೆ.

ಸಲಗ ಮತ್ತು ಭೀಮ ಸಿನಿಮಾಗಳ ಮೂಲಕ ಗೆದ್ದಿರುವ ದುನಿಯಾ ವಿಜಯ್ ಅವರು ಈಗ 'ಸಿಟಿ ಲೈಟ್ಸ್' ಮೂಲಕ ಮತ್ತೆ ನಿರ್ದೇಶಕನ ಹ್ಯಾಟ್ ಧರಿಸಿದ್ದಾರೆ.

ರನ್ ಸುನಾಮಿ ಎಬ್ಬಿಸಿದ ಕಿವೀಸ್ ಬ್ಯಾಟರ್

ಬೌಂಡರಿ ರೇಖೆ ಬಳಿ ವಿರಾಟ್ ಕೊಹ್ಲಿ- ಕೆವಿನ್ ಪೀಟರ್ಸನ್ ಚರ್ಚೆ

ವಿರಾಟ್ ಕೊಹ್ಲಿ ಅವರು ಲಂಡನ್ ನಲ್ಲಿ ಮನೆ ತೆಗೆದುಕೊಂಡು ವಾಸಿಸುತ್ತಿದ್ದಾರೆ ಎಂಬ ಬಗ್ಗೆ ಕಳೆದ ಕೆಲ ಕಾಲದಿಂದ ಚರ್ಚೆ ನಡೆಯುತ್ತಲೇ ಇದೆ. ಮಾಧ್ಯಮಗಳೂ ಈ ಬಗ್ಗೆ ವಿವಿಧ ಕೋನಗಳಲ್ಲಿ ವಿಚಾರ ವಿಮರ್ಶೆಗಳನ್ನು ನಡೆಸಿವೆ. ಇದೀಗ ವಿರಾಟ್ ಕೊಹ್ಲಿ ಮತ್ತು ಇಂಗ್ಲಂಡಿನ ಮಾಜಿ ಸ್ಟಾರ್ ಕ್ರಿಕೆಟಿಗ ಕೆವಿನ್ ಪೀಟರ್ಸನ್ ಅವರು ಕಟಕ್ ಪಂದ್ಯದ ವೇಳೆ ಮಾತನಾಡಿರುವುದು ವೀಕ್ಷಕರ ಕಣ್ಣು ಕುಕ್ಕಿದೆ. ವೀಕ್ಷಕ ವಿವರಣೆಕಾರರೂ ಈ ಬಗ್ಗೆ ಕೆಣಕಿಸಿದ್ದಾರೆ. ವಿರಾಟ್ ಕೊಹ್ಲಿ ಸಾಮಾನ್ಯಾವಾಗಿ ವಿಶ್ವದ ಎಲ್ಲಾ ಕ್ರಿಕೆಟಿಗರೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದಾರೆ. ಇಂಗ್ಲೆಂಡ್‌ನ ಮಾಜಿ ಸ್ಟಾರ್ ಆಟಗಾರ ಕೆವಿನ್ ಪೀಟರ್ಸನ್ ಮತ್ತು ವಿರಾಟ್ ಕೊಹ್ಲಿ ಪರಸ್ಪರ ಎದುರು ಗೊಂಡಾಗ ಬಹಳ ಹೊತ್ತು ಹರಟುತ್ತಾರೆ ಎಂಬುದು ತಿಳಿದೇ ಇರುವ ಸಂಗತಿ. ಇದೀಗ ಭಾರತ ಮತ್ತು ಇಂಗ್ಲೆಂಡ್ ನಡುವಿನ ಏಕದಿನ ಸರಣಿಯಲ್ಲೂ ಇವರಿಬ್ಬರು ಬೌಂಡರಿ ಗೆರೆ ಬಳಿ ನಿಂತು ಮಾತನಾಡಿದ್ದು ಇದೀಗ ಸುದ್ದಿಗೆ ಗ್ರಾಸವಾಗಿದೆ. ಕಟಕ್ ನಲ್ಲಿ ಇಂಗ್ಲೆಂಡ್ ಬ್ಯಾಟಿಂಗ್ ಮಾಡುತ್ತಿದ್ದ ವೇಳೆ ಬೌಂಡರಿ ರೇಖೆ ಬಳಿ ಫೀಲ್ಡಿಂಗ್ ನಡೆಸುತ್ತಿದ್ದ ವಿರಾಟ್ ಕೊಹ್ಲಿ ಅವರು ಕೆವಿನ್ ಪೀಟರ್ಸನ್ ಅವರ ಬಳಿ ಬಹಳ ಹೊತ್ತು ಗಂಭೀರವಾಗಿ ಮಾತನಾಡುತ್ತಿದ್ದರು. ಅವರೇನು ಮಾತನಾಡುತ್ತಿದ್ದರು ಎಂಬುದು ಯಾರಿಗೂ ತಿಳಿದಿಲ್ಲ. ಆದರೆ ಈ ಬಗ್ಗೆ ಮತ್ತೊಬ್ಬ ವೀಕ್ಷಕ ವಿವರಣೆಕಾರ, ಮಾಜಿ ಕ್ರಿಕೆಟಿಗ ಆಕಾಶ್ ಚೋಪ್ರಾ ಮಾತ್ರ ಪೀಟರ್ಸನ್ ಅವರ ಜೊತೆ ನ ಪ್ರಸಾರದಲ್ಲಿದ್ದಾಗ ಪ್ರಶ್ನಿಸಿಯೇ ಬಿಟ್ಟಿದ್ದಾರೆ.

ಕೆಣಕಿದ ಆಕಾಶ್ ಚೋಪ್ರಾ: ಕೊಹ್ಲಿ ಮತ್ತು ಪೀಟರ್ಸನ್ ಮಾತನಾಡುತ್ತಿದ್ದ ವೇಳೆ ಕಾಮೆಂಟರಿ ಬಾಕ್ಸ್ ನಲ್ಲಿ ಆಕಾಶ್ ಚೋಪ್ರಾ ಅವರು ಪರವಾಗಿಲ್ಲ, ಅವರು ಇದೀಗ ಹೆಚ್ಚಿನ ಸಮಯವನ್ನು ಅಲ್ಲಿಯೇ ಕಳೆಯುತ್ತಿದ್ದಾರೆ. ಹೀಗಾಗಿ ಲಂಡನ್ ನಲ್ಲಿ ಇರುವ ರಿಯಲ್ ಎಸ್ಟೇಟ್ ಮತ್ತು ಕೆಲ ಉತ್ತಮ ಸ್ಥಳಗಳ ಬಗ್ಗೆ ವಿಚಾರಿಸಿರಬಹುದು ಎಂದು ಹೇಳಿದ್ದಾರೆ. ಆನಂತರ ಕಾಮೆಂಟರಿ ಬಾಕ್ಸ್‌ಗೆ ಆಮಿಸಿದಿ ಕೆವಿನ್ ಅವರನ್ನು ಉದ್ದೇಶಿಸಿ, ಕೊಹ್ಲಿಯವರೇನು ನಿಮ್ಮ ಬಳಿಕ ಲಂಡನ್ ನ ರಿಯಲ್ ಎಸ್ಟೇಟ್ ನ ವಿಚಾರಗಳನ್ನು ತಿಳಿದುಕೊಳ್ಳುತ್ತಿದ್ದರೇ ಎಂದು ಪ್ರಶ್ನಿಸಿದ್ದಾರೆ. ಈ ಪ್ರಶ್ನೆಯಿಂದ ಕೆವಿನ್ ಕೊಂಚ ಇರುಸುಮುರುಸಾಗಿದೆ. ಈ ರೀತಿಯೆಲ್ಲಾ ಯಾವತ್ತೂ ಗ್ರಹಿಸಬೇಡಿ., ನಾನೂ ಈ ರೀತಿ ಕಲ್ಪನೆಗಳನ್ನು ಮಾಡಬಹುದು. ಆದರೆ ಇಲ್ಲಿ ಮಾಡಲಾರೆ ಎಂದರು.

ಗಾಲ್ಫ್ ಬಗ್ಗೆ ವಿರಾಟ್ ಗೆ ಟಿಪ್ಸ್ : ಈ ವೇಳೆ ಕಾಮೆಂಟರಿ ಬಾಕ್ಸ್ ನಲ್ಲಿದ್ದ ಮತ್ತೊಬ್ಬ ಮಾಜಿ ಕ್ರಿಕೆಟಿಗ ಸುರೇಶ್ ರೈನಾ ಅವರು, ಹಾಗಿದ್ದರೆ ನೀವು ಗಾಲ್ಫ್ ಆಟದ ಕುರಿತು ಚರ್ಚೆ ನಡೆಸುತ್ತಿದ್ದೀರಿ ಎಂದು ಅನ್ನಿಸುತ್ತಿದೆ. ನೀವು ಕ್ರಿಕೆಟ್ ನಿಂದ ನಿವೃತ್ತಿಗೊಂಡ ಬಳಿಕ ಗಾಲ್ಫ್ ಹೆಚ್ಚು ಆಡುತ್ತಿದ್ದೀರಿ'' ಎಂದು ತಿಳಿಸಿದರು. ಇದಕ್ಕೆ ಸಕಾರಾತ್ಮಕವಾಗಿ ಉತ್ತರಿಸಿದ ಪೀಟರ್ಸನ್, ನೀವು ಬಹಳ ಹತ್ತಿರದಲ್ಲಿ ಇದ್ದೀರಿ. ನೀವು ಗಾಲ್ಫ್ ಆಡಲು ಶುರು ಮಾಡಿ. ಅದೊಂದು ಶ್ರೇಷ್ಠ ಆಟ ಎಂದು ಕೊಹ್ಲಿಗೆ ಹೇಳಿರುವುದಾಗಿ ತಿಳಿಸಿದರು. ಅಲ್ಲಿಗೆ ಆ ಚರ್ಚೆಗೆ ವಿರಾಮ ಬಿತ್ತು. ವಿರಾಟ್ ಕೊಹ್ಲಿ ಅವರು ಲಂಡನ್ ನಲ್ಲಿ ಮನೆ ಖರೀದಿಸಿದ್ದು ನಿವೃತ್ತಿಯ ಬಳಿಕ ಅಲ್ಲೇ ವಾಸಿಸುತ್ತಾರೆ ಎಂಬ ವದಂತಿ ಇದೀಗ ಹೆಚ್ಚಾಗುತ್ತಿದ್ದು ದೇಶಾದ್ಯಂತ ಈ ಬಗ್ಗೆ ಚರ್ಚೆಯಾಗುತ್ತಿದೆ. ವಿರಾಟ್ ಕೊಹ್ಲಿ- ಅನುಷ್ಕಾ ಶರ್ಮಾ ದಂಪತಿಯ ಪುತ್ರ ಅಕಾಯ್ ಹುಟ್ಟಿದ್ದು ಸಹ ಲಂಡನ್ ನಲ್ಲೇ. ಅಷ್ಟೇ ಅಲ್ಲದೆ ಇತ್ತೀಚೆಗೆ ವಿರಾಟ್ ಅವರು ಸಹ ಲಂಡನ್ ನ ಚಿತ್ರಗಳನ್ನು ತಮ್ಮ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುತ್ತಿದ್ದಾರೆ.

ಲೆಜೆಂಡ್ 90 ಲೀಗ್‌ನಲ್ಲಿ ಛತ್ತೀಸ್‌ಗಢ ವಾರಿಯರ್ಸ್ ಪರ ಆಡುತ್ತಿರುವ ಗಪ್ಟಿಲ್, 49 ಎಸೆತಗಳಲ್ಲಿ 160 ರನ್‌ಗಳ ಸ್ಫೋಟಕ ಬ್ಯಾಟಿಂಗ್ ಪ್ರದರ್ಶಿಸಿದ್ದಾರೆ. ಇದರೊಂದಿಗೆ ಛತ್ತೀಸ್‌ಗಢ ವಾರಿಯರ್ಸ್ ತಂಡವು 240 ರನ್‌ಗಳ ಬೃಹತ್ ಮ